ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 25 ಭಾನುವಾರ 2024

ಸಂಪುಟ: 44 | ಸಂಚಿಕೆ: 308 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೂರು ವರ್ಷ ಒಂದೇ ಕಡೆ ಇರುವ ಅಧಿಕಾರಿಗಳ

ತಕ್ಷಣ ವರ್ಗಾಯಿಸಿ

- ರಾಜ್ಯ ಸರ್ಕಾರಕ್ಕೆ ಚುನಾವಣಾ ಆಯೋಗ ತಾಕೀತು
- 'ಶಾಸ್ತ್ರ'ಕ್ಕೆ ವರ್ಗಾವಣೆ ಮಾಡಿರುವುದು ಸರಿಯಲ್ಲ: ಎಚ್ಚರಿಕೆ



ಬೆಂಗಳೂರು, ಫೆ.24(ಕೆಎಂಶಿ)– ಮೂರು ವರ್ಷಗಳಿಗಿಂತ ಹೆಚ್ಚು ಕಾಲ ಒಂದೇ ಕಡೆ ಇರುವ ಸರ್ಕಾರಿ ನೌಕರರು ಮತ್ತು ಅಧಿಕಾರಿಗಳನ್ನು ತಕ್ಷಣವೇ ವರ್ಗಾಯಿಸುವಂತೆ ಕೇಂದ್ರ ಚುನಾವಣಾ ಆಯೋಗ ರಾಜ್ಯ ಸರ್ಕಾರಕ್ಕೆ ಕಟ್ಟಾದೇಶ ಮಾಡಿದೆ.

ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಯನ್ನು ಸ್ಥಳದಿಂದ, ಸದರಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಿಂದ ಹೊರಗೆ ವರ್ಗಾವಣೆ ಮಾಡಬೇಕು. ಕೆಲವು ಸರ್ಕಾರಗಳು ನಮ್ಮ ಆದೇಶವನ್ನು ತಪ್ಪಾಗಿ ಅರ್ಥೈಸಿ ಕ್ಷೇತ್ರದ ವ್ಯಾಪ್ತಿಯ ಬೇರೆ ಸ್ಥಳಕ್ಕೆ ವರ್ಗಾವಣೆ ಇಲ್ಲವೇ ನಿಯೋಜನೆ ಮಾಡಿರುವುದು ಗಮನಕ್ಕೆ ಬಂದಿದೆ. ಮೂರು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿಯಿಂದ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಆಯಾ ಕ್ಷೇತ್ರದ ರಾಜಕಾರಣಿಗಳೊಂದಿಗೆ ಒಡನಾಟವಿರುತ್ತದೆ.

ಆಯೋಗ ಮುಕ್ತ ಮತ್ತು ನ್ಯಾಯಸಮ್ಮತವಾಗಿ ಚುನಾವಣೆ ನಡೆಸಬೇಕಾಗಿದೆ. ಇಂತಹ ಸಮಯದಲ್ಲಿ ನಮಗೆ ಅಧಿಕಾರಿಗಳ ಸಹಕಾರವೂ ಅಗತ್ಯ. ಒಂದೇ ಜಾಗದಲ್ಲಿ ಬಹಳ ಕಾಲ ಇರುವ ಅಧಿಕಾರಿಗಳನ್ನು ಮೊದಲು ನಮ್ಮ ನಿಯಮಾವಳಿ ಪ್ರಕಾರ ವರ್ಗಾವಣೆ ಮಾಡಿ, ಇದರಲ್ಲಿ ಯಾವುದೇ ರಾಜಿ ಇಲ್ಲ. ಚುನಾವಣಾ ಪ್ರಕ್ರಿಯೆ ಪೂರ್ಣಗೊಂಡ ನಂತರ ನಿಮ್ಮ ನೌಕರರು ಮತ್ತು ಅಧಿಕಾರಿಗಳನ್ನು ಎಲ್ಲಿಗಾದರೂ ವರ್ಗಾಯಿಸಿಕೊಳ್ಳಿ. ಆದರೆ, ಈಗ ಇಂತಹ ಅಧಿಕಾರಿಗಳು ಆ ಕ್ಷೇತ್ರದಲ್ಲೇ ಮುಂದುವರೆಯಬಾರದು ಅಷ್ಟೆ ಎಂದು ಸ್ಪಷ್ಟವಾಗಿ ತಿಳಿಸಿದೆ.

ಇತ್ತೀಚೆಗೆ ನಡೆದ ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಚುನಾವಣಾ ಆಯೋಗದ ಸೂಚನೆಗಳನ್ನು ಉಲ್ಲಂಘಿಸಿದ ಪ್ರಕರಣಗಳಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು ಸೇರಿದಂತೆ ಹಲವು ಉನ್ನತ ಮಟ್ಟದ ಅಧಿಕಾರಿಗಳ ವರ್ಗಾವಣೆಗೆ ಆದೇಶ ನೀಡಲಾಗಿತ್ತು ಎಂಬುದನ್ನು ಆಯೋಗ ನೆನಪಿಸಿದೆ.

ರಾಜ್ಯ ಸರ್ಕಾರಗಳು ಅಧಿಕಾರಿಗಳ ವರ್ಗಾವಣೆ ಸಂದರ್ಭದಲ್ಲಿ ಈ ಮೊದಲು ಅವರು ಕಾರ್ಯ ನಿರ್ವಹಿಸುತ್ತಿದ್ದ ಜಿಲ್ಲೆಗೆ ಒಳಪಡುವ ಇಲ್ಲವೇ ಲೋಕಸಭಾ ಕ್ಷೇತ್ರದ ವ್ಯಾಪ್ತಿಯೊಳಗೇ ಮತ್ತೊಂದು ಜಿಲ್ಲೆಗೆ ವರ್ಗಾವಣೆ ಮಾಡಿರುವ ನಿದರ್ಶನಗಳು ಚುನಾವಣಾ ಆಯೋಗದ ಗಮನಕ್ಕೆ ಬಂದಿದ್ದು, ಇಂತಹ ಪ್ರಕರಣಗಳಿಗೆ ಅವಕಾಶ ಮಾಡಿಕೊಡದಂತೆ ಎಚ್ಚರಿಕೆ ವಹಿಸಲು ಸೂಚಿಸಿದೆ. ಪ್ರಸಕ್ತ ಲೋಕಸಭಾ ಅವಧಿ ಮೇ ತಿಂಗಳ ಕೊನೆಯ ಭಾಗದಲ್ಲಿ ಮುಗಿಯುವುದರಿಂದ ಕೇಂದ್ರ ಚುನಾವಣಾ ಆಯೋಗ ಮುಂದಿನ ಲೋಕಸಭಾ ಅವಧಿಗೆ ಚುನಾವಣೆ ನಡೆಸಲು ಕಳೆದ ಆರು ತಿಂಗಳಿಂದ ಪೂರ್ವ ಸಿದ್ಧತೆ ನಡೆಸಿದೆ.

ಕಳೆದ ಮೂರು ತಿಂಗಳ ಹಿಂದೆಯೇ ರಾಜ್ಯ ಸರ್ಕಾರ ಅಧಿಕಾರಿಗಳ ವರ್ಗಾವರ್ಗಿಗಳನ್ನು ಸ್ಥಗಿತಗೊಳಿಸಿತ್ತು, ಇದರ ನಡುವೆ ಆಯೋಗದ ಸೂಚನೆ ಮೇರೆಗೆ ಜಿಲ್ಲಾ ವರಿಷ್ಠರು ಸೇರಿದಂತೆ ಪ್ರಮುಖ ಅಧಿಕಾರಿಗಳನ್ನು ವರ್ಗಾವಣೆ ಮಾಡಿಕೊಂಡು ಬಂದಿದೆ. ಇದೀಗ ಬಂದಿರುವ ಆಯೋಗದ ಆದೇಶದಿಂದ ಕೆಳಹಂತದ ಬಹುತೇಕ ಅಧಿಕಾರಿಗಳು ವರ್ಗಾವಣೆಗೊಳ್ಳಲಿದ್ದಾರೆ. ರಾಜ್ಯ ಸರ್ಕಾರ ಏಪ್ರಿಲ್ ತಿಂಗಳಲ್ಲಿ ಸಾರ್ವತ್ರಿಕ ವರ್ಗಾವರ್ಗಿ ಕೈಗೊಳ್ಳುತ್ತಿತ್ತು, ಆದರೆ ಈ ಬಾರಿ ಚುನಾವಣೆ ಇರುವುದರಿಂದ ಪ್ರಕ್ರಿಯೆ ಪೂರ್ಣಗೊಂಡ ನಂತರವೇ ತನ್ನ ನೌಕರರನ್ನು ವರ್ಗಾವಣೆ ಮಾಡಿಕೊಳ್ಳಬೇಕಿದೆ.

ಸಂವಿಧಾನ ಪರವಾಗಿರುವವರಲ್ಲಿ ಅಧಿಕಾರವಿರಬೇಕು: ಸಿಎಂ ಪ್ರತಿಪಾದನೆ

- ಆಗ ಸಂವಿಧಾನದ ಆಶಯಗಳು ಸಾಕಾರಗೊಳ್ಳುತ್ತವೆ
- ಸಂವಿಧಾನ ಮತ್ತು ರಾಷ್ಟ್ರೀಯ ಐಕ್ಯತಾ ಸಮಾವೇಶಕ್ಕೆ ಚಾಲನೆ




ಬೆಂಗಳೂರು, ಫೆ.24(ಕೆಎಂಶಿ)–ಸಂವಿಧಾನದ ರಕ್ಷಣೆಯಾದರೆ ನಾವೆಲ್ಲರೂ ಉಳಿಯುತ್ತೇವೆ, ಇಲ್ಲದಿದ್ದರೆ ಅಪಾಯಕ್ಕೆ ಸಿಲುಕುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸಂವಿಧಾನ ಮತ್ತು ರಾಷ್ಟ್ರೀಯ ಐಕ್ಯತಾ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ನಾವು ಸಂವಿಧಾನದ ಮಾಲೀಕರು, ಸಂವಿಧಾನ ಕಿತ್ತು ಎಸೆಯುವುದರಲ್ಲಿ ನಮ್ಮ ಆಸಕ್ತಿಯಿಲ್ಲ. ಸಂವಿಧಾನದ ವಿರುದ್ಧ ಇರುವವರನ್ನು ಕಿತ್ತು ಎಸೆಯಬೇಕು ಎಂಬುದು ಅಬ್ರಹಾಂ ಲಿಂಕನ್ ಅವರ ಮಾತುಗಳಾಗಿತ್ತು ಎಂದು ನೆನಪಿಸಿದರು. ಸಂವಿಧಾನದ ವಿರುದ್ಧ ಎರಡು ಅಪಪ್ರಚಾರಗಳು ನಡೆಯುತ್ತಿದ್ದು, ಸಂವಿಧಾನ ದಲಿತರ ಉದ್ಧಾರಕ್ಕಾಗಿದೆ ಹಾಗೂ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿಲ್ಲ ಎಂಬುದು ಒಂದು ಅಪಪ್ರಚಾರವಾದರೆ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವವನ್ನು ಸ್ಪಷ್ಟವಾಗಿ ಹೇಳುವ ಸಂವಿಧಾನದ ವಿರುದ್ಧ ನಡೆಯುತ್ತಿರುವುದು ಇನ್ನೊಂದು ರೀತಿಯ ಅಪಪ್ರಚಾರ. ಭಾರತೀಯ ಸಂವಿಧಾನವು 1950 ಜನವರಿ 26ರಿಂದ ಜಾರಿಗೆ ಬಂದಾಗಿನಿಂದ ಇಂತಹ ಅಪಪ್ರಚಾರಗಳು ನಡೆಯುತ್ತಿದೆ, ಇದನ್ನು ಯಾರೂ ಸಹಿಸಬಾರದು.

ಸಾಮಾಜಿಕ ಅಸಮಾನತೆಯನ್ನು ಅಳಿಸಿಹಾಕುವುದು ಎಲ್ಲ ಸರ್ಕಾರಗಳ ಜವಾಬ್ದಾರಿ. ದೇಶದಲ್ಲಿನ ಅಸಮಾನತೆ ತೊಲಗಿಸಬೇಕು. ವೈರುಧ್ಯದ ಸಮಾಜಕ್ಕೆ ಕಾಲಿಡುತ್ತಿದ್ದೇವೆ. ಸಾಮಾಜಿಕ, ಆರ್ಥಿಕ ಅಸಮಾನತೆಯುಳ್ಳ ಸಮಾಜದಲ್ಲಿ, ರಾಜಕೀಯ ಹಾಗೂ ಸಾಮಾಜಿಕ ತಳಹದಿಯ ಮೇಲೆ ನಿಂತಾಗ ಮಾತ್ರ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ. ಅಸಮಾನತೆಯಿಂದ ನರಳುವವರು ಪ್ರಜಾಪ್ರಭುತ್ವದ ● 9ನೇ ಪುಟಕ್ಕೆ

ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಲೋಕಸಭಾ ಚುನಾವಣಾ ವೇಳಾಪಟ್ಟಿ ನಕಲಿ



ಚುನಾವಣಾ ಆಯೋಗ ಸ್ಪಷ್ಟನೆ

ನವದೆಹಲಿ, ಫೆ. 24– ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ, ಮಾ.12ರಂದು ಲೋಕಸಭಾ ಚುನಾವಣಾ ವೇಳಾಪಟ್ಟಿ ಪ್ರಕಟವಾಗಲಿದೆ. ಏ.19ರಂದು ಮತದಾನ ನಡೆಯಲಿದೆ ಎಂಬ ಸುದ್ದಿ ನಕಲಿ ಎಂದು ಕೇಂದ್ರ ಚುನಾವಣಾ ಆಯೋಗ ಸ್ಪಷ್ಟಪಡಿಸಿದೆ.

ಇನ್ನೂ ಲೋಕಸಭೆಗೆ ಚುನಾವಣಾ ದಿನಾಂಕ ಹಾಗೂ ಯಾವುದೇ ಅಧಿಸೂಚನೆ ಹೊರಡಿಸಿಲ್ಲ ಎಂದು ಆಯೋಗ ಸ್ಪಷ್ಟಪಡಿಸಿರುವುದಲ್ಲದೇ, ಚುನಾವಣಾ ಆಯೋಗದ ಹೆಸರಿನಲ್ಲಿ ಹರಿದಾಡುತ್ತಿರುವ ಸಂದೇಶ ನಕಲಿ ಎಂದು ಹೇಳಿದೆ.

ದೇಶದ ಜನತೆಯಲ್ಲಿ ಈ ವಿಚಾರದಲ್ಲಿ ಯಾವುದೇ ಗೊಂದಲ ಬೇಡ. ಚುನಾವಣಾ ಆಯೋಗ ಸೂಕ್ತ ಸಮಯದಲ್ಲಿ ಪತ್ರಿಕಾಗೋಷ್ಠಿ ಮೂಲಕವೇ ವೇಳಾಪಟ್ಟಿ ಬಿಡುಗಡೆ ಮಾಡಲಿದೆ ಎಂದು ತಿಳಿಸಿದೆ. ಸಾಮಾಜಿಕ ಜಾಲತಾಣದಲ್ಲಿ 2024ರ ಲೋಕಸಭಾ ಚುನಾವಣಾ ಅಧಿಸೂಚನೆ ಮಾರ್ಚ್ 12ರಂದು ಪ್ರಕಟವಾಗಲಿದೆ. ಅದರನ್ವಯ ಮಾರ್ಚ್ 28ರಂದು ನಾಮಪತ್ರಗಳ ಸಲ್ಲಿಕೆಯಾಗಲಿದ್ದು, ಏಪ್ರಿಲ್ 19ರಂದು ಮತದಾನ ನಡೆಯಲಿದೆ ಹಾಗೂ ಮೇ 22ರಂದು ಮತ ಎಣಿಕೆ ನಡೆದು ಫಲಿತಾಂಶ ಪ್ರಕಟಗೊಳ್ಳಲಿದೆ. ಮೇ 30ರಂದು ನೂತನ ಸರ್ಕಾರ ರಚನೆಯಾಗಲಿದೆ ಎಂದು ವೇಳಾಪಟ್ಟಿ ಹರಿದಾಡುತ್ತಿತ್ತು. ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಚುನಾವಣಾ ಆಯೋಗ ಸ್ಪಷ್ಟನೆ ನೀಡಿದ್ದು, ಇದೊಂದು ನಕಲಿ ಸಂದೇಶ ಎಂದು ಹೇಳಿದೆ.

ನಾಳೆ ವರ್ಚುಯಲ್ ಮೂಲಕ ಪ್ರಧಾನಮಂತ್ರಿಗಳಿಂದ

ಮೈಸೂರು ವಿಭಾಗದ 367.24 ಕೋಟಿಯ ರೈಲ್ವೆ ಯೋಜನೆಗೆ ಶಂಕುಸ್ಥಾಪನೆ

ಮೈಸೂರು, ಫೆ.24(ಆರ್‌ಕೆ)– ಪ್ರಧಾನಮಂತ್ರಿ ನರೇಂದ್ರ ಮೋದಿ ಫೆಬ್ರವರಿ 26ರಂದು ವಿಡಿಯೋ ಕಾನ್ಫರೆನ್ಸ್ ಮೂಲಕ ನವದೆಹಲಿಯಲ್ಲಿ ಮೈಸೂರು ವಿಭಾಗದ 367.24 ಕೋಟಿ ರೂ.ಗಳ ವಿವಿಧ ರೈಲ್ವೆ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸುವರು ಎಂದು ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರ್‌ವಾಲ್ ತಿಳಿಸಿದ್ದಾರೆ.

ಮೈಸೂರಿನ ಡಿಆರ್‌ಎಂ ಕಚೇರಿಯಲ್ಲಿ ಇಂದು ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ಅಮೃತ ಭಾರತ ಸ್ಟೇಷನ್ ಯೋಜನೆಯಡಿ ನೈರುತ್ಯ ರೈಲ್ವೆ ಮೈಸೂರು ವಿಭಾಗದ ವ್ಯಾಪ್ತಿಯ 12 ರೈಲ್ವೆ ನಿಲ್ದಾಣ ಮತ್ತು 1 ಕೆಳ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಫೆಬ್ರವರಿ 26ರಂದು ಪ್ರಧಾನ ಮಂತ್ರಿಗಳು ಶಂಕುಸ್ಥಾಪನೆ ನೆರವೇರಿಸಲಿದ್ದು, 12 ಮೇಲ್ಸೇತುವೆಗಳನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಉದ್ಘಾಟಿಸುವರು ಎಂದರು. ಮೈಸೂರು, ಚಾಮರಾಜನಗರ, ಚಿಕ್ಕಮಗಳೂರು, ಹಾಸನ ಸೇರಿ ನೈರುತ್ಯ ರೈಲ್ವೆ ವಿಭಾಗದ 12 ನಿಲ್ದಾಣಗಳಲ್ಲಿ ಆಧುನಿಕ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಪ್ರಯಾಣಿಕ ಸ್ನೇಹಿಯನ್ನಾಗಿ ಅಭಿವೃದ್ಧಿಗೊಳಿಸಲಾಗಿದೆ. ಶೌಚಾಲಯ, ಲಿಫ್ಟ್, 'ಒಂದು ನಿಲ್ದಾಣ–ಒಂದು ಉತ್ಪನ್ನ', ವಿಶ್ರಾಂತಿ ಕೊಠಡಿ, ಫುಟ್‌ಓವರ್ ಬ್ರಿಡ್ಜ್‌ಗಳೂ ಸೇರಿದಂತೆ ಹಲವು ಮೂಲ ಸೌಲಭ್ಯಗಳನ್ನು ಈ ರೈಲು ನಿಲ್ದಾಣಗಳಲ್ಲಿ ಕಲ್ಪಿಸಲಾಗಿದೆ ಎಂದು ಅವರು ತಿಳಿಸಿದರು. ಮೈಸೂರು ವಿಭಾಗದ ವಿವಿಧ ಸ್ಥಳಗಳಲ್ಲಿ 63.94 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ 8 ಆರ್‌ಯುಬಿ ಮತ್ತು 4 ಆರ್‌ಓಬಿಗಳನ್ನು ಪ್ರಧಾನಮಂತ್ರಿಗಳು ಉದ್ಘಾಟಿಸಲಿದ್ದು, ನಿರ್ಮಿಸಲುದ್ದೇಶಿಸಿರುವ 6.30 ಕೋಟಿ ರೂ. ವೆಚ್ಚದ ಆರ್‌ಯುಬಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸುವರು ಎಂದು ಶಿಲ್ಪಿ ಅಗರ್‌ವಾಲ್ ತಿಳಿಸಿದರು.



ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ಶಿಲ್ಪಿ ಅಗರ್‌ವಾಲ್ ಮಾಹಿತಿ.

ಇತ್ತೀಚೆಗೆ 'ಮೀಸಲು ಅರಣ್ಯ ಪದೇಶ' ಘೋಷಣೆ ಹಿನ್ನೆಲೆ

ಜಮೀನು ಹೋಗುತ್ತದೆ ಎಂಬ ಆಘಾತದಿಂದ ವಿಷ ಸೇವಿಸಿದ್ದ ಕಣಿಯನಹುಂಡಿ ರೈತ ಸಾವು

- ಗ್ರಾಮಸ್ಥರು, ರೈತ ಮುಖಂಡರ ಪ್ರತಿಭಟನೆ
- ಆತಂಕಕ್ಕೀಡಾಗಿರುವ ಕಣಿಯನಹುಂಡಿ, ಸುತ್ತಮುತ್ತಲ ಗ್ರಾಮಸ್ಥರು
- ಅಧಿಕಾರಿಗಳ ವಿರುದ್ಧ ಆಕ್ರೋಶ



ಗಿರೀಗೌಡ

ಮೈಸೂರು, ಫೆ. 24(ಆರ್‌ಕೆ)– ಮೂರ್‍ನಾಲ್ಕು ದಶಕಗಳಿಂದ ಉಳುಮೆ ಮಾಡಿಕೊಂಡು ಬಂದಿರುವ ಭೂಮಿಯನ್ನು ಅರಣ್ಯ ಇಲಾಖೆ ಕಸಿದುಕೊಳ್ಳಲಿದೆ ಎಂದು ಹೆದರಿ ಕ್ರಿಮಿ ನಾಶಕ ಸೇವಿಸಿದ್ದ ರೈತರೊಬ್ಬರು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ.

ಹೆಚ್.ಡಿ.ಕೋಟೆ ತಾಲೂಕು, ಹಂಪಾಪುರ ಹೋಬಳಿ, ಕಣಿಯನಹುಂಡಿ ಗ್ರಾಮದ ಗಿರೀಗೌಡ(50) ಆತ್ಮಹತ್ಯೆಗೆ ಶರಣಾದವರು. ಕಳೆದ ಮಂಗಳವಾರ ವಿಷ ಸೇವಿಸಿ ಅಸ್ವಸ್ಥಗೊಂಡಿದ್ದ ಇವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆ ತೀವ್ರ ನಿಗಾ ಘಟಕದಲ್ಲಿ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಶನಿವಾರ ಮುಂಜಾನೆ ಕೊನೆಯುಸಿರೆಳೆದರು.

ಗ್ರಾಮಸ್ಥರ ಆಕ್ರೋಶ: ಗಿರೀಗೌಡರ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಅವರ ಸಂಬಂಧಿಕರು, ಕಣಿಯನಹುಂಡಿ ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಹಾಗೂ ರೈತ ಮುಖಂಡರು ಕೆ.ಆರ್.ಆಸ್ಪತ್ರೆ ಬಳಿ ಜಮಾಯಿಸಿ, ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕಣಿಯನಹುಂಡಿ ಗ್ರಾಮದ ಸರ್ವೆ ನಂ.8ರಲ್ಲಿ 4 ಎಕರೆ ಸಾಗುವಳಿ ಜಮೀನು ಹೊಂದಿದ್ದ ಗಿರೀಗೌಡರು ಪತ್ನಿ, ಇಬ್ಬರು ಪುತ್ರರೊಂದಿಗೆ ಜೀವನ ನಡೆಸುತ್ತಿದ್ದರು. ಈ ಜಮೀನು ಬಿಟ್ಟರೆ ಅವರಿಗೆ ಯಾವುದೇ ಆಸ್ತಿಯಿಲ್ಲ. ಇದೀಗ ಅರಣ್ಯ ಇಲಾಖೆ ಜೀವನಾಧಾರವಾಗಿರುವ ಜಮೀನನ್ನು ಕಸಿದುಕೊಳ್ಳಲು ಯತ್ನಿಸುತ್ತಿದೆ ಎಂದು ಆರೋಪಿಸಿದರು. ಗಿರೀಗೌಡರ ರೀತಿಯಲ್ಲೇ ಹಲವು ರೈತರು ಅರಣ್ಯ ಇಲಾಖೆಯವರ ನಡೆಯಿಂದ ಆತಂಕಕ್ಕೀಡಾಗಿದ್ದಾರೆ. ನಾಲ್ಕೈದು ತಲೆ ಮಾರುಗಳಿಂದ ವ್ಯವಸಾಯ ಮಾಡಿಕೊಂಡು ಬಂದಿರುವ ಭೂಮಿಯನ್ನು ಕಸಿದುಕೊಳ್ಳುವ ಹುನ್ನಾರದಿಂದ ಭಯಭೀತರಾಗಿದ್ದಾರೆ. ಭೂಮಿ ಕಳೆದುಕೊಂಡರೆ ● 9ನೇ ಪುಟಕ್ಕೆ

> **“ ಗಿರೀಗೌಡರ ಸಾವು ಹಾಗೂ ಈ ಎಲ್ಲಾ ಗೊಂದಲಗಳಿಗೆ ಅರಣ್ಯ ಇಲಾಖೆ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳೇ ನೇರ ಹೊಣೆ. ಈಗಾಗಲೇ 'ಮೀಸಲು ಪ್ರದೇಶ'ವನ್ನು ಗುರುತಿಸಿ, ಉಳದಿದ್ದೆಲ್ಲಾ ಗೋಮಾಳವೆಂದು ತಿಳಿಸಲಾಗಿದೆ. ಆ ಜಾಗದಲ್ಲಿ ರೈತರು ನಾಲ್ಕೈದು ದಶಕಗಳಿಂದ ಕೃಷಿ ಮಾಡಿ, ಜೀವನ ನಡೆಸುತ್ತಿದ್ದಾರೆ. ಆದರೆ ಈಗ ಇದ್ದಕ್ಕಿದ್ದಂತೆ ಸಮಸ್ಯೆ ಸೃಷ್ಟಿಸಲಾಗಿದೆ. ಕೆಲವರ ಬಳಿ ಆರ್‌ಟಿಸಿ ಇದೆ. ಕೆಲವರಿಗೆ ಸಾಗುವಳಿ ಆಗಿದೆ. ಮತ್ತಷ್ಟು ಜನರಿಗೆ ಯಾವುದೂ ಆಗಿಲ್ಲ. ಹಲವರು ಲಕ್ಷಾಂತರ ರೂ. ಸಾಲ ಮಾಡಿ ಇಟ್ಟಿಗೆ ಕಾರ್ಖಾನೆ, ಪೌಲ್ಟ್ರಿಫಾರಂ ಮಾಡಿದ್ದಾರೆ. ಇವರೆಲ್ಲರ ಸ್ಥಿತಿ ಏನಾಗಬಹುದು. ಶೀಘ್ರವೇ ಅರಣ್ಯ ಹಾಗೂ ಕಂದಾಯ ಸಚಿವರು ಗ್ರಾಮಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ ಸರ್ಕಾರಕ್ಕೆ ವಾಸ್ತವತೆಯನ್ನು ಮನದಟ್ಟು ಮಾಡಬೇಕು. ರೈತರ ಜೀವ ಹಾಗೂ ಜೀವನ ರಕ್ಷಿಸುವ ನಿಟ್ಟಿನಲ್ಲಿ ಸರ್ಕಾರವೇ ಈ ಸಮಸ್ಯೆಯನ್ನು ಬಗೆಹರಿಸಬೇಕು.**
>
> –ಸಿದ್ದೇಗೌಡ, ಅಧ್ಯಕ್ಷರು
> ಶ್ರೀ ಕಾಶಿವಿಶ್ವನಾಥ ದೇವಸ್ಥಾನ
> ಜಿ.ಬಿ.ಸರಗೂರು

ಅನುದಾನದ ಕೊರತೆಯಿಂದ ಸ್ಥಗಿತಗೊಂಡಿದ್ದ

ಹೊಸ ಟ್ರಾಫಿಕ್ ಸಿಗ್ನಲ್ ಲೈಟ್ ಅಳವಡಿಕೆ ಆರಂಭ


- ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ಬ್ಯಾಂಕ್‌ನಿಂದ ಸಾಲ ಪಡೆಯಲು ಮುಂದಾದ ಪಾಲಿಕೆ
- ಹಣಕಾಸಿನ ಮುಗ್ಗಟ್ಟಿನಿಂದ ಅರ್ಧಕ್ಕೆ ನಿಂತಿದ್ದ ಟ್ರಾಫಿಕ್ ಸಿಗ್ನಲ್ ಕಾಮಗಾರಿಗಳು



ಕೌಟಿಲ್ಯ ವೃತ್ತದ ಬಳಿ ಕ್ರೇನ್ ಮೂಲಕ ಸಿಗ್ನಲ್ ಲೈಟ್ ಕಂಬಗಳನ್ನು ಅಳವಡಿಸುತ್ತಿರುವುದು.

ಮೈಸೂರು, ಫೆ.24(ಆರ್‌ಕೆ)– ಅನುದಾನದ ಕೊರತೆಯಿಂದಾಗಿ ಸ್ಥಗಿತವಾಗಿದ್ದ ಹೊಸ 10 ಟ್ರಾಫಿಕ್ ಸಿಗ್ನಲ್ ಲೈಟ್ ಅಳವಡಿಸುವ ಕಾಮಗಾರಿ ಸದ್ಯ ಆರಂಭವಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಮೀಪ ಕೌಟಿಲ್ಯ ವೃತ್ತ ಸೇರಿದಂತೆ ಐದು ಕಡೆ ಹೊಸದಾಗಿ ಸಿಗ್ನಲ್ ಲೈಟ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ಇವು ಇನ್ನೊಂದು ವಾರದಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಇನ್ನುಳಿದ ಐದು ಸಿಗ್ನಲ್ ಲೈಟ್‌ಗಳನ್ನೂ ಕೆಲವೇ ದಿನಗಳಲ್ಲಿ ಅಳವಡಿಸಲಾಗುತ್ತಿದೆ. ಆದರೆ ಅನುದಾನ ಕೊರತೆಯಿಂದ ಈಗಾಗಲೇ ಮೂರ್‍ನಾಲ್ಕು ತಿಂಗಳು ವಿಳಂಬವಾಗಿದ್ದು, ಇದೀಗ ಇನ್ಯಾವ ನೆಪವೊಡ್ಡಿ ಕಾಲ ಮುಂದೂಡುತ್ತಾರೋ? ಎಂಬುದು ಸಾರ್ವಜನಿಕರ ಪ್ರಶ್ನೆಯಾಗಿದೆ. ಮೈಸೂರು ನಗರದಲ್ಲಿ ದಿನೇ ದಿನೆ ವಾಹನಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ವಾಹನ ದಟ್ಟಣೆ ನಿಯಂತ್ರಣ ಹಾಗೂ ಸುಗಮ ಸಂಚಾರ ದೃಷ್ಟಿಯಿಂದ ವೃತ್ತ ಹಾಗೂ ಜಂಕ್ಷನ್‌ಗಳು ಸೇರಿ ಒಟ್ಟು 10 ಸ್ಥಳಗಳಲ್ಲಿ ಹೊಸದಾಗಿ ಸಿಗ್ನಲ್ ಲೈಟ್ ವ್ಯವಸ್ಥೆ ಕಲ್ಪಿಸಬೇಕೆಂದು ನಗರ ಸಂಚಾರ ಪೊಲೀಸರು ನಗರ ಪಾಲಿಕೆಗೆ ಮನವಿ ಮಾಡಿದ್ದರು. ಕೌಟಿಲ್ಯ ವೃತ್ತ, ಅಗ್ರಹಾರ ವೃತ್ತ, ನಜರ್‌ಬಾದ್ ವೃತ್ತ, ಆರ್‌ಟಿಓ ವೃತ್ತ, ರಿಂಗ್ ರಸ್ತೆಯ ರಾಜರಾಜೇಶ್ವರಿನಗರ ವೃತ್ತ, ಹಿನಕಲ್ ಜಂಕ್ಷನ್, ವಿಜಯನಗರ 4ನೇ ಹಂತದ ಬಸವನಹಳ್ಳಿ ಜಂಕ್ಷನ್, ಜೆಪಿ ನಗರದ ಅಕ್ಕಮಹಾದೇವಿ ಜಂಕ್ಷನ್, ಬನ್ನೂರು ರಸ್ತೆಯ ದೇವೇಗೌಡ ● 9ನೇ ಪುಟಕ್ಕೆ

> **“ ಸಂಚಾರ ಪೊಲೀಸರ ಪ್ರಸ್ತಾವನೆಯಂತೆ ನಗರ ಪಾಲಿಕೆಯಿಂದ 10 ಕಡೆ ಟ್ರಾಫಿಕ್ ಸಿಗ್ನಲ್ ಲೈಟ್ ಅಳವಡಿಸುವ ಕಾಮಗಾರಿ ಆರಂಭಿಸಲಾಗಿತ್ತು. ಈ ನಡುವೆ ಅನುದಾನದ ಕೊರತೆಯಿಂದ ಗುತ್ತಿಗೆದಾರ ಕೆಲಸ ವಿಳಂಬ ಮಾಡಿದ್ದರು. ಈಗ ಹಣಕಾಸು ವ್ಯವಸ್ಥೆ ಮಾಡಿಕೊಂಡು ಕಾಮಗಾರಿ ಆರಂಭಿಸಿದ್ದು, 5 ಕಡೆ ಸಿಗ್ನಲ್ ಲೈಟ್‌ಗಳನ್ನು ವಾರದೊಳಗೆ ಪೂರ್ಣಗೊಳಿಸುತ್ತೇವೆ. ಉಳಿದ ಐದು ಜಂಕ್ಷನ್‌ಗಳಲ್ಲೂ 15 ದಿನದೊಳಗಾಗಿ ಕಾಮಗಾರಿ ಪೂರ್ಣಗೊಳಿಸಿ ಎಲ್ಲಾ 10 ಟ್ರಾಫಿಕ್ ಸಿಗ್ನಲ್ ಲೈಟ್‌ಗಳನ್ನು ನಗರಪಾಲಿಕೆಗೆ ಹಸ್ತಾಂತರಿಸುತ್ತೇವೆ.**
>
> 
>
> – ಅಶಾದ್ ಉರ್ ರಹಮಾನ್ ಷರೀಫ್, ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ

ಕಾಮಗಾರಿ ಕ್ರಮ, ಸಮಯ ಸೂಕ್ತವಲ್ಲ...

ಮೈಸೂರು, ಫೆ.24– ಸಿಗ್ನಲ್ ಲೈಟ್ ವ್ಯವಸ್ಥೆ ಕಲ್ಪಿಸುವಲ್ಲಿ ಸೂಕ್ತ ಕ್ರಮ ವಹಿಸದೆ ಸಂಚಾರಕ್ಕೆ ಅಡ್ಡಿ ಉಂಟು ಮಾಡುವುದಲ್ಲದೆ ವಾಹನ ಸವಾರರಿಗೂ ಸಂಚಕಾರ ತಂದೊಡ್ಡಲಾಗುತ್ತಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

ವಾಹನ ದಟ್ಟಣೆ ಹೆಚ್ಚಿರುವ ಹಾಗೂ ಪ್ರಮುಖ ಸಮಯದಲ್ಲಿ ಸಂಚಾರ ನಿರ್ವಹಣೆ ಕಷ್ಟಸಾಧ್ಯವಾದ ಜಂಕ್ಷನ್‌ಗಳಲ್ಲಿ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಗುತ್ತಿದೆ. ಆದರೆ ಈ ಕಾಮಗಾರಿ ನಡೆಸುವ ಸಮಯ ಹಾಗೂ ಕ್ರಮ ಸೂಕ್ತವಾದುದ್ದಲ್ಲ. ಕೌಟಿಲ್ಯ ವೃತ್ತದ ಬಳಿ ಶನಿವಾರ ಸಂಜೆ 4.30ರ ಸಮಯದಲ್ಲಿ ಕ್ರೇನ್ ಮೂಲಕ ಸಿಗ್ನಲ್ ಲೈಟ್ ಕಂಬಗಳನ್ನು ನೆಡಲಾಯಿತು. ವಾರಾಂತ್ಯ ಅದರಲ್ಲೂ ಸಂಜೆ ವೇಳೆ ಇಲ್ಲಿ ವಾಹನ ಸಂಚಾರ ವಿಪರೀತವಾಗಿತ್ತು. ಅಲ್ಲದೆ ಇದೇ ಸಮಯಕ್ಕೆ ಚಾಮರಾಜನಗರ–ಮೈಸೂರು ರೈಲು ಸಂಚರಿಸುವುದರಿಂದ ಕ್ರಾಸಿಂಗ್ ಗೇಟ್ ಬಂದ್ ಮಾಡಲಾಗಿತ್ತು. ಪರಿಣಾಮ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಇದರ ಮಧ್ಯೆಯೇ ಕ್ರೇನ್ ಮೂಲಕ ಕೆಲಸ ಮಾಡಿದ್ದರಿಂದ ವಾಹನ ಸಂಚಾರಕ್ಕೆ ತೀವ್ರ ಅಡ್ಡಿಯಾಯಿತು. ಏನಾದರೂ ಕ್ರೇನ್ ಕಂಬ ಮೇಲೆತ್ತುವಾಗ ವಾಹನ ಸವಾರರಿಗೆ ಬಡಿದಿದ್ದರೆ ಯಾರು ಹೊಣೆ? ಸೂಚನಾ ಫಲಕ ● 9ನೇ ಪುಟಕ್ಕೆ

ಫೆ.27 ಹೊಸ ವಿವಿಗಳ ಭವಿಷ್ಯ ನಿರ್ಧಾರ

ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಕುಲಪತಿಗಳ ಸಭೆ: ಎನ್‌ಇಪಿ–2020 ಕುರಿತಂತೆಯೂ ಚರ್ಚೆ



ಮೈಸೂರು, ಫೆ.24(ಆರ್‌ಕೆ)– ಬೆಂಗಳೂರಲ್ಲಿ ಫೆ.27ರಂದು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯ ಕುಲಪತಿಗಳ ಸಭೆ ನಿಗದಿಯಾಗಿದೆ. ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅಧ್ಯಕ್ಷತೆಯಲ್ಲಿ ಕರೆದಿರುವ ಸಭೆಯಲ್ಲಿ ಜಿಲ್ಲೆಗೊಂದರಂತೆ ಆರಂಭವಾಗಿರುವ ಹೊಸ ವಿಶ್ವವಿದ್ಯಾನಿಲಯಗಳ ಅಸ್ತಿತ್ವ ನಿರ್ಧಾರವಾಗಲಿದೆ. ಕಳೆದ ಬಿಜೆಪಿ ಸರ್ಕಾರದಲ್ಲಿ ಮಂಡ್ಯ, ಚಾಮರಾಜನಗರ, ಹಾಸನ ಸೇರಿದಂತೆ ಇತರೆಡೆ ಹೊಸ ವಿಶ್ವವಿದ್ಯಾನಿಲಯಗಳನ್ನು ಆರಂಭಿಸಲಾಗಿದ್ದು, ಅವುಗಳ ಅಗತ್ಯ, ಅಳಿವು–ಉಳಿವಿನ ಬಗ್ಗೆ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಯಲಿದೆ. ಹಿಂದಿನ ಸರ್ಕಾರದಲ್ಲಿ ಜಾರಿಗೊಳಿಸಿದ್ದ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)ಯಂತೆ ಉನ್ನತ ಶಿಕ್ಷಣ ನೀಡುವ ಬಗ್ಗೆಯೂ ಸಚಿವರು ಕುಲಪತಿಗಳೊಂದಿಗೆ ಚರ್ಚೆ ನಡೆಸ ಲಿದ್ದಾರೆ. ಎನ್‌ಇಪಿಯನ್ವಯ ಪಠ್ಯಕ್ರಮ ರದ್ದುಪಡಿಸಿ ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ಅಳವಡಿಸಿ ಎಂದು ಸೂಚನೆ ನೀಡುವ ಸಾಧ್ಯತೆಯನ್ನು ತಳ್ಳಿ ಹಾಕು ವಂತಿಲ್ಲ. ಪರೀಕ್ಷಾ ಪದ್ಧತಿ, ಶಿಕ್ಷಕರ ನೇಮಕ, ಆಡಳಿತ ಸುಧಾರಣೆ, ಅನು ದಾನ ಮುಂದುವರಿಕೆ, ಸಂಪನ್ಮೂಲ ಕ್ರೋಢೀಕರಣ, ವಿದ್ಯಾರ್ಥಿಗಳಿಗೆ ಕೌಶಲ್ಯಾಧಾರಿತ ತರಬೇತಿ ನೀಡುವುದು, ಹೊಸ ಕೋರ್ಸ್‌ಗಳ ಆರಂಭ ಕುರಿತಂತೆಯೂ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ಹೇಳಲಾಗಿದೆ.

ಎಕ್ಸ್‌ಪ್ರೆಸ್ ವೇನಲ್ಲಿ ಕಾರು ಪಲ್ಟಿ: ದಂಪತಿಗೆ ಗಾಯ

ಮಂಡ್ಯ, ಫೆ.24– ಕಾರು ಪಲ್ಟಿ ಹೊಡೆದು ದಂಪತಿ ತೀವ್ರವಾಗಿ ಗಾಯಗೊಂಡ ಘಟನೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಶನಿವಾರ ಸಂಜೆ ಸಂಭವಿಸಿದೆ.

ಬೆಂಗಳೂರಿನಿಂದ ಮೈಸೂರಿಗೆ ತೆರಳುತ್ತಿದ್ದ ಇನ್ನೋವಾ ಕಾರು ಶನಿವಾರ ಸಂಜೆ 5 ಗಂಟೆ ಸುಮಾರಿನಲ್ಲಿ ಕಟ್ಟೆದೊಡ್ಡಿ ಗೇಟ್ ಬಳಿ ಕಾರು ಚಾಲಕನ ನಿಯಂತ್ರಣ ತಪ್ಪಿ ಪಲ್ಟಿ ಹೊಡೆದಿದೆ. ಕಾರನ್ನು ಪತಿ ಚಾಲನೆ ಮಾಡುತ್ತಿದ್ದರು ಎಂದು ಹೇಳಲಾಗಿದ್ದು, ಅವರು ಹಾಗೂ ಅವರ ಪತ್ನಿ ತೀವ್ರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳ ಬಗ್ಗೆ ಹೆಚ್ಚಿನ ವಿವರ ಲಭ್ಯವಾಗಿಲ್ಲ.

ಮಾಲಿನ್ಯದಿಂದ ಮಾತೃಭಾಷೆ ರಕ್ಷಿಸುವ ಕರ್ತವ್ಯ ಎಲ್ಲರದ್ದು: ಬನ್ನೂರು ರಾಜು



ವಿಶ್ವ ಮಾತೃ ಭಾಷಾ ದಿನದ ಅಂಗವಾಗಿ ಶ್ರೀಕಾಂತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ನೀಡಲಾಯಿತು.

ಮೈಸೂರು,ಫೆ.24(ಎಸ್‌ಬಿಡಿ)– ಮಾತೃಭಾಷೆ ಜನ್ಮವಿತ್ತ ತಾಯಿ ಇದ್ದಂತೆ ಎನ್ನುವುದನ್ನು ಯಾರೂ ಮರೆಯಬಾರದು ಎಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ಮೈಸೂರಿನ ಅಗ್ರಹಾರದಲ್ಲಿನ ಶ್ರೀಕಾಂತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಿರಣ್ಮಯಿ ಪ್ರತಿಷ್ಠಾನದ ಸಹಯೋಗದಲ್ಲಿ ಆಯೋಜಿಸಿದ್ದ ವಿಶ್ವ ಮಾತೃಭಾಷಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿ, ಜಗತ್ತಿನಲ್ಲಿ ಸಾವಿರಾರು ಭಾಷೆಗಳಿವೆ. ಆದರೆ ಮಾತೃಭಾಷೆಗೆ ಯಾವುದೂ ಸರಿಸಮವಾಗಲಾರದು. ಹುಟ್ಟಿನೊಡನೆಯೇ ಕರುಳ ಸಂಬಂಧಿಯಾಗಿ ಬೆಸೆದುಕೊಂಡು ರಕ್ತಗತವಾಗಿ ಹರಿದು ಬಂದಿರುವ ಮಾತೃಭಾಷೆಯನ್ನು ಮರೆತರೆ ಜನ್ಮವಿತ್ತ ತಾಯಿಯನ್ನೇ ಮರೆತಂತೆ ಎಂದು ಅಭಿಪ್ರಾಯಿಸಿದರು.

ಶಾಲೆಯ ಮುಖ್ಯ ಶಿಕ್ಷಕ ಟಿ.ಎಸ್.ಪ್ರಭುಸ್ವಾಮಿ ಮಾತನಾಡಿ, ಪ್ರತಿಯೊಬ್ಬರಿಗೂ ಅವರವರ ಮಾತೃಭಾಷೆಯೇ ದೊಡ್ಡದು. ನಾವು ಕನ್ನಡಿಗರು. ಕನ್ನಡವೇ ನಮಗೆ ಸರ್ವಸ್ವ, ಬೇರೆ ಭಾಷೆಗಳನ್ನು ಕಲಿಯುವುದು ತಪ್ಪಲ್ಲ. ಆದರೆ ಯಾವುದೋ ಭಾಷೆಯ ವ್ಯಾಮೋಹಕ್ಕೆ ಕನ್ನಡ ಭಾಷೆಯನ್ನು ಮರೆಯಬಾರದು. ಕೊನೆವರೆಗೂ ಕನ್ನಡವೇ ನಮ್ಮ ಉಸಿರಾಗಿರಬೇಕು ಎಂದರು.

> “ ತಾಯಿ ನುಡಿಯನ್ನು ಎಲ್ಲರೂ ಗೌರವಿಸಬೇಕು. ಜೀವನಕ್ಕಾಗಿ ಎಷ್ಟೇ ಭಾಷೆ ಕಲಿತರೂ ಜೀವ ಭಾಷೆಯನ್ನು ಮರೆಯಬಾರದು. ನಮ್ಮ ಉಸಿರಿರುವವರೆಗೂ ತಾಯಿಯಂತೆ ಪ್ರೀತಿಸಿ, ಪೋಷಿಸಬೇಕು. ಆದರೆ ಇತ್ತೀಚೆಗೆ ಮನುಷ್ಯನ ಮನೋ ಮಾಲಿನ್ಯದ ಪರಿಣಾಮ ಭಾಷಾ ಮಾಲಿನ್ಯವೂ ಆಗುತ್ತಿದೆ. ಆದರೂ ನಮ್ಮ ಮಾತೃಭಾಷೆ ಕನ್ನಡವನ್ನು ಮಾಲಿನ್ಯದಿಂದ ರಕ್ಷಿಸುವ ಜವಾಬ್ದಾರಿ ಪ್ರತಿಯೊಬ್ಬ ಕನ್ನಡಿಗನ ಮೇಲಿದೆ.
>
> – ಬನ್ನೂರು ಕೆ.ರಾಜು, ಸಾಹಿತಿ

ವಿಶ್ವ ಮಾತೃಭಾಷಾ ದಿನದ ಅಂಗವಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ನಿಖಿತ್, ಜಿ.ವಿ.ಕವನ, ರಾಜು, ಸಂಜನಾ, ರಕ್ಷಿತಾ, ನಿರಂಜನ್, ಲಿಖಿತ, ಅಭಿಜ್ಞ, ಭವಾನಿಗೆ ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ ಹಾಗೂ ಕಾಂಗ್ರೆಸ್ ಯುವ ಮುಖಂಡ ಕೆ.ಮಹೇಶ್ ಬಹುಮಾನ ಪ್ರದಾನ ಮಾಡಿದರು. ಶಿಕ್ಷಕರಾದ ವಿ.ನಾರಾಯಣರಾವ್, ಶಿವಮ್ಮ, ಶೀಲಾ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾವಿಕಾಸ್ ಇಂಜಿನಿಯರಿಂಗ್ ಕಾಲೇಜಿಗೆ ಬಹುಮಾನ



ಮೈಸೂರು, ಫೆ. 24–ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಆದಿಚುಂಚನಗಿರಿ ಕ್ಷೇತ್ರದಲ್ಲಿ ನಡೆದ ಜ್ಞಾನ ವಿಜ್ಞಾನ ತಂತ್ರಜ್ಞಾನ ಮೇಳದಲ್ಲಿ ಮೈಸೂರಿನ ವಿದ್ಯಾವಿಕಾಸ್ ಇನ್ಸ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರಿಂಗ್ ಸಂಸ್ಥೆಯ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ತನ್ಮಯಾ ಕೆ.ಪಿ, ಆರ್.ತೇಜಸ್, ಹಾಗೂ ಕಿಶನ್ ವಿದ್ಯಾರ್ಥಿಗಳು ಡಾ.ರಾಜಲಕ್ಷ್ಮಿ ಅವರ ಮಾರ್ಗದರ್ಶನದಲ್ಲಿ ಬಯೋನಿಕ್ ಆರ್ಮ್ (ಕೃತಕ ಕೈ) ಪ್ರಾತ್ಯಕ್ಷಿಕೆ ಪ್ರದರ್ಶಿಸಿ, ಬಹುಮಾನ ಪಡೆದರು. ಇದು ಪಾರ್ಶ್ವವಾಯುವಿಗೆ ತುತ್ತಾದ ರೋಗಿಗಳಿಗೆ ಉಪಯುಕ್ತವಾಗಿದ್ದು, ಇದರಿಂದ ಪಾಲಕರಿಗೆ ರೋಗಿಗಳ ಸ್ಥಿತಿಯನ್ನು ಅರಿಯಲು ಸಾಧ್ಯವಾಗುತ್ತದೆ. ಭವಿಷ್ಯದಲ್ಲಿ ರೋಗ ಸುಧಾರಣೆಯ ನಿಟ್ಟಿನಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಕರ್ನಾಟಕದಲ್ಲಿನ ಸುಮಾರು 80ಕ್ಕೂ ಹೆಚ್ಚು ಸಂಸ್ಥೆಗಳು ಈ ಮೇಳದಲ್ಲಿ ಭಾಗವಹಿಸಿದ್ದವು.



ಮೈಸೂರು ತಾಲೂಕು ಕಡಕೊಳ ಗ್ರಾಮದ ಶ್ರೀ ಗುರು ವಿದ್ಯಾ ವಿಕಾಸ ಕೇಂದ್ರ ಶಾಲೆಯ ವಾರ್ಷಿಕೋತ್ಸವವನ್ನು ಯೂನಿಯನ್ ರೈತ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಕಡಕೊಳ ಕುಮಾರಸ್ವಾಮಿ ಉದ್ಘಾಟಿಸಿ, ಮಾತನಾಡಿದರು. ಚಾಮರಾಜನಗರ ಸಿದ್ದೇಶ್ವರ ವಿರಕ್ತ ಮಠದ ಶ್ರೀಚನ್ನಬಸವ ಸ್ವಾಮೀಜಿ, ಸಿಂಧುವಳ್ಳಿ ಮಠದ ಶ್ರೀ ಶಿವಕುಮಾರ ಸ್ವಾಮೀಜಿ, ತಾ.ಪಂ ಮಾಜಿ ಸದಸ್ಯ ಶ್ರೀಕಂಠ ತೊಂಡೇಗೌಡ, ಗ್ರಾ.ಪಂ. ಮಾಜಿ ಅಧ್ಯಕ್ಷ ಜೆ.ರಮೇಶ್, ಸಂಸ್ಥೆಯ ಕಾರ್ಯದರ್ಶಿ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ, ಡೈರಿ ಅಧ್ಯಕ್ಷ ಬೀರೇಶ್ ನಿರ್ದೇಶಕ ಮನು, ಶಿವಲಿಂಗೇಗೌಡ, ಸ್ವಾಮಿ ನಾಯಕ್, ಕಡಕೊಳ ಪೊಲೀಸ್ ಠಾಣಾಧಿಕಾರಿ ನಾರಾಯಣ್, ಮುಖ್ಯೋಪಾಧ್ಯಾಯರಾದ ಪ್ರಭುಸ್ವಾಮಿ, ಶಿವಕುಮಾರ್ ಇದ್ದರು.

ಶಾಸಕ ಜಿ.ಟಿ.ದೇವೇಗೌಡರು ಕ್ಷಮೆ ಯಾಚಿಸಬೇಕು; ಇಲ್ಲವೇ ಪ್ರತಿಭಟಿಸುತ್ತೇವೆ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶನಿವಾರ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಫೆ.24(ಬಿಎಲ್‌ಯು)– ಸಹಕಾರ ಕ್ಷೇತ್ರದ ನಾಮ ನಿರ್ದೇಶನ ವಿಚಾರ ಸಂಬಂಧ ವಿಧಾನಸಭೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರು ಮೀಸಲಾತಿ ವಿರುದ್ಧ ಮಾತನಾಡಿದ್ದು, ಕೂಡಲೇ ಕ್ಷಮೆ ಕೇಳದಿದ್ದರೆ ಫೆಬ್ರವರಿ 28ರಂದು ಅವರ ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತೇವೆ ಎಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಎಚ್ಚರಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಹಕಾರ ಸಂಘಗಳಿಗೆ ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಹಿಂದುಳಿದವರನ್ನು ನಾಮ ನಿರ್ದೇಶನ ಮಾಡಲು ಸರ್ಕಾರ ವಿಧಾನ ಸಭೆಯಲ್ಲಿ ವಿಧೇಯಕ ಮಂಡಿಸಿತ್ತು. ಆದರೆ ಜಿ.ಟಿ.ದೇವೇಗೌಡರು ಇದನ್ನು ವಿರೋಧ ಮಾಡಿದ್ದಾರೆ ಎಂದು ಆರೋಪಿಸಿದರು.

ಮೀಸಲಾತಿ ಬೇಡ ಎನ್ನುವವರು ಮುಂದಿನ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಮತ ಕೂಡ ಬೇಡವೆಂದು ಘೋಷಣೆ ಮಾಡಲಿ. ಮೀಸಲಾತಿ ವಿರೋಧಿ ಹೇಳಿಕೆ ನೀಡಿರುವ ಜಿ.ಟಿ.ದೇವೇಗೌಡರು ಕೂಡಲೇ ಕ್ಷಮೆ ಕೇಳಬೇಕು. ಇಲ್ಲವೆಂದರೆ ಫೆಬ್ರವರಿ 28ರಂದು ಅವರ ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತೇವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಕಾರ್ಪೋರೇಟರ್ ಸುನಂದಕುಮಾರ್, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಶಿವರಾಮ್, ಸಮಿತಿ ಮುಖಂಡರಾದ ನಾಗೇಶ್, ಮರಿದೇವಯ್ಯ, ಕೆ.ಎಸ್.ಸುಶೀಲ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನಾಳೆ ಕಣ್ಣು, ಆರೋಗ್ಯ ಉಚಿತ ತಪಾಸಣೆ ಶಿಬಿರ

ಮೈಸೂರು,ಫೆ.24–ಮೈಸೂರು ರೇಸ್ ಕ್ಲಬ್ ಕಣ್ಣಿನ ಆಸ್ಪತ್ರೆ ವತಿಯಿಂದ ಡಾ. ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಜೆ.ಪಿ.ನಗರದ ಪೊಲೀಸ್ ಬೂತ್ ಹತ್ತಿರದ ಶ್ರೀನಿಧಿ ಸಭಾಂಗಣದಲ್ಲಿ ಫೆ.26ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಕಣ್ಣು, ಆರೋಗ್ಯ ಉಚಿತ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9945393536, 9845468679 ಸಂಪರ್ಕಿಸಬಹುದು.

ಉಚಿತ ಕಾರ್ಯಾಗಾರ

ಮೈಸೂರು,ಫೆ.24–ಮೈಸೂರಿನ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರವಾದ ನವೋದಯ ಫೌಂಡೇಷನ್ ವತಿಯಿಂದ ಫೆ.29ರಿಂದ ಗ್ರಾಮ ಆಡಳಿತಾಧಿಕಾರಿಗಳ ನೇಮಕಾತಿ ಪರೀಕ್ಷೆ ತೆಗೆದುಕೊಳ್ಳುವ ಸ್ಪರ್ಧಾರ್ಥಿಗಳಿಗೆ ಒಂದು ದಿನದ ಉಚಿತ ಕಾರ್ಯಾಗಾರವನ್ನು ನವೋದಯ ಫೌಂಡೇಷನ್‌ನ ಕುವೆಂಪು ನಗರ ಶಾಖೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ವಿವರಗಳಿಗೆ ಮೊ. 8105049244, 6364381776 ಸಂಪರ್ಕಿಸಬಹುದು.

ಗಾಂಧೀವಾದಿ ಹೆಚ್.ಸಿ.ದಾಸಪ್ಪನವರ ಭವನಕ್ಕೆ ನಾಳೆ ಭೂಮಿ ಪೂಜೆ



ಸುದ್ದಿಗೋಷ್ಠಿಯಲ್ಲಿ ಡಾ.ಪಿ.ಬೋರೇಗೌಡ ಮಾತನಾಡುತ್ತಿರುವುದು.

ಮೈಸೂರು,ಫೆ.24(ಜಿಎ)–ಮೈಸೂರಿನ ಎಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ ವತಿಯಿಂದ ಮೈಸೂರಿನ ಗಾಂಧೀವಾದಿ ಎಂದೇ ಖ್ಯಾತರಾಗಿದ್ದ ಎಚ್.ಸಿ.ದಾಸಪ್ಪ ಅವರ ಹೆಸರಿನಲ್ಲಿ ಗಂಗೋತ್ರಿ ಬಡಾವಣೆಯ ಮಾರುತಿ ದೇವಸ್ಥಾನದ ಬಳಿ ನಿರ್ಮಿಸಲಿರುವ ಭವನದ ಕಾಮಗಾರಿಗೆ ಫೆ.26ರ ಸೋಮವಾರ ಬೆಳಗ್ಗೆ 9.30ಕ್ಕೆ ಭೂಮಿ ಪೂಜೆ ನಡೆಯಲಿದೆ ಎಂದು ಮಾಜಿ ಮೇಯರ್ ಪಿ. ವಿಶ್ವನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದು ಸುಮಾರು ಹತ್ತು ಕೋಟಿ ರೂ., ವೆಚ್ಚದ ಯೋಜನೆಯಾಗಿದ್ದು, ಇದಕ್ಕಾಗಿ ದಾಸಪ್ಪನವರ ಅಭಿಮಾನಿಗಳು ಹಾಗೂ ಇನ್ನಿತರರು ದೇಣಿಗೆ ನೀಡಿದ್ದಾರೆ. ಉನ್ನತ ಶಿಕ್ಷಣ ಮತ್ತು ತರಬೇತಿ, ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಮಾನವ ಹಕ್ಕುಗಳ ರಕ್ಷಣೆ, ದುರ್ಬಲ ವರ್ಗಗಳ ಉನ್ನತೀಕರಣ, ಸಾರ್ವಜನಿಕ ಹಿತಾಸಕ್ತಿಗಳ ಉತ್ತೇಜನ ಸಂಸ್ಥೆಯ ಮೂಲ ಉದ್ದೇಶ. ಭೂಮಿ ಪೂಜೆ ಕಾರ್ಯಕ್ರಮದ ವೇಳೆ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಶಾಸಕ ಹರೀಶ್‌ಗೌಡ, ಪಾಲಿಕೆ ಮಾಜಿ ಸದಸ್ಯೆ ವೇದಾವತಿ ಉಪಸ್ಥಿತರಿರುವರು ಎಂದರು. ಸುದ್ದಿಗೋಷ್ಠಿಯಲ್ಲಿ ಕೆಂಪರಾಜೇಗೌಡ, ಸರೋಜಾ ತುಳಸಿದಾಸಪ್ಪ, ಬೂಕನಕೆರೆ ವಿಜೇಂದ್ರ ಉಪಸ್ಥಿತರಿದ್ದರು.

ನಾನು ಸದಾ ದಲಿತರ ಪರ

- ಶಾಸಕ ಜಿ.ಟಿ.ದೇವೇಗೌಡರ ಸ್ಪಷ್ಟನೆ
- ಕಾಂಗ್ರೆಸ್‌ನವರೇ ನಿಜವಾಗಿ ದಲಿತ ವಿರೋಧಿಗಳು



ಜಿ.ಟಿ.ದೇವೇಗೌಡ

ಮೈಸೂರು,ಫೆ.24(ಬಿಎಲ್‌ಯು)–ಸರ್ಕಾರದ ಷೇರು ಇಲ್ಲದ ಸಹಕಾರ ಸಂಘಗಳಿಗೆ ನಾಮ ನಿರ್ದೇಶನ ಮಾಡಲು ನಾನು ವಿರೋಧ ಮಾಡಿದ್ದೇನೆ. ಅದರ ಅರ್ಥ ಮೀಸಲಾತಿ ವಿರುದ್ಧವಲ್ಲ. ನನ್ನ ರಾಜಕೀಯ ಜೀವನದಲ್ಲಿ ಎಂದೂ ಮೀಸಲಾತಿ ವಿರುದ್ಧವಾಗಿಲ್ಲ ಎಂದು ಶಾಸಕ ಜಿ.ಟಿ.ದೇವೇಗೌಡರು ಸ್ಪಷ್ಟಪಡಿಸಿದ್ದಾರೆ.

ತಾವು ವಿಧಾನಸಭೆಯಲ್ಲಿ ಮೀಸಲಾತಿ ವಿರುದ್ಧ ಮಾತನಾಡಿದ್ದೇನೆ ಎಂಬ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಆರೋಪ ಶುದ್ಧ ಸುಳ್ಳು, ತಪ್ಪು ಗ್ರಹಿಕೆ ಎಂದು ಹೇಳಿದ್ದಾರೆ. ಕರ್ನಾಟಕದಲ್ಲಿ ಮೂವತ್ತು ಸಹಕಾರ ಯೂನಿಯನ್‌ಗಳಿವೆ. 2000ನೇ ಇಸವಿಯಲ್ಲಿ ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಸ್ಥಾನಕ್ಕೆ ನಾನು ರಾಜೀನಾಮೆ ನೀಡಿ ದಲಿತ ಸಮುದಾಯದ ಬನ್ನೂರಿನ ಪದವೀಧರ ನಂಜುಂಡ ಸ್ವಾಮಿಯನ್ನು ಎರಡೂವರೆ ವರ್ಷಕ್ಕೆ ಅಧ್ಯಕ್ಷನಾಗಿ ಮಾಡಿದೆ. ಇಡೀ ಕರ್ನಾಟಕದ ಸಹಕಾರ ಕ್ಷೇತ್ರದಲ್ಲಿ ಮೊದಲ ಬಾರಿಗೆ ದಲಿತ ಸಮುದಾಯದ ವ್ಯಕ್ತಿಯನ್ನು ಅಧ್ಯಕ್ಷನಾಗಿ ಮಾಡಿ ನಾನು ದಾಖಲೆ ಬರೆದಿದ್ದೇನೆ. ಹೀಗಿರುವಾಗ ನಾನು ದಲಿತ ವಿರೋಧಿ ಹೇಗೆ ಆಗುತ್ತೇನೆ? ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಪ್ರಶ್ನಿಸಿದ್ದಾರೆ.

ಸಹಕಾರ ಸಂಘಗಳಿಗೆ ನಾಮ ನಿರ್ದೇಶನ ಮಾಡುವ ಬಿಲ್ ವಿಧಾನಸಭೆಯಲ್ಲಿ ಪಾಸ್ ಆಗಿದೆ. ನಾನು ಸೇರಿದಂತೆ ಬಿಜೆಪಿಯವರು ಇದನ್ನು ಬೆಂಬಲಿಸಿದ್ದೇವೆ. ಹೀಗಿರುವಾಗ ದಲಿತ ವಿರೋಧಿ ಎಂದು ಆರೋಪ ಮಾಡಿದರೆ ಹೇಗೆ ಎಂದು ಮರು ಪ್ರಶ್ನಿಸಿದ್ದಾರೆ. ಕಾಂಗ್ರೆಸ್‌ನವರು ದಲಿತರ ಪರವಾಗಿ ಮಾತನಾಡುತ್ತಾರೆ. ಹಾಗಾದರೆ ಈಗಿನ ಸರ್ಕಾರದಲ್ಲಿ ದಲಿತ ಸಮುದಾಯದ ಮಲ್ಲಿಕಾರ್ಜುನ ಖರ್ಗೆ ಅಥವಾ ಡಾ.ಪರಮೇಶ್ವರ್ ಅವರನ್ನು ಮುಖ್ಯಮಂತ್ರಿ ಮಾಡಬಹುದಿತ್ತಲ್ಲವೆ. ಕಾಂಗ್ರೆಸ್‌ನವರೇ ನಿಜವಾಗಿ ದಲಿತ ವಿರೋಧಿಗಳು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ ಎಂದು ಶಾಸಕ ಜಿ.ಟಿ.ದೇವೇಗೌಡರು ಆಪಾದಿಸಿದ್ದಾರೆ.

ಮುಂದಿನ 9 ವರ್ಷ ‘ಗ್ಯಾರಂಟಿ’ ಮುಂದುವರಿಕೆ



ಶಿವಮೊಗ್ಗ: ಬಾಕಿ ನಾಲ್ಕು ವರ್ಷ ಮಾತ್ರವಲ್ಲ, ಮುಂದಿನ ಐದು ವರ್ಷವೂ ನಾವೇ (ಕಾಂಗ್ರೆಸ್) ಅಧಿಕಾರ ನಡೆಸಲಿದ್ದೇವೆ. ಹೀಗಾಗಿ ಇನ್ನೂ 9 ವರ್ಷ ‘ಗ್ಯಾರಂಟಿ’ ಯೋಜನೆಗಳು ಮುಂದುವರಿಯಲಿವೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶನಿವಾರ ಹೇಳಿದರು.

ಜಿಲ್ಲಾಡಳಿತ ಆಯೋಜಿಸಿದ್ದ ‘ಗ್ಯಾರಂಟಿ’ ಯೋಜನೆಗಳ ಫಲಾನುಭವಿಗಳ ಜಿಲ್ಲಾಮಟ್ಟದ ಸಮಾವೇಶದಲ್ಲಿ ಮಾತನಾಡಿದ ಅವರು, ಬಿಜೆಪಿ ಜನರ ಭಾವನೆಗಳ ಮೇಲೆ ರಾಜಕಾರಣ ಮಾಡುತ್ತದೆ. ನಾವು ಜನರ ಬದುಕಿನ ಮೇಲೆ ರಾಜಕಾರಣ ಮಾಡುತ್ತಿದ್ದೇವೆ ಎಂದರು. ಐದು ಬೆರಳು ಸೇರಿ ಕೈ ಮುಷ್ಠಿಯಾಯಿತು. ಐದು ಗ್ಯಾರಂಟಿ ಸೇರಿ ಕೈ ಗಟ್ಟಿಯಾಯಿತು. ಇದನ್ನು ನೋಡಿದ ಕಮಲ ಉದುರಿ ಹೋಯಿತು. ತೆನೆ ಹೊತ್ತ ಮಹಿಳೆ ತೆನೆ ಎಸೆದು ಹೋದಳು. ಕರ್ನಾಟಕ ಪ್ರಬುದ್ಧವಾಯಿತು. ಸಮೃದ್ಧಿಯಾಯಿತು ಎಂದೂ ಕವಿತೆ ವಾಚಿಸಿದರು. ಗ್ಯಾರಂಟಿ ಯೋಜನೆಗಳನ್ನು ಅಲ್ಪಸಂಖ್ಯಾತರಿಗೆ ಕೊಟ್ಟಿರುವುದಕ್ಕೆ ಬಿಜೆಪಿಯವರು ವಿರೋಧ ಮಾಡುತ್ತಾರೆ. ಆ ಸಮುದಾಯದವರು ತೆರಿಗೆ ಕಟ್ಟುವುದಿಲ್ಲವೇ ಎಂದು ಪ್ರಶ್ನಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.2.2024 ಭಾನುವಾರ, ಮಳೆ ನಕ್ಷತ್ರ: ಶತಭಿಷ 20.2.2024 ರಿಂದ 03.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಪುಬ್ಬ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಶ್ರೀ ಚಾಮುಂಡೇಶ್ವರಿ ದೇವಸ್ಥಾನ :** 33ನೇ ವರ್ಷದ ವಾರ್ಷಿಕೋತ್ಸವ ಮತ್ತು ಪಲ್ಲಕ್ಕಿ ಉತ್ಸವ, ಬೆಳಗ್ಗೆ 6.30ಕ್ಕೆ ಅಮ್ಮನವರಿಗೆ ಕುಂಭಾಭಿಷೇಕ, ಬೆಳಗ್ಗೆ 8.30ಕ್ಕೆ ಅಲಂಕಾರ ಪೂಜೆ, ಬೆ. 10.30ಕ್ಕೆ ಪಲ್ಲಕ್ಕಿ ಉತ್ಸವ, ಮ. 12.15ಕ್ಕೆ ರಾಶಿ ಪೂಜೆ, ಬೆ. 11.20 ರಿಂದ ಸಾಮೂಹಿಕ ವಿವಾಹ, ಮ. 12.30ಕ್ಕೆ ಅನ್ನಸಂತರ್ಪಣೆ, ಸ್ಥಳ: ದೇವಸ್ಥಾನ, ಹೆಬ್ಬಾಳು.

■ **ಕೆ.ಆರ್. ಯಲ್ಲಪ್ಪರಾಯರ ಶ್ರೀ ಯಲ್ಲಮ್ಮನವರ ದೇವಸ್ಥಾನ :** ಬೇವಿನ ಮರದ ಶ್ರೀ ಯಲ್ಲಮ್ಮನವರ 76ನೇ ವರ್ಷದ ಮಹೋತ್ಸವ, ಬೆಳಗ್ಗೆ 9.30ಕ್ಕೆ ಮಹಾಪೂಜೆ, ಕಲಶ ವಿಸರ್ಜನೆ, ಮ. 1ಕ್ಕೆ ಅನ್ನ ಸಂತರ್ಪಣೆ, ಸ್ಥಳ: ದೇವಸ್ಥಾನ, ನಾಲಾ ಬೀದಿ, ಕೃಷ್ಣರಾಜ ಮೊಹಲ್ಲಾ.

■ **ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಧರ್ಮಸಂಸ್ಥೆ ಟ್ರಸ್ಟ್ :** 77ನೇ ಜಾತ್ರಾ ಮಹೋತ್ಸವ, ಬೆಳಗ್ಗೆ 10ಕ್ಕೆ ಶ್ರೀ ಸತ್ಯನಾರಾಯಣಸ್ವಾಮಿ ಪೂಜೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ದೇವಸ್ಥಾನ, ಮಂಡಿ ಮೊಹಲ್ಲಾ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಕ್ಲಿಯರ್‌ಮೆಡಿ ರೇಡಿಯೆಂಟ್ ಆಸ್ಪತ್ರೆ:** ಉಚಿತ ಆರೋಗ್ಯ ಮತ್ತು ಮೂತ್ರಪಿಂಡ ತಪಾಸಣಾ ಶಿಬಿರ, ಸ್ಥಳ: ಹೂಟಗಳ್ಳಿ ಹೌಸಿಂಗ್ ಬೋರ್ಡ್ ಕಾಲೋನಿಯ ಸುದರ್ಶನ ವಿದ್ಯಾಸಂಸ್ಥೆ ಆವರಣ, ಬೆಳಗ್ಗೆ 10ರಿಂದ.

■ **ಧಾರ್ಮಿಕ ದತ್ತಿ ಇಲಾಖೆ, ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ :** ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರಿಗೆ ಏಕದಶವಾರ ರುದ್ರಾಭಿಷೇಕ, ಸುವರ್ಣಾಲಂಕಾರ, ಸಹಸ್ರನಾಮಾರ್ಚನೆ, ನಿವೇದನೆ, ಮಹಾಮಂಗಳಾರತಿ, ರಾಜೋಪಚಾರ, ರಾಷ್ಟ್ರಾಶೀರ್ವಾದ, ತೀರ್ಥಪ್ರಸಾದ ವಿನಿಯೋಗ, ಮ. 12.30ಕ್ಕೆ ಪ್ರಸಾದ ವಿನಿಯೋಗ, ಪ್ರದೋಷ ಕಾಲದ ಪೂಜೆ, ತ್ರಿಶತಿ ನಾಮಾರ್ಚನೆ, ರಾತ್ರಿ 9.30ಕ್ಕೆ ಅಮ್ಮನವರ ಕನ್ಯಾಕನ್ನಡಿ ಉತ್ಸವ ಪುಣ್ಯಾಹ ಮಂಟಪೋತ್ಸವ, ಸ್ಥಳ: ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಸ್ಥಾನ, ಸರ್ಕಾರಿ ಉತ್ತನಹಳ್ಳಿ.

■ **ಶ್ರೀ ಕುಲಾಲಗುಂಡ ಬ್ರಹ್ಮಾರ್ಯ ಕುಂಬಾರರ ಸಂಘ :** ಸಮುದಾಯದ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಶೇಷ ಮಾರ್ಗದರ್ಶನ ಶಿಬಿರ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮುಖ್ಯ ಅತಿಥಿಗಳು : ಜಿಪಂ ಸಿಇಓ ಶ್ರೀಮತಿ ಗಾಯಿತ್ರಿ, ಡಾ. ಬಿ.ಎಸ್. ಕೃಷ್ಣಪ್ರಸಾದ್, ಶ್ರೀನಿವಾಸ್, ಪ್ರಸನ್ನಕುಮಾರ್, ಶ್ರೀ ರಾಜೇಶ್ವರಿ, ಕಾರ್ತಿಕ್, ಶ್ರೀಮತಿ ರಮ್ಯಾ, ನಾಗರಾಜು, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಹೆಚ್.ಎಸ್. ಪ್ರಕಾಶ್, ಸ್ಥಳ: ಸಂಘದ ಆವರಣ, ಡಿ. ಬನುಮಯ್ಯ ರಸ್ತೆ, ಬೆಳಗ್ಗೆ 10.30 ರಿಂದ.

■ **ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಮೈಸೂರು ಜಿಲ್ಲಾ ಸಮಿತಿ, ಮೈಸೂರು ಸೈನ್ಸ್ ಫೌಂಡೇಷನ್ :** ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಯು.ಜಿ. ಮೋಹನ್‌ಕುಮಾರ್ ಆರಾಧ್ಯ ರಚಿಸಿರುವ ವಿಶ್ವ ವಿಖ್ಯಾತ ವಿಜ್ಞಾನಿಗಳ ಚಿತ್ರಕಲಾ ಪ್ರದರ್ಶನ, ಉದ್ಘಾಟನೆ : ಹಿರಿಯ ವಿಜ್ಞಾನಿ ಡಾ. ಟಿ. ತಿಪ್ಪೇಸ್ವಾಮಿ, ಅಧ್ಯಕ್ಷತೆ : ಮೈಸೂರು ಸೈನ್ಸ್ ಫೌಂಡೇಷನ್ ಅಧ್ಯಕ್ಷ ಸಿ. ಕೃಷ್ಣೇಗೌಡ, ಮುಖ್ಯ ಅತಿಥಿಗಳು: ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಅಧ್ಯಕ್ಷ ಡಾ. ಆರ್. ಶೇಖರ್‌ನಾಯಕ್, ಉಪಾಧ್ಯಕ್ಷ ಡಾ. ಶಾಮೇಶ್, ಕಾರ್ಯದರ್ಶಿ ಜಿ.ಬಿ. ಸಂತೋಷ್ ಕುಮಾರ್, ಸಹ ಕಾರ್ಯದರ್ಶಿ ಹೆಚ್.ವಿ. ಮುರಳೀಧರ, ಕಲಾವಿದ ಯು.ಜಿ. ಮೋಹನ್ ಕುಮಾರ್ ಆರಾಧ್ಯ, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10.30 ರಿಂದ.

■ **ಉಪ್ಪಾರ ಸ್ನೇಹ ಬಳಗ :** ಸನ್ಮಾನ ಸಮಾರಂಭ, ಸಾನ್ನಿಧ್ಯ : ಶ್ರೀ ಮಹದೇವಸ್ವಾಮಿ, ಉದ್ಘಾಟನೆ : ಮಾಜಿ ಸಚಿವ ಸಿ. ಪುಟ್ಟರಂಗಶೆಟ್ಟಿ, ಅಧ್ಯಕ್ಷತೆ : ವಕೀಲ ಯು. ವೆಂಕೋಬ, ಕ್ಯಾಲೆಂಡರ್ ಬಿಡುಗಡೆ : ಹಿರಿಯ ಸಾಹಿತಿ ಸಿ. ಚಾಮಶೆಟ್ಟಿ, ಉಪಸ್ಥಿತರು : ಶ್ರೀಮತಿ ಲತಾಸಿದ್ದಶೆಟ್ಟಿ, ಎಸ್.ಎನ್. ಕಲ್ಲೇಶ್, ಶಿವಕುಮಾರ್, ನಟರಾಜು, ನಾಗರಾಜು, ಮಹದೇವಸ್ವಾಮಿ, ಶಿವನಂಜಶೆಟ್ಟಿ, ಶಿವಕುಮಾರ್, ಪ್ರಾಸ್ತಾವಿಕ ನುಡಿ:ಕೆ.ಎಂ. ಶಿವಕುಮಾರಸ್ವಾಮಿ, ಸ್ಥಳ: ಹೋಟೆಲ್ ಗೋವರ್ಧನ್ ಸಭಾಂಗಣ, ಶ್ರೀ ಹರ್ಷ ರಸ್ತೆ, ಮಧ್ಯಾಹ್ನ 1ಕ್ಕೆ.

■ **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ :** 33ನೇ ನಿರಂತರ ಕಳೆಮನೆ ಸಂಭ್ರಮ ಮತ್ತು ಶ್ರೀ ಪುರಂದರ ದಾಸ ಮತ್ತು ಶ್ರೀ ತ್ಯಾಗರಾಜ ಆರಾಧನಾ ಸಂಗೀತ ನೃತ್ಯ ಮಹೋತ್ಸವ, ವಿದುಷಿ ವೀಣಾ ಎಂ. ಸಾಮಗ, ಗುರು ಸೂರ್ಯ ಗಾಯತ್ರಿದೇವಿ, ಡಾ. ರೇಖಾ ಗಿರೀಶ್, ವಿದುಷಿ ಸುನೀತಾ ಸುಕುಮಾರನ್ ಅವರಿಗೆ ಶ್ರೀ ಪುರಂದರ ತ್ಯಾಗರಾಜ ಕಳೆಮನೆ ಅಂತಾರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಸ್ಟಾರ್ ಆಫ್ ಮೈಸೂರ್ ಮತ್ತು ಮೈಸೂರು ಮಿತ್ರ ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ. ಗಣಪತಿ, ನಿವೃತ್ತ ಪ್ರಾಜೆಕ್ಟ್ ಡೈರೆಕ್ಟರ್ ಡಾ. ರಾಜು ವರದಮೇಸ್ತ್ರಿ, ಹಿರಿಯ ಮಕ್ಕಳ ತಜ್ಞ ಡಾ. ಯು.ಜಿ. ಶೆಣೈ, ಸ್ಥಳ: #262, 1ನೇ ಕ್ರಾಸ್, ಎಂ.ಜಿ. ಕೊಪ್ಪಲು, ಹೆಬ್ಬಾಳು 2ನೇ ಹಂತ, ಮಧ್ಯಾಹ್ನ 2.30ಕ್ಕೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಸುಮಧ್ವ–ವಿಜಯ ಎಕ್ಸ್‌ಪ್ರೆಸ್, ಮಧ್ವ–ಪುರಂದರ ನಮನ, ಗಾನಸಿರಿ–ವೇದಾಂತ ಲಹರಿ, ಪಂಡಿತ್ ಭೀಮಸೇನಾಚಾರ್ಯ ಆತನೂರು, ವಿದ್ವಾನ್ ಅನಂತರಾಜ್ ಮಿಸ್ತ್ರಿ ಅವರಿಂದ ಸುಮಧ್ವ ವಿಜಯ 15 ಮತ್ತು 16ನೇ ಸರ್ಗಗಳ ವಿಶ್ಲೇಷಣೆ ಹಾಗೂ ಗಾಯನ, ಸಮಾರೋಪ ಸಮಾರಂಭ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5.30 ರಿಂದ.

■ **ಶ್ರೀ ಚಿಕ್ಕಲಿಂಗೇಶ್ವರಸ್ವಾಮಿ ದೇವಸ್ಥಾನ :** ಶ್ರೀ ಮದ್ರಾಜಯೋಗಿ ಶ್ರೀ ಚಿಕ್ಕಲಿಂಗಣ್ಣಸ್ವಾಮಿಯವರ 87ನೇ ವರ್ಷದ ಆರಾಧನಾ ಮಹೋತ್ಸವ, ಪ್ರತಿನಿತ್ಯ ಸಂಜೆ 5.30 ರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಭಜನೆ, ವಿದುಷಿ ಡಾ. ಜ್ಯೋತಿಶಂಕರ್ ಅವರಿಂದ ಅವಧೂತ ಪರಂಪರೆ ಕುರಿತು ಪ್ರವಚನ, ಸ್ಥಳ: ದೇವಸ್ಥಾನ, ಉಪ್ಪಿನಕೇರಿ, ಮಂಡಿ ಮೊಹಲ್ಲಾ, ಸಂಜೆ 6.30 ರಿಂದ.

■ **ಅನಾಥಾಲಯ :** ಇಸ್ರೋದ ಹಿರಿಯ ವ್ಯೋಮ ವಿಜ್ಞಾನಿ ದಂಪತಿ ಶ್ರೀಮತಿ ನಂದಿನಿ ಮತ್ತು ಹರಿನಾಥ್ ಅವರಿಂದ “ಚಂದ್ರಯಾನ–3 ಒಂದು ಒಳನೋಟ” ಕುರಿತು ಉಪನ್ಯಾಸ, ಅಧ್ಯಕ್ಷತೆ : ಅನಾಥಾಲಯ ಅಧ್ಯಕ್ಷ ಸಿ.ವಿ. ಗೋಪಿನಾಥ್, ಸ್ಥಳ: ಅನಾಥಾಲಯ ಸಭಾಂಗಣ, ಸಂಜೆ 4ಕ್ಕೆ

■ **ಭಾರತೀಯ ವಿದ್ಯಾರ್ಥಿ ಸಂಘ, ಸಂಶೋಧಕರ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟ, ಮಾನಸಗಂಗೋತ್ರಿ:** ಯುವ ಕಲಾವಿದ ಹೊ.ನಂ.ಅಂಕರಾಜು ಅವರ ತಾಯಿ ಚಿಕಿತ್ಸೆಯ ಸಹಾಯಾರ್ಥವಾಗಿ ಸಂಗೀತ ಗೋಷ್ಠಿ, ಉದ್ಘಾಟನೆ: ಚಿತ್ರ ನಟ ಪ್ರಕಾಶ್ ರೈ, ಹಿಂದೂಸ್ಥಾನಿ ಗಾಯಕಿ ಸಂಗೀತ ಕಟ್ಟಿ, ಮುಖ್ಯ ಅತಿಥಿಗಳು: ಆಧ್ಯಾತ್ಮಿಕ ಚಿಂತಕ ಶಂಕರ ದೇವನೂರು, ಮೈಸೂರು ವಿವಿ ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಪ್ರೊ. ಬಿ.ಎಸ್. ಚಂದ್ರಶೇಖರ್, ಆಡಳಿತ ಅಧಿಕಾರಿ ಪ್ರೊ.ಎಸ್.ಟಿ.ರಾಮಚಂದ್ರ, ಡಾ. ಸುಶ್ರುತ್‌ಗೌಡ, ಅಕ್ಕ ಐಎಎಸ್ ಅಕಾಡೆಮಿ ಮುಖ್ಯಸ್ಥ ಡಾ.ಶಿವಕುಮಾರ್, ಮಾಜಿ ಮೇಯರ್ ಪುರುಷೋತ್ತಮ್, ಕರ್ನಾಟಕ ರಾಜ್ಯ ಸಂಶೋಧಕರ ಸಂಘದ ಅಧ್ಯಕ್ಷ ಮರಿದೇವಯ್ಯ, ಪ್ರಾಧ್ಯಾಪಕರಾದ ಪ್ರೊ. ವಿಜಯಲಕ್ಷ್ಮೀ ಮ.ನಾ.ಪುರ, ವಿದ್ಯಾರ್ಥಿ ಸಂಪರ್ಕ ಅಧಿಕಾರಿ ಡಾ.ನವೀನ್ ಮೌರ್ಯ, ಸಂಶೋಧಕರ ಸಂಘದ ಅಧ್ಯಕ್ಷ ಸಿ. ಮಹೇಶ್‌ಕುಮಾರ್, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಸಚಿನ್, ಸ್ಥಳ: ಮಾನಸಗಂಗೋತ್ರಿ ಸೆನೆಟ್ ಭವನ, ಸಂಜೆ 4ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಅಘಹರಾನಂದ ಅವರಿಂದ ಸೋದರ ಸಂನ್ಯಾಸಿಗಳೊಂದಿಗೆ ಸ್ವಾಮಿ ವಿವೇಕಾನಂದರು ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಕರ್ನಾಟಕ ಸರ್ಕಾರ, ಧಾರ್ಮಿಕ ದತ್ತಿ ಇಲಾಖೆ:** ಮೈಸೂರು ಅರಮನೆ ಕೋಟೆ ಆವರಣದಲ್ಲಿರುವ ಶ್ರೀ ತ್ರಿಣೇಶ್ವರಸ್ವಾಮಿಯವರ ಬ್ರಹ್ಮೋತ್ಸವ, ರಾತ್ರಿ 7ಕ್ಕೆ ಶಯನೋತ್ಸವ, ಸ್ಥಳ: ದೇವಸ್ಥಾನ, ಅರಮನೆ ಆವರಣ.

■ **ಶ್ರೀ ಎಲ್ಲಮ್ಮತಾಯಿ ದೇವಸ್ಥಾನ :** ಭರತ ಹುಣ್ಣಿಮೆ ಅಂಗವಾಗಿ ಓಂ ಶ್ರೀ ಎಲ್ಲಮ್ಮತಾಯಿ ಅಮ್ಮನವರ 20ನೇ ವರ್ಷದ ಪೂಜಾ ಮಹೋತ್ಸವ, ಸಂಜೆ 6ಕ್ಕೆ ವಿಶೇಷ ಪೂಜೆ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ರಾಜರಾಜೇಶ್ವರಿ ನಿಲಯ, ರಾಮಾನುಜ ರಸ್ತೆ, ಕೆ.ಆರ್. ಮೊಹಲ್ಲಾ.

■ **ನಟನ ರಂಗ ಶಾಲೆ :** ವಾರಾಂತ್ಯ ರಂಗ ಪ್ರದರ್ಶನ, ನಟನ ರಂಗಶಾಲೆಯ ಮಕ್ಕಳಿಂದ ಡಾಣಾ ಡಂಗೂರ ನಾಟಕ ಪ್ರದರ್ಶನ, ನಿರ್ದೇಶನ : ಲಾವಣ್ಯ ಮೈಸೂರು, ರಚನೆ : ಶ್ರೀಮತಿ ವೈದೇಹಿ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಜಿಪಿಐಇಆರ್ ರಂಗ ತಂಡ :** ಜಿಪಿಐಇಆರ್ ರಂಗ ತಂಡದಿಂದ ಮಂಟೇಸ್ವಾಮಿ ಕಥಾ ಪ್ರಸಂಗ ನಾಟಕ ಪ್ರದರ್ಶನ, ನಿರ್ದೇಶನ : ಹಿರಿಯ ರಂಗಕರ್ಮಿ ಮೈಮ್ ರಮೇಶ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ

■ **ಮೈಸೂರು ಸೈನ್ಸ್ ಫೌಂಡೇಷನ್ :** ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ರಾಷ್ಟ್ರ ಮಟ್ಟದ ವೆಬಿನಾರ್ ಸರಣಿ ಉಪನ್ಯಾಸ ಕಾರ್ಯಕ್ರಮ, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಸಹಾಯಕ ಪ್ರಾಧ್ಯಾಪಕ ಡಾ. ಎಂ.ಪಿ. ರಾಘವೇಂದ್ರ ಅವರಿಂದ ಜಗದೀಶ್‌ಚಂದ್ರ ಬೋಸ್ : ನಿಜವಾದ ಭಾರತೀಯ ವಿಜ್ಞಾನಿ ಕುರಿತು ಉಪನ್ಯಾಸ, webinar : https://bit.ly/3ww9EDk

■ **ಅಷ್ಟಾಂಗಯೋಗ ವಿಜ್ಞಾನ ಮಂದಿರಂ:** ವಿದ್ವಾನ್ ಕೆ. ಸುದರ್ಶನ್ ಅವರಿಂದ ಆತ್ಮಗುಣಗಳು ಕುರಿತು ಉಪನ್ಯಾಸ, ಸ್ಥಳ: ಅಷ್ಟಾಂಗಯೋಗ ವಿಜ್ಞಾನಮಂದಿರಂ, ಲಕ್ಷ್ಮೀಪುರಂ, ಸಂಜೆ 6.45ಕ್ಕೆ.

■ **ರಂಗಾಯಣ :** ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ವಿರಚಿತ ‘ಕಾಕನಕೋಟೆ’ ನಾಟಕ ಪ್ರದರ್ಶನ, ನಿರ್ದೇಶನ : ಎಸ್. ರಾಮನಾಥ, ಸ್ಥಳ: ರಂಗಾಯಣದ ವನರಂಗ, ಸಂಜೆ 6.45ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ವೈ.ಎಂ.ಯಾಕೊಳ್ಳಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಒಡಹುಟ್ಟಿನ ನುಡಿಗಳು–ಕನ್ನಡದ ಒಡನಾಡಿ ಭಾಷೆಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ–ಡಾ.ಎಂ.ಪಿ.ರೇಖಾ, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ. ಆರ್. ರಾಮಕೃಷ್ಣ, 6.50 ರೈತರಿಗೆ ಸಲಹೆ, 9.40 ನಮ್ಮ ಆರೋಗ್ಯ–ಮಕ್ಕಳಲ್ಲಿ ಕಂಡುಬರುವ ಬೆಡ್‌ವೆಟ್ಟಿಂಗ್ ಸಮಸ್ಯೆಗಳು ಮತ್ತು ಪರಿಹಾರ ಕುರಿತು ಡಾ.ಶಶಿಕಿರಣ್ ಕೆ.ಬಿ. ಅವರೊಂದಿಗೆ ಮಾತುಕತೆ, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ನಂಜನಗೂಡು ತಾಲೂಕು ಸೂರಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ಮನ್ ಕೀ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತು ನಂತರ ಮನ್ ಕೀ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ **ಮಧ್ಯಾಹ್ನ:** 12.45 ಜನಪದ ಸಂಗೀತ–ಮಳೆಗರಸಮ್ಮ ಮತ್ತು ಸಂಗಡಿಗರು, 1.20 ಭಾವಗೀತೆ–ಸಿದ್ಧರಾಮು, 2.35 ಕನ್ನಡ ಚಲನಚಿತ್ರ ಧ್ವನಿ ವಾಹಿನಿ “ಚಂದನದ ಗೊಂಬೆ”, 4.00 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಶ್ರೀ ರಾಮ ನಿರ್ಮಾಣ, ಪ್ರಸ್ತುತಿ– ಪುತ್ತೂರು ಬೆಟ್ಟಂಪಾಡಿಯ ಕರ್ನಾಟಕ ಯಕ್ಷ ಭಾರತಿಯ ಕಲಾವಿದರು, 6.50 ಕೃಷಿರಂಗ, ನಾಟಕ “ಬಿತ್ತಿದಂತೆ ಬೆಳೆ”, ರಚನೆ– ಡಾ. ಮುರಳೀಧರ ಕಿರಣಕೆರೆ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ, 8.00 ಮನ್ ಕೀ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ಪಂಡಿತ್ ಮನು ಕುಮಾ ಸೇನ್–ಸಿತಾರ್ ವಾದನ

'ವ್ಯಂಗ್ಯಚಿತ್ರ ಸಿಂಹಾವಲೋಕನ' ಕೃತಿ ಬಿಡುಗಡೆ

ಓದುಗರ ಸೆಳೆಯಲು ವ್ಯಂಗ್ಯಚಿತ್ರ ಪ್ರಕಟಣೆ ಒಂದು ಸೂತ್ರ

ಇದು ತತ್‌ಕ್ಷಣಕ್ಕೆ ಓದುಗರನ್ನು ಹಿಡಿದು ನಿಲ್ಲಿಸುತ್ತದೆ; ಹಿರಿಯ ಪತ್ರಕರ್ತ ಡಾ.ಕೆ.ಬಿ.ಗಣಪತಿ

ಮೈಸೂರು,ಫೆ.24(ಪಿಎಂ)– ಓದುಗರನ್ನು ಸೆಳೆದಿಡಲು ಪತ್ರಿಕೆಗಳ ಮುಖಪುಟದಲ್ಲಿ ವ್ಯಂಗ್ಯಚಿತ್ರ ಮತ್ತು ಬಾಕ್ಸ್ ಐಟಂ ಪ್ರಕಟಣೆ ಒಂದು ಸೂತ್ರ. ಆದರೆ ಇತ್ತೀಚಿನ ದಿನಗಳಲ್ಲಿ ವ್ಯಂಗ್ಯಚಿತ್ರ ಪ್ರಕಟಣೆ ಅಪರೂಪವಾಗುತ್ತಿದೆ ಎಂದು 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಹೇಳಿದರು.

ಮೈಸೂರಿನ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಭವನದಲ್ಲಿ ಕರ್ನಾಟಕ ವ್ಯಂಗ್ಯ ಚಿತ್ರಕಾರರ ಸಂಘ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಜಂಟಿ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವ್ಯಂಗ್ಯಚಿತ್ರಕಾರ ಎಂ.ವಿ.ನಾಗೇಂದ್ರಬಾಬು (ಬ್ಯಾಂಟರ್ ಬಾಬು) ರಚನೆಯ 'ವ್ಯಂಗ್ಯಚಿತ್ರ ಸಿಂಹಾವಲೋಕನ' ಕೃತಿ ಬಿಡುಗಡೆ ಸಮಾರಂಭವನ್ನು ಕ್ಯಾನ್ವಾಸ್ ಮೇಲೆ ಚಿತ್ರವೊಂದನ್ನು ರಚಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ದೊಡ್ಡ ಪತ್ರಿಕೆಗಳಿಗೆ ವ್ಯಂಗ್ಯಚಿತ್ರ ಮತ್ತು ಬ್ಯಾಕ್ಸ್ ಐಟಂ ಎರಡು ಮುಖಪುಟಕ್ಕೆ ಮುಖ್ಯ. ಓದುಗರನ್ನು ತತ್‌ಕ್ಷಣಕ್ಕೆ ಅವು ಸೆಳೆಯುತ್ತವೆ. ಓದುಗರನ್ನು ಹಿಡಿದು ನಿಲ್ಲಿಸಲು ಇದೊಂದು ಸೂತ್ರ. ಆದರೆ ಇತ್ತೀಚಿನ ದಿನಗಳಲ್ಲಿ ವ್ಯಂಗ್ಯಚಿತ್ರ ಅಪರೂಪವಾಗುತ್ತಿದೆ. ಒಬ್ಬ ವ್ಯಂಗ್ಯಚಿತ್ರಕಾರನಿಗೆ ಹಾಸ್ಯಪ್ರಜ್ಞೆ ಮುಖ್ಯ. ಟೈಮ್ಸ್ ಆಫ್ ಇಂಡಿಯಾದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಖ್ಯಾತ ವ್ಯಂಗ್ಯಚಿತ್ರಕಾರ ಆರ್.ಕೆ.ಲಕ್ಷ್ಮಣ್ ವಿಶ್ವವಿಖ್ಯಾತಿಯಾದವರು. ಅವರೊಮ್ಮೆ ಸಂದರ್ಶನದಲ್ಲಿ ತಮ್ಮ ವ್ಯಂಗ್ಯಚಿತ್ರ ಖ್ಯಾತಿಗೆ ಸಂಬಂಧಿಸಿದಂತೆ 'ಅದು ದೊಡ್ಡ ವಿಷಯ ವೇನಲ್ಲ, ಭಾರತದಲ್ಲಿ ವ್ಯಂಗ್ಯಚಿತ್ರಕಾರ ನಾಗುವುದು ಬಹಳ ಸುಲಭ. ಏಕೆಂದರೆ ಇಲ್ಲಿ ಪ್ರತಿದಿನ ವಿಷಯಗಳು ದೊರೆಯುತ್ತವೆ' ಎಂದಿದ್ದರು ಎಂದು ಹೇಳಿದರು.



ಮೈಸೂರಿನ ಕನ್ನಡ ಸಾಹಿತ್ಯ ಭವನದಲ್ಲಿ ಶನಿವಾರ 'ವ್ಯಂಗ್ಯಚಿತ್ರ ಸಿಂಹಾವಲೋಕನ' ಕೃತಿ ಬಿಡುಗಡೆ ಮಾಡಲಾಯಿತು. (ಎಡದಿಂದ) ಮೈಸೂರು ಕಸಾಪ ಜಂಟಿ ಕಾರ್ಯದರ್ಶಿ ಕೆಂಪಣ್ಣ, ಯೋಗ ವಿತ್ ಶ್ರೀನಾಥ್ ಸಂಸ್ಥಾಪಕ ಶ್ರೀನಾಥ್, ಕೃತಿ ಕರ್ತೃ ಎಂ.ವಿ.ನಾಗೇಂದ್ರಬಾಬು, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಸಂಸದ ಪ್ರತಾಪ್ ಸಿಂಹ, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ, ಯದುಗಿರಿ ಮಠದ ಲಕ್ಷ್ಮೀನರಸಿಂಹ ದೇವಸ್ಥಾನದ ಸಿಇಓ ಕೆ.ಆರ್.ಯೋಗಾನರಸಿಂಹನ್, ಜಿಲ್ಲಾ ಕಸಾಪ ಉಪಾಧ್ಯಕ್ಷ ಎನ್.ಅನಂತ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಅಂದರೆ ನಮ್ಮ ರಾಜಕಾರಣಿಗಳು, ಸಾಮಾಜಿಕ ಕಾರ್ಯಕರ್ತರು ಸೇರಿದಂತೆ ಬೇರೆ ಬೇರೆ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡವರ ನಡೆ–ನುಡಿ, ಆಚಾರ–ವಿಚಾರ ಹಾಗೂ ಅವರು ಘಟನೆಯೊಂದರ ಸಂಬಂಧ ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಆರ್.ಕೆ.ಲಕ್ಷ್ಮಣ್ ಅವರಂತಹ ವ್ಯಂಗ್ಯ ಚಿತ್ರಕಾರರಿಗೆ ಅಲ್ಲಿಯೇ ಒಳ್ಳೆಯ ವಿಷಯ ವಸ್ತುಗಳು ವ್ಯಂಗ್ಯಚಿತ್ರ ರಚನೆಗೆ ದೊರೆಯುತ್ತವೆ. ನಮ್ಮ ದೇಶದಲ್ಲಿ ವ್ಯಂಗ್ಯಚಿತ್ರ ರಚನೆಗೆ ಒಳ್ಳೆಯ ಅವಕಾಶವಿದೆ ಎಂದರು.

ಚಿತ್ರಕಲೆ, ಸಾಹಿತ್ಯ ಸೇರಿದಂತೆ ಯಾವುದೇ ಕಲೆಯಾದರೂ ಹುಟ್ಟುವಾಗಲೇ ಬರಬೇಕು. ಹಾಡುತ್ತಾ ಹಾಡುತ್ತಾ ರಾಗ ಎನ್ನುತ್ತಾರೆ. ಆದರೆ ಮೂಲತಃ ಒಳ್ಳೆಯ ಕಂಠ ಇರಬೇಕು. ಇಲ್ಲದಿದ್ದರೆ ಥಿಯರಿ ಮಾತ್ರ ತಿಳಿದುಕೊಳ್ಳಬೇಕಾಗುತ್ತದೆ ಹೊರತು ಪ್ರಯೋಗ ಮಾಡಲು ಸಾಧ್ಯವಾಗುವುದಿಲ್ಲ ಎಂದು ಹೇಳಿದರು.

ಸ್ವಾತಂತ್ರ್ಯ ಪೂರ್ವ ಮತ್ತು ನಂತರದಲ್ಲಿ 'ಶಂಕರ್ಸ್ ವೀಕ್ಲಿ' ಎಂಬ ಪತ್ರಿಕೆ ಇತ್ತು. ಪತ್ರಿಕೆಯ ನಡೆಸುತ್ತಿದ್ದ ಶಂಕರ್ ಖ್ಯಾತ ವ್ಯಂಗ್ಯಚಿತ್ರಕಾರರೂ ಆಗಿದ್ದರು. ಅವರು ನೆಹರು ಅವರಿಗೆ ಆತ್ಮೀಯರಾಗಿದ್ದರು. ಆದರೆ ಅವರ ವ್ಯಂಗ್ಯಚಿತ್ರಗಳು ಕಾಂಗ್ರೆಸ್‌ಗೆ ಕಬ್ಬಿಣದ ಕಡಲೆಯಾಗಿ ಕಾಣಲು ಶುರುವಾಯಿತು. ಅವರ ವ್ಯಂಗ್ಯಚಿತ್ರದಲ್ಲಿ ಹಾಸ್ಯ– ವ್ಯಂಗ್ಯ ಜೊತೆಗೆ ರಾಜಕೀಯಕ್ಕೆ ಸಂಬಂಧಿಸಿದಂತೆ ಕೆಲವು ಸಂದೇಶ ಸಹ ಇರುತ್ತಿತ್ತು. ರಾಜಕಾರಣಿಗಳು ಸೇರಿದಂತೆ ಇತರರು ತಮ್ಮ ಬಗ್ಗೆ ಬರೆದ ಸಂಬಂಧ ಕೋರ್ಟ್‌ನಲ್ಲಿ ಈ ಪತ್ರಿಕೆ ವಿರುದ್ಧ ಕೇಸ್ ದಾಖಲಿಸಲು ಪ್ರಾರಂಭ ಮಾಡಿದರು. ಜೊತೆಗೆ ಜನರು ಓದುವುದನ್ನೂ ಕಡಿಮೆ ಮಾಡಿದ ಹಿನ್ನೆಲೆಯಲ್ಲಿ ಆ ಪತ್ರಿಕೆ ಮುಚ್ಚಿ ಹೋಯಿತು ಎಂದು ತಿಳಿಸಿದರು.

ಅದೇ ರೀತಿಯಲ್ಲಿ ಲಂಡನ್‌ನಲ್ಲಿ 'ಪಂಚ್' ಎಂಬ ಪತ್ರಿಕೆ ಇತ್ತು. ಅದು ವಿಶ್ವವಿಖ್ಯಾತವಾಗಿತ್ತು. ಸಾಧಾರಣ ವ್ಯಕ್ತಿಗೆ ಅದರಲ್ಲಿ ಪ್ರಕಟಗೊಳ್ಳುವ ವ್ಯಂಗ್ಯಚಿತ್ರ ಗ್ರಹಿಸಲಿಕ್ಕೂ ಆಗುತ್ತಿರಲಿಲ್ಲ. ಅಂದರೆ ಲೋಕಪ್ರಜ್ಞೆ, ಸಾಹಿತ್ಯ ಪ್ರಜ್ಞೆ ಇರಬೇಕು. ಜೊತೆಗೆ ದೊಡ್ಡ ದೊಡ್ಡ ನಾಯಕರ ನಡೆ–ನುಡಿ, ಅವರ ಕಾರ್ಯವೈಖರಿ ಬಗ್ಗೆ ಅರಿವು ಇದ್ದರೆ ಮಾತ್ರ ಅಲ್ಲಿನ ವ್ಯಂಗ್ಯ ಚಿತ್ರವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತಿತ್ತು. ಹೀಗೆ ವಿವಿಧ ಆಯಾಮಗಳಲ್ಲಿ ವ್ಯಂಗ್ಯಚಿತ್ರ ಬೆಳೆದು ಬಂದಿದೆ ಎಂದರು.

ನಾವು ಸರಸ್ವತಿಪುರಂನಲ್ಲಿ ಪತ್ರಿಕೆ ಪ್ರಾರಂಭಿಸಿದಾಗ, ಎಂ.ವಿ.ನಾಗೇಂದ್ರಬಾಬು ಅವರ ಪರಿಚಯವಾಯಿತು. ಇವರ ವ್ಯಂಗ್ಯಚಿತ್ರದ ಸ್ಟ್ರೋಕ್ಸ್ ಇಷ್ಟವಾಯಿತು. ಅವರ ವ್ಯಂಗ್ಯಚಿತ್ರದಲ್ಲಿ ವ್ಯಂಗ್ಯ ಅಷ್ಟು ಮೆಚ್ಚಿಗೆ ಆಗದಿದ್ದರೂ ಅವರ ಚಿತ್ರದ ಗೆರೆಗಳು ಅದ್ಭುತವಾಗಿರುತ್ತವೆ. ಹಾಗಾಗಿ ಅವರು ನಮ್ಮ ಪತ್ರಿಕೆಯೊಟ್ಟಿಗೆ ಬೆಳೆದು ಬಂದಿದ್ದಾರೆ. ಬಹುಶಃ ಅದೇ ಕಾರಣಕ್ಕಾಗಿ ವಿವಿಧ ಸ್ಕಾಲರ್‌ಶಿಪ್ ದೊರೆಯುವಂತಾಗಿ ವಿದೇಶಕ್ಕೂ ಹೋಗಿ ಬರುವ ಅವಕಾಶ ಅವರಿಗೆ ಲಭಿಸಿತು ಎಂದು ತಿಳಿಸಿದರು.

ಸಂಸದ ಪ್ರತಾಪ್ ಸಿಂಹ ಕೃತಿ ಬಿಡುಗಡೆ ಮಾಡಿದರು. ಕೃತಿ ಕುರಿತು ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಮಾತನಾಡಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಕಾಳಿದಾಸ ರಸ್ತೆಯ ಯದುಗಿರಿ ಮಠದ ಲಕ್ಷ್ಮೀನರಸಿಂಹ ದೇವಸ್ಥಾನದ ಸಿಇಓ ಕೆ.ಆರ್.ಯೋಗಾನರಸಿಂಹನ್, ಯೋಗ ವಿತ್ ಶ್ರೀನಾಥ್ ಸುಸ್ಥಾಪಕ ಶ್ರೀನಾಥ್, ಕೃತಿ ಕರ್ತೃ ಎಂ.ವಿ.ನಾಗೇಂದ್ರಬಾಬು, ಮೈಸೂರು ಕಸಾಪ ಉಪಾಧ್ಯಕ್ಷ ಎನ್.ಅನಂತ್, ಜಂಟಿ ಕಾರ್ಯದರ್ಶಿ ಕೆಂಪಣ್ಣ, ಗೌರವ ಕಾರ್ಯದರ್ಶಿ ಚಿಲೂರು ಚಂದ್ರಶೇಖರ್ ಮತ್ತಿತರರು ಹಾಜರಿದ್ದರು.

ವ್ಯಂಗ್ಯಚಿತ್ರ ರಚನೆ ಅಷ್ಟು ಸುಲಭವಲ್ಲ, ಅದು ಹೆಚ್ಚು ಸೃಜನಶೀಲತೆ ಅಪೇಕ್ಷಿಸುತ್ತದೆ ; ಸಂಸದ ಪ್ರತಾಪ್ ಸಿಂಹ

ಮೈಸೂರು,ಫೆ.24(ಪಿಎಂ)– ವ್ಯಂಗ್ಯಚಿತ್ರ ರಚನೆ ಅಷ್ಟು ಸುಲಭವಲ್ಲ. ಅದು ಹೆಚ್ಚು ಸೃಜನಶೀಲತೆ ಅಪೇಕ್ಷಿಸುತ್ತದೆ. ಆದರೆ ಇತ್ತೀಚೆಗೆ ವ್ಯಂಗ್ಯಚಿತ್ರದ ಬಗ್ಗೆ ಅಭಿರುಚಿ ಕಡಿಮೆಯಾಗುತ್ತಿದೆ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದರು.

ಎಂ.ವಿ.ನಾಗೇಂದ್ರಬಾಬು (ಬ್ಯಾಂಟರ್ ಬಾಬು) ರಚನೆಯ 'ವ್ಯಂಗ್ಯಚಿತ್ರ ಸಿಂಹಾವಲೋಕನ' ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಪ್ರಸ್ತುತ ಪತ್ರಿಕೆ ಓದುವವರ ಸಂಖ್ಯೆಯೇ ಕಡಿಮೆಯಾಗಿದೆ. ಬಹುಶಃ ಮೈಸೂರಿನಲ್ಲಿ ಓದುಗರ ಸಂಖ್ಯೆಯನ್ನು ಹಿಡಿದಿಟ್ಟುಕೊಂಡಿರುವ ಏಕಮಾತ್ರ ಪತ್ರಿಕೆಗಳು ಎಂದರೆ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್'. ರಾಜ್ಯಮಟ್ಟದ ಎಲ್ಲಾ ಪತ್ರಿಕೆಗಳಿಗೂ ಓದುಗರ ಸಂಖ್ಯೆ ಕಡಿಮೆಯಾಗಿದೆ. ಡಿಜಿಟಲ್ ಮುನ್ನೆಲೆಗೆ ಬಂದ ಹಿನ್ನೆಲೆಯಲ್ಲಿ ಮುದ್ರಣ ಮಾಧ್ಯಮವಂತೂ ಹಲವು ದೇಶಗಳಲ್ಲಿ ಸ್ಥಗಿತಗೊಂಡಿವೆ ಎಂದರು.

ಮುದ್ರಣ ಮಾಧ್ಯಮದಲ್ಲಿ ಮೊದಲೆಲ್ಲಾ ಒಂದು ವ್ಯಂಗ್ಯಚಿತ್ರ ಮತ್ತು ವಾರದ ಅಂಕಣ ಬರುತ್ತಿತ್ತು ಇದಕ್ಕಾಗಿ ಜನ ಕಾದಿರುತ್ತಿದ್ದರು. ಆದರೆ ಆ ರೀತಿಯ ಮನಸ್ಥಿತಿ ಇಂದು ಇಲ್ಲವಾಗಿದೆ. ಪ್ರಸ್ತುತದಲ್ಲಿ ಒಂದು ವಿಷಯ ಟಿವಿಯಲ್ಲಿ ಬಂದು, ಚರ್ಚೆ ನಡೆದು, ಆ್ಯಂಕರ್ ಅಭಿಪ್ರಾಯ ಹೇಳುತ್ತಿದ್ದಂತೆ ಅಲ್ಲಿಗೆ ಅದು ಮುಗಿದೇ ಹೋಗುತ್ತದೆ. ಈ ಧಾವಂತದಲ್ಲಿ ಯಾವುದನ್ನೂ ಅವಲೋಕಿಸದೇ ಅಭಿಪ್ರಾಯ ಹೇಳುವುದೂ ಆಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ಇತ್ತೀಚೆಗೆ ನಾನು ವಿದ್ಯುನ್ಮಾನ ಮಾಧ್ಯಮ ಪತ್ರಕರ್ತರೊಬ್ಬರೊಂದಿಗೆ ಮಾತನಾಡುತ್ತಾ, 'ಸರ್ ನೀವು ಮುದ್ರಣ ಮಾಧ್ಯಮದಿಂದ ಬಂದವರು. ಹಾಗಾಗಿ ನೀವು 15 ವರ್ಷಗಳಿಂದ ವಿದ್ಯುನ್ಮಾನ ಮಾಧ್ಯಮದಲ್ಲಿ ಒಳ್ಳೆ ಹೆಸರು ಮಾಡಿಕೊಂಡೇ ಬಂದಿದ್ದೀರಿ. ಏಕೆಂದರೆ ಅದಕ್ಕೆ ಮುದ್ರಣ ಮಾಧ್ಯಮದಲ್ಲಿದ್ದ ನಿಮ್ಮ ಅನುಭವ ಮತ್ತು ತಾಳ್ಮೆ ಎರಡು ಕಾರಣ. ಆದರೆ ಈಗ ನಿನ್ನೆ ಮೊನ್ನೆ ಪದವಿ ಪಡೆದವರು ಟಿವಿಯಲ್ಲಿ ಕುಳಿತು ಧಾವಂತದಲ್ಲಿ ಮನಸ್ಸಿನೊಳಗೆ ಇರುವ ಕಸವನ್ನೇ ಹೊರಹಾಕುತ್ತಾರೆ. ಹಾಗಾಗಿ ಮುದ್ರಣ ಮಾಧ್ಯಮದಲ್ಲಿ ಐದಾರು ವರ್ಷ ಅನುಭವ ಹೊಂದಿದವರಿಗೆ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡಲು ಆದ್ಯತೆ ನೀಡಬೇಕು. ಇಲ್ಲವಾದರೆ ವಿದ್ಯುನ್ಮಾನ ಮಾಧ್ಯಮ ತನ್ನ ಮಹತ್ವ ಕಳೆದುಕೊಳ್ಳಲಿದೆ' ಎಂದು ಅವರಿಗೆ ಹೇಳಿದ್ದೆ ಎಂದು ತಿಳಿಸಿದರು.

ಹಿಂದೆ ಕಾರ್ಟೂನ್‌ನಲ್ಲಿ ಹಾಸ್ಯದ ಜೊತೆಗೆ ಸಂದೇಶ ಚುಚ್ಚುವಂತೆ ಇರುತ್ತಿತ್ತು. ಮುಂದೆ ಯಾವ ರೀತಿ ವ್ಯಂಗ್ಯಚಿತ್ರದ ಅಸ್ತಿತ್ವ ಉಳಿಯುತ್ತದೋ ಗೊತ್ತಿಲ್ಲ. ಆದರೆ ಒಂದು ಕಾಲದಲ್ಲಿ ಅದ್ಭುತವಾದ ವ್ಯಂಗ್ಯಚಿತ್ರಗಳನ್ನು ನೋಡುತ್ತಿದ್ದೆವು. ಒಂದೇ ಚಿತ್ರದಲ್ಲಿ ಎರಡು ಅರ್ಥ ಬರುವ ಪ್ರಯೋಗವನ್ನು ವಿಶ್ವೇಶ್ವರ ಭಟರ ನೇತೃತ್ವದಲ್ಲಿ ಮಾಡಿದ್ದನ್ನು ಕಂಡಿದ್ದೇನೆ ಎಂದು ಹಳೇ ನೆನಪಿಗೆ ಜಾರಿದರು.

ಬೇರೆ ಬೇರೆ ದೇಶದಲ್ಲಿ ಕಾರ್ಟೂನ್‌ಗೆ ಆದ್ಯತೆ ನೀಡಲಾಗಿದೆ. ನಮ್ಮ ದೇಶದಲ್ಲಿ ಅಭಿರುಚಿ ಕಡಿಮೆಯಾಗುತ್ತಿದೆ. ಪತ್ರಿಕೆಗಳು ವ್ಯಂಗ್ಯಚಿತ್ರಕ್ಕೆ ಮಾನ್ಯತೆ ನೀಡಬೇಕಿದೆ. ಅಭಿರುಚಿ ಬೆಳೆಸಲು ವ್ಯಂಗ್ಯಚಿತ್ರಕಾರರೂ ಪ್ರಯತ್ನಿಸುವುದು ಅಗತ್ಯವಿದೆ. ಡಿಜಿಟಲ್‌ನಲ್ಲಿ ಎಷ್ಟೇ ಓದಿದರೂ ಇಂದಿಗೂ ಪತ್ರಿಕೆಯಲ್ಲಿ ಓದುವುದೇ ಹೆಚ್ಚು ಅಚ್ಚುಮೆಚ್ಚು. ಪುಸ್ತಕಗಳ ವಿಚಾರದಲ್ಲೂ ಅಷ್ಟೇ. ಈ ಅಭಿರುಚಿ ಉಳಿಸಿಕೊಳ್ಳಬೇಕು ಎಂದರು.

ಸಾಕ್ಷಿಪ್ರಜ್ಞೆಯಾಗಿ ಕನ್ನಡಾಭಿಮಾನಿಗಳು ನಮ್ಮ ನಡುವೆ ಇದ್ದು, ಇತ್ತೀಚೆಗೆ ಚಾಮುಂಡಿಬೆಟ್ಟದಲ್ಲಿ ರೋಪ್ ವೇ ಆಗಬೇಕೆಂಬ ಪ್ರಸ್ತಾಪ ಬಂದಾಗ ಕನ್ನಡದ ಎಲ್ಲಾ ಮನಸ್ಸುಗಳು ಒಕ್ಕೊರಲಾಗಿ ವಿರೋಧಿಸಿ, ಅದು ಭಕ್ತಿಯ ತಾಣವೇ ಹೊರತು ಪ್ರವಾಸಿ ತಾಣವಲ್ಲ ಎಂದು ಮನವರಿಕೆ ಮಾಡಿಕೊಟ್ಟರು ಎಂದು ಹೇಳಿದರು.

ಹೆಬ್ಬಾಳು ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ವಾರ್ಷಿಕೋತ್ಸವ



ಮೈಸೂರು, ಫೆ.24(ಎಂಕೆ)– ಮೈಸೂರಿನ ಹೆಬ್ಬಾಳು ಸೂರ್ಯಬೇಕರಿ ವೃತ್ತದ ಬಳಿಯ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ 33ನೇ ವರ್ಷದ ವಾರ್ಷಿಕೋತ್ಸವ ಹಾಗೂ ಪಲ್ಲಕ್ಕಿ ಉತ್ಸವಕ್ಕೆ ಶನಿವಾರ ವಿಧ್ಯುಕ್ತ ಚಾಲನೆ ದೊರೆಯಿತು.

ದೇವಸ್ಥಾನದ ಆವರಣದಲ್ಲಿ ನವ ದುರ್ಗೆಯರ ಕಳಸ ಪ್ರತಿಷ್ಠಾಪನೆ ಮೂಲಕ ಉತ್ಸವಕ್ಕೆ ಚಾಲನೆ ನೀಡಲಾಯಿತು. ಬಳಿಕ ಗಣಪತಿ ಪೂಜೆ, ದುರ್ಗಾ ಪೂಜೆ, ಮಹಾಮೃತ್ಯುಂಜಯ ಹಾಗೂ ದುರ್ಗಾಹೋಮ ನೆರವೇರಿಸಲಾಯಿತು. ವಿಶೇಷ ಪೂಜೆ ಹಾಗೂ ಹೋಮದಲ್ಲಿ ನೂರಾರು ಭಕ್ತರು ಭಾಗವಹಿಸಿ, ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಚಾಮುಂಡೇಶ್ವರಿ ಸೇವಾ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಸಾಮೂಹಿಕ ವಿವಾಹ: ನಾಳೆ(ಫೆ.25) ಬೆಳಗ್ಗೆ 6.30 ರಿಂದಲೇ ಕುಂಭಾಭಿಷೇಕ, ಅಲಂಕಾರ ಪೂಜೆ ನಡೆಯಲಿದ್ದು, 10.30ಕ್ಕೆ ಪಲ್ಲಕ್ಕಿ ಉತ್ಸವ ನೆರವೇರಲಿದೆ. 11.20 ರಿಂದ 11.50ರೊಳಗೆ ಸಲ್ಲುವ ವೃಷಭ ಲಗ್ನದಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯಲಿದ್ದು, ಬಳಿಕ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

ಮೇಲುಕೋಟೆಯಲ್ಲಿ ತಮಿಳುನಾಡು ಮಾಜಿ ಮುಖ್ಯಮಂತ್ರಿ ದಿವಂಗತ ಜಯಲಲಿತಾ ಹುಟ್ಟುಹಬ್ಬ ಆಚರಿಸಿದ ಕಟ್ಟಾ ಅಭಿಮಾನಿ!

ಮೇಲುಕೋಟೆ, ಫೆ.24–ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿವಂಗತ ಜಯಲಲಿತಾ ಅವರ ಹುಟ್ಟೂರಾದ ಮೇಲುಕೋಟೆಯ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಅನ್ನದಾನ ಮಾಡುವ ಮೂಲಕ ತಮಿಳುನಾಡಿನ ಅಭಿಮಾನಿಯೊಬ್ಬರು ಜಯಲಲಿತಾ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿ, ಅಭಿಮಾನ ಮೆರೆದಿದ್ದಾರೆ.

ಕೊಯಮತ್ತೂರಿನ ಆರ್.ಎಸ್.ಪುರಂ ನಿವಾಸಿ ಕೋವೈ (ಕೊಯಮತ್ತೂರನ್ನು ಕೋವೈ ಎಂದು ಕರೆಯುತ್ತಾರೆ) ಮೇದರ್ ಸಂಘದ ಅಧ್ಯಕ್ಷ ಕೆ.ಅನ್ಬಳಗನ್, ಜಯಲಲಿತಾ ಹುಟ್ಟುಹಬ್ಬವನ್ನು ಮೇಲುಕೋಟೆಯಲ್ಲಿ ಆಚರಿಸಿದರು. ಇವರು ಕೊಯಮತ್ತೂರಿನ ತಮ್ಮ ಮನೆಗೆ 'ಇದಯ ದೇವದೈ ಪುರಚ್ಚಿತ್ ತಲೈವಿ ಅಮ್ಮಾ ನಿವಾಸಂ' ಎಂದು ಹೆಸರಿಟ್ಟಿದ್ದಾರೆ.

ಜಯಲಲಿತಾ ಅವರ ಕಟ್ಟಾ ಅಭಿಮಾನಿಯಾಗಿರುವ ಇವರು, ಜಯಲಲಿತಾ ಹುಟ್ಟುಹಬ್ಬವಾದ ಫೆ.24ರಂದು ಮೇಲುಕೋಟೆಗೆ ಆಗಮಿಸಿ ಚೆಲುವನಾರಾಯಣಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, ಪ್ರಸಾದ ವಿನಿಯೋಗ ಮಾಡುವುದರ ಜೊತೆಗೆ ಯತಿರಾಜ ದಾಸ ಗುರುಪೀಠಂನಲ್ಲಿ ಅನ್ನದಾನ ಮಾಡುವ ಮೂಲಕ ಜಯಲಲಿತಾ ನಿಧನ ಹೊಂದಿ 8 ವರ್ಷದ ನಂತರವೂ ಅವರ ಹುಟ್ಟುಹಬ್ಬ ಆಚರಿಸಿದ್ದಾರೆ.



ತಾವು ಕಳೆದ 34 ವರ್ಷದಿಂದ ಜಯಲಲಿತಾ ಅವರ ಹುಟ್ಟುಹಬ್ಬ ಆಚರಿಸುತ್ತಾ ಬರುತ್ತಿರುವುದಾಗಿ ಹೇಳಿದ ಅವರು, ಕೊಯಮತ್ತೂರಿನ ಆರ್.ಎಸ್.ಪುರಂನಲ್ಲಿರುವ ರತ್ನ ವಿನಾಯಗರ್ ದೇವಸ್ಥಾನದಲ್ಲಿ ಪ್ರತೀ ದಿನ ಜಯಲಲಿತ ಹೆಸರಿನಲ್ಲಿ ಅರ್ಚನೆ ಮಾಡಿಸುತ್ತಿದ್ದು, ಅವರ ಹುಟ್ಟುಹಬ್ಬದ ದಿನ ಅನ್ನಸಂತರ್ಪಣೆ ಹಾಗೂ ಬಡವರಿಗೆ ಕೈಲಾದ ಸಹಾಯ ಮಾಡುವುದನ್ನು ರೂಢಿಸಿಕೊಂಡಿದ್ದೇನೆ. ಕಳೆದ ಆರೇಳು ವರ್ಷಗಳಿಂದ ಜಯಲಲಿತಾ ಹುಟ್ಟೂರಾದ ಮೇಲುಕೋಟೆಗೆ ಬಂದು ಚೆಲುವನಾರಾಯಣಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, ಅನ್ನದಾನ ಮಾಡುತ್ತಿರುವುದಾಗಿಯೂ ಹೇಳಿದರು.

1985ರಲ್ಲಿ ಸಂಸದರಾಗಿದ್ದ ಜಯಲಲಿತಾ ತನ್ನನ್ನು ಚೆನ್ನೈನಲ್ಲಿ ನಡೆದ ಕಾರ್ಯಕ್ರಮವೊಂದಕ್ಕೆ ಕರೆಸಿಕೊಂಡು ಎಐಎಡಿಎಂಕೆ ವಾರ್ಡ್ ಕಾರ್ಯದರ್ಶಿಯಾಗಿ ನೇಮಕ ಮಾಡಿದ್ದರು. 2003ರಲ್ಲಿ ಮುಖ್ಯಮಂತ್ರಿಯಾದಾಗ ನಮ್ಮ 25ನೇ ವಿವಾಹ ವಾರ್ಷಿಕೋತ್ಸವದಂದು ಮುಖ್ಯಮಂತ್ರಿ ಕಚೇರಿಗೆ ಕರೆಸಿಕೊಂಡು ಅಭಿನಂದಿಸಿದ್ದಲ್ಲದೇ, ಯಾವ ಸಹಾಯ ಬೇಕಿದ್ದರೂ ಕೇಳು ಎಂದು ಹೇಳಿದಾಗ, ವೈಯಕ್ತಿಕವಾಗಿ ಯಾವುದೇ ಸಹಾಯ ಬೇಡ. ನಮ್ಮ ಮೇದರ ಸಮುದಾಯಕ್ಕೆ ಸರ್ಕಾರದ ಮಟ್ಟದಲ್ಲಿ ಸಹಾಯ ಮಾಡಬೇಕೆಂದು ಕೋರಿದ್ದಾಗಿಯೂ, ಅದಕ್ಕೆ ಸ್ಪಂದಿಸಿದ ಅವರು ಮೇದರ ಜನಾಂಗದವರು ಮಾಡುವ ಬುಟ್ಟಿ ಹೆಣೆಯುವ ಗೃಹ ಕೈಗಾರಿಕೆಗೆ ಪ್ರೋತ್ಸಾಹ ನೀಡಿದ್ದರು ಎಂದು ಸ್ಮರಿಸಿಕೊಂಡರು.

4ನೇ ಟೆಸ್ಟ್: 2ನೇ ದಿನದಂತ್ಯಕ್ಕೆ ಭಾರತ 219/7

ರಾಂಚಿ, ಫೆ24– ಯಶಸ್ವಿ ಜೈಸ್ವಾಲ್ ಅವರ ಅರ್ಧಶತಕದ ನೆರವಿನಿಂದ ಭಾರತ ಇಂಗ್ಲೆಂಡ್ ವಿರುದ್ಧದ 4ನೇ ಟೆಸ್ಟ್ ಪಂದ್ಯದ 2ನೇ ದಿನದಾಟದ ಅಂತ್ಯಕ್ಕೆ ಮೊದಲ ಇನ್ನಿಂಗ್ಸ್‌ನಲ್ಲಿ 7 ವಿಕೆಟ್ ನಷ್ಟಕ್ಕೆ 219 ರನ್ ಗಳಿಸಿದೆ. ಆ ಮೂಲಕ 134 ರನ್‌ಗಳ ಹಿನ್ನಡೆಯಲ್ಲಿದೆ.

ಇಂದು 7 ವಿಕೆಟ್ ನಷ್ಟಕ್ಕೆ 302 ರನ್ ಗಳಿಂದ 2ನೇ ದಿನದಾಟ ಆರಂಭಿಸಿದ ಇಂಗ್ಲೆಂಡ್ 353 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಜೋ ರೂಟ್ 122, ರಾಬಿನ್ಸನ್ 58 ರನ್ ಗಳಿಸಿದರು. ಭಾರತದ ಪರ ರವೀಂದ್ರ ಜಡೇಜಾ 4, ಆಕಾಶ್ ದೀಪ್ 3, ಮೊಹಮ್ಮದ್ ಸಿರಾಜ್ 2 ಹಾಗೂ ಅಶ್ವಿನ್ 1 ವಿಕೆಟ್ ಕಬಳಿಸಿದರು.

ನಂತರ ತನ್ನ ಮೊದಲ ಇನ್ನಿಂಗ್ಸ್ ಆರಂಭಿಸಿದ ಭಾರತ ಶೋಯೆಬ್ ಬಷೀರ್ ಅವರ ಮಾರಕ ಬೌಲಿಂಗ್ ದಾಳಿಗೆ ತತ್ತರಿಸಿತು. ತಂಡದ ಪರ ನಾಯಕ ರೋಹಿತ್ ಶರ್ಮಾ 2, ಶುಭ್‌ಮನ್ ಗಿಲ್ 38, ರಜತ್ ಪಾಟೀದಾರ್ 17, ರವೀಂದ್ರ ಜಡೇಜಾ 12, ಸರ್ಫರಾಜ್ ಖಾನ್ 14, ಅಶ್ವಿನ್ 1 ರನ್ ಗಳಿಸಿ ನಿರ್ಗಮಿಸಿದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಜವಾಬ್ದಾರಿಯುತ ಬ್ಯಾಟಿಂಗ್ ನಡೆಸಿದ ಜೈಸ್ವಾಲ್ 8 ಬೌಂಡರಿ, 1 ಸಿಕ್ಸರ್ ಒಳಗೊಂಡ 73 ರನ್ ಗಳಿಸಿ ನಿರ್ಗಮಿಸಿದರು.

ಶರಣರ ಪ್ರತಿ ನುಡಿ ಸಮಾಜವನ್ನು ತಿದ್ದುವ ಮಹತ್ಕಾರ್ಯ ಮಾಡಿದೆ

ಶಾಸಕ ಶ್ರೀವತ್ಸ ಅಭಿಪ್ರಾಯ



ಕೆಎಸ್‌ಎಸ್ ಸಂಸ್ಕೃತ ಪಾಠಶಾಲೆ ಆವರಣದಲ್ಲಿ ಶರಣ ಸಾಹಿತ್ಯ ಪರಿಷತ್ ನಗರ ಘಟಕ ದತ್ತಿ ಕಾರ್ಯಕ್ರಮದಲ್ಲಿ ವಚನ ಗಾಯನ ಮತ್ತು ವ್ಯಾಖ್ಯಾನ ಕಾರ್ಯಕ್ರಮವನ್ನು ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಿದರು.

ಮೈಸೂರು, ಫೆ.24(ಎಸ್‌ಪಿಎನ್)– ಹನ್ನೆರಡನೇ ಶತಮಾನದ ಶರಣರ ಪ್ರತಿ ನುಡಿಗಳು ಸಮಾಜವನ್ನು ಎಚ್ಚರಿಸುವ, ನಡವಳಿಕೆಯನ್ನು ತಿದ್ದುವ ಪ್ರಕ್ರಿಯೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಅಭಿಪ್ರಾಯಪಟ್ಟರು.

ಮೈಸೂರು ವಾಣಿವಿಲಾಸ ರಸ್ತೆಯ (ಜೆಎಸ್‌ಎಸ್ ವಿದ್ಯಾರ್ಥಿ ನಿಲಯ) ಕೆಎಸ್‌ಎಸ್ ಸಂಸ್ಕೃತ ಪಾಠಶಾಲೆ ಆವರಣದಲ್ಲಿ ಶರಣ ಸಾಹಿತ್ಯ ಪರಿಷತ್ ನಗರ ಘಟಕ ದತ್ತಿ ಕಾರ್ಯಕ್ರಮದಲ್ಲಿ ವಚನ ಗಾಯನ ಮತ್ತು ವ್ಯಾಖ್ಯಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು' ವಚನದ ಈ ಸಾಲು ಅರ್ಥಗರ್ಭಿತವಾಗಿವೆ. ಅಲ್ಲದೆ, ನಗರ ಪ್ರದೇಶದ ವೃದ್ಧಾಶ್ರಮಗಳಲ್ಲಿ ಆಶ್ರಯ ಪಡೆಯುತ್ತಿರುವ ತಂದೆ–ತಾಯಿಗಳ ದನಿಯಾಗಿ ಈ ವಚನ ನಿಲ್ಲುತ್ತದೆ. ಹಿಂದಿನ ಕಾಲದಲ್ಲಿ ತಂದೆ–ತಾಯಿಗಳಿಗಿಂತ ಶ್ರೇಷ್ಠರು ಯಾರೂ ಇಲ್ಲ ಎಂಬ ಭಾವನೆ ಇತ್ತು.

ಆದರೆ, ಈಗಿನ ಸಮಾಜದಲ್ಲಿ ಹಣವೇ ಪ್ರಧಾನ ಎಂಬ ಭಾವನೆ ಯುವಕರ ಮನಸ್ಸಿನಲ್ಲಿದೆ. ಹಿರಿಯರಿಗೆ ಸಮಾಜದಲ್ಲಿ ನಮ್ಮವರು ಯಾರೂ ಇಲ್ಲ ಎನ್ನುವ ಭಾವನೆ ಹೋಗಲಾಡಿಸಿ, ಸಮಾಜದಲ್ಲಿ ಹಿರಿಯರನ್ನು ಅತ್ಯಂತ ಪ್ರೀತಿಯಿಂದ ನೋಡಿಕೊಳ್ಳುವ ಪರಿಸರ ನಿರ್ಮಾಣ ಮಾಡುವ ಹೊಣೆ ಸಮಾಜದ್ದು. ಈ ಮೂಲಕ ಶರಣ ಸಾಹಿತ್ಯ ಪರಿಷತ್ ಪದಾಧಿಕಾರಿಗಳು ಯುವ ಸಮೂಹದಲ್ಲಿ ವಚನಗಳ ಮೂಲಕ ಅರಿವು ಮೂಡಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಈ ವೇಳೆ ಶೈಲಾ ಸಿದ್ದರಾಮಪ್ಪ, ಸುಗುಣ, ಬಿ.ಎಂ.ಸಿದ್ದಲಿಂಗಸ್ವಾಮಿ ವಚನಗಳನ್ನು ಸುಶ್ರಾವ್ಯವಾಗಿ ಹಾಡಿದರು. ಡಿ.ಎಸ್.ಸದಾಶಿವಮೂರ್ತಿ, ಮಹೇಶ್ವರಿ, ಡಾ.ಕೆ.ಎಸ್.ಮಲ್ಲೇಶ್ ವಚನಗಳನ್ನು ಅರ್ಥಪೂರ್ಣವಾಗಿ ವ್ಯಾಖ್ಯಾನಿಸಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಶಿವಕುಮಾರ್, ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ಡಾ.ಡಿ.ಎಸ್.ಗುರು, ಕುಮಾರಸ್ವಾಮಿ, ಶಾರದಾ ಶಿವಲಿಂಗಸ್ವಾಮಿ, ನೀಲಾಂಬಿಕ, ಮಲ್ಲೇಶ್, ಮುದ್ದು ಮಲ್ಲೇಶ್ ಸೇರಿದಂತೆ ಇತರರಿದ್ದರು. ಈ ವೇಳೆ ಪರಂಜ್ಯೋತಿ ಮಹಿಳಾ ಬಳಗದ ವಿದ್ಯಾರ್ಥಿಗಳಿಂದ ಸಾಮೂಹಿಕ ವಚನ ಗಾಯನ ನಡೆಸಿಕೊಟ್ಟರು. ಶೈಲಜಾ ಗುರುಸ್ವಾಮಿ ಸ್ವಾಗತಿಸಿದರೆ, ಮಹೇಶ್ ಮತ್ತು ನಿರೂಪಿಸಿದರು. ಕಾರ್ಯಕ್ರಮದಲ್ಲಿ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಜೆಎಸ್‌ಎಸ್ ವಿಜ್ಞಾನ, ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಆರನೇ ಘಟಿಕೋತ್ಸವ: 1663 ವಿದ್ಯಾರ್ಥಿಗಳಿಗೆ ನಾನಾ ಪದವಿ ಪ್ರದಾನ

ಕ್ರಿಯಾತ್ಮಕ ಚಿಂತನೆಯೊಂದಿಗೆ ಡಿಜಿಟಲ್ ತಂತ್ರಜ್ಞಾನಗಳ ಸದ್ಬಳಕೆಯಿಂದ ಉದ್ಯಮಿಗಳಾಗಿ: ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತು ಅಧ್ಯಕ್ಷ ಪ್ರೊ.ಟಿ.ಜಿ.ಸೀತಾರಾಮ್ ಕಿವಿಮಾತು

ಮೈಸೂರು, ಫೆ.24(ಎಂಕೆ)– ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಆರನೇ ಘಟಿಕೋತ್ಸವ ಸಮಾರಂಭದಲ್ಲಿ ಪದವಿ, ಸ್ನಾತಕೋತ್ತರ ಹಾಗೂ ಪಿಹೆಚ್.ಡಿ ಪದವಿ ಪಡೆದ 1663 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯ ಆವರಣದಲ್ಲಿ ಶನಿವಾರ ನಡೆದ ಘಟಿಕೋತ್ಸವ ಸಮಾರಂಭದಲ್ಲಿ ಪದವಿ 1107, ಸ್ನಾತಕೋತ್ತರ ಪದವಿ ಮತ್ತು ಪಿಹೆಚ್.ಡಿ ಪದವಿ 556 ಸೇರಿ ಒಟ್ಟು 1663 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಪದವಿಯಲ್ಲಿ 14 ಹಾಗೂ ಸ್ನಾತಕೋತ್ತರ ಪದವಿಯಲ್ಲಿ 18 ಸೇರಿ ಒಟ್ಟು 32 ವಿದ್ಯಾರ್ಥಿಗಳು ಚಿನ್ನದ ಪದಕಗಳನ್ನು ಕೊರಳಿಗೇರಿಸಿಕೊಂಡರು. ಬಿಇ ಪದವಿಯಲ್ಲಿ 1060 ವಿದ್ಯಾರ್ಥಿಗಳು, ಬಿಸಿಎನಲ್ಲಿ 47, ಎಂಸಿಎನಲ್ಲಿ 117, ಎಂಬಿಎ 256, ಎಂಟೆಕ್ 123, ಎಂಎಸ್‌ಸಿ 51 ಹಾಗೂ ಪಿಹೆಚ್.ಡಿಯನ್ನು 9 ವಿದ್ಯಾರ್ಥಿಗಳು ಪಡೆದರೆ, ಪದವಿಯಲ್ಲಿ 24 ಹಾಗೂ ಸ್ನಾತಕೋತ್ತರ ಪದವಿಯಲ್ಲಿ 7 ಸೇರಿ ಒಟ್ಟು 31 ವಿದ್ಯಾರ್ಥಿಗಳು ದತ್ತಿ ಪದಕ ಪಡೆದರು.



ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಆರನೇ ಘಟಿಕೋತ್ಸವ ಸಮಾರಂಭದಲ್ಲಿ ಪದವಿ, ಸ್ನಾತಕೋತ್ತರ ಹಾಗೂ ಪಿಹೆಚ್.ಡಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಕುಲಾಧಿಪತಿಗಳು ಆದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತು ಅಧ್ಯಕ್ಷ ಪ್ರೊ.ಟಿ.ಜಿ.ಸೀತಾರಾಮ್, ಶ್ರೀಮತಿ ಅನುರಾಧ ಸೀತಾರಾಮ್, ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ತಾಂತ್ರಿಕ ಶಿಕ್ಷಣ ವಿಭಾಗ ನಿರ್ದೇಶಕ ಡಾ.ಬಿ.ಸುರೇಶ್ ಮತ್ತಿತರರಿದ್ದರು.

ಘಟಿಕೋತ್ಸವ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತು ಅಧ್ಯಕ್ಷ ಪ್ರೊ.ಟಿ.ಜಿ.ಸೀತಾರಾಮ್, ಪದವಿ ಪ್ರದಾನ ಮಾಡಿದರು. ಇದಕ್ಕೂ ಮುನ್ನ ಮಾತನಾಡಿದ ಅವರು, ಪದವಿ ಪಡೆದ ಈ ದಿನವನ್ನು ನಿಮ್ಮ ಶಿಕ್ಷಣದ ಅಂತ್ಯವೆಂದು ಪರಿಗಣಿಸಬೇಡಿ, ಕಲಿಯುವುದು ಸಾಕಷ್ಟಿದೆ. ಹೊಸದನ್ನು ಅನ್ವೇಷಿಸಲು ನಿಮ್ಮನ್ನು ನೀವು ತೊಡಗಿಸಿಕೊಳ್ಳಬೇಕಾಗಿದೆ. ಕ್ರಿಯಾತ್ಮಕ ಚಿಂತನೆಯೊಂದಿಗೆ ಡಿಜಿಟಲ್ ತಂತ್ರಜ್ಞಾನಗಳ ಸದ್ಬಳಕೆಯಿಂದ ನವ ಉದ್ಯಮಿಗಳಾಗುವಂತೆ ಕರೆ ನೀಡಿದರು.

ಕೊರೊನಾ ಸಂದರ್ಭದಲ್ಲಿ ಲಸಿಕೆ ಸಿದ್ಧಪಡಿಸಿ ಸುಮಾರು ನೂರು ದೇಶಗಳಿಗೆ ಲಸಿಕೆ ನೀಡಿದ ಹೆಗ್ಗಳಿಕೆ ಭಾರತದ್ದಾಗಿದ್ದು, ಭಾರತವನ್ನು ವಿಶ್ವಮಟ್ಟದಲ್ಲಿ ಜಾಗತಿಕ ಶಕ್ತಿಯನ್ನಾಗಿಸುವ ಜವಾಬ್ದಾರಿ ಯುವ ಸಮೂಹದ್ದಾಗಿದೆ. ಈಗಾಗಲೇ ಭಾರತವೂ ಮೂರನೇ ಅತಿದೊಡ್ಡ ಸ್ಟಾರ್ಟ್‌ಅಪ್ ಹಬ್ ಆಗಿ ಹೊರಹೊಮ್ಮಿದ್ದು, ಮುಂದಿನ ಕೆಲ ವರ್ಷಗಳಲ್ಲಿ ಸೂಪರ್ ಪವರ್ ದೇಶವಾಗಲಿದೆ. ಈ ನಿಟ್ಟಿನಲ್ಲಿ ಹೊಸ ಹೊಸ ಸಂಶೋಧನೆಗಳು, ಆವಿಷ್ಕಾರಗಳು ನಡೆಯುತ್ತಿದ್ದು, ಸಂಶೋಧನಾ ಕ್ಷೇತ್ರದಲ್ಲಿ ಭಾರತ ವಿಶ್ವದ ಟಾಪ್ 5 ರಾಷ್ಟ್ರಗಳಲ್ಲಿ ಸ್ಥಾನ ಪಡೆದಿದೆ ಎಂದು ತಿಳಿಸಿದರು.

ಡಿಜಿಟಲ್ ಕ್ರಾಂತಿ: ಕಳೆದ 10 ವರ್ಷಗಳಲ್ಲಿ ದೇಶದಲ್ಲಿ ಡಿಜಿಟಲ್ ಕ್ರಾಂತಿಯಾಗಿದೆ. ಶೇ.45 ರಷ್ಟು ಹಣಕಾಸಿನ ವ್ಯವಹಾರ ಯುಪಿಐ ಮೂಲಕ ಸುರಕ್ಷಿತವಾಗಿ ನಡೆಯುತ್ತಿದೆ. ಮುಂದಿನ ವರ್ಷಗಳಲ್ಲಿ ಡಿಜಿಟಲ್ ತಂತ್ರಜ್ಞಾನ ಇನ್ನಷ್ಟು ವ್ಯಾಪಕವಾಗಿ ವಿಸ್ತರಣೆಯಾಗಲಿದ್ದು, ಕೇವಲ ಪದವಿ ಪಡೆದು ನಿಮ್ಮನ್ನು ಮಿತಿಗೊಳಿಸಿಕೊಳ್ಳಬೇಡಿ. ಉದ್ಯೋಗಾಕಾಂಕ್ಷಿಯಿಂದ ಉದ್ಯೋಗ ನೀಡುವಂತಹವರಾಗಿ. ನಮ್ಮಲ್ಲಿನ ಶ್ರೇಷ್ಠತೆಯು ವೈಯಕ್ತಿಕ ಯಶಸ್ಸಿನ ಅನ್ವೇಷಣೆಯಲ್ಲಿ ಮಾತ್ರವಲ್ಲದೆ ಇತರರ ಜೀವನದ ಮೇಲೂ ಪರಿಣಾಮ ಬೀರಲಿದೆ. ಈ ನಿಟ್ಟಿನಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಮೂಲಕ ಕೌಶಲ್ಯಾತ್ಮಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಗ್ರಾಮೀಣ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ 12 ಸ್ಥಳೀಯ ಭಾಷೆಯಲ್ಲೇ ಉನ್ನತ ವ್ಯಾಸಂಗಕ್ಕೆ ಅವಕಾಶ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಕುಲಾಧಿಪತಿಗಳು ಆದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀಮತಿ ಅನುರಾಧ ಸೀತಾರಾಮ್, ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ತಾಂತ್ರಿಕ ಶಿಕ್ಷಣ ವಿಭಾಗ ನಿರ್ದೇಶಕ ಡಾ.ಬಿ.ಸುರೇಶ್, ಕುಲಪತಿ ಪ್ರೊ.ಎ.ಎನ್.ಸಂತೋಷ್ ಕುಮಾರ್, ಪರೀಕ್ಷಾನಿಯಂತ್ರಣಾಧಿಕಾರಿ ಪ್ರೊ.ಪಿ.ನಂಜುಂಡಸ್ವಾಮಿ, ಕುಲಸಚಿವ ಪ್ರೊ.ಎಸ್.ಎ.ಧನರಾಜ್ ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗೆಳತಿ : (ಪಕ್ಕದ ಮನೆಯವರ ಜೊತೆ ಮಾತನಾಡುತ್ತ) ನನ್ನ ಗಂಡ ಕದ್ದು ಮುಚ್ಚಿ ಯಾವುದೋ ಹುಡುಗೀನ ಮೀಟ್ ಮಾಡ್ತಾನೆ ಅಂತ ನನಗೆ ಡೌಟ್ ಆಗ್ತಾ ಇದೆ...

ಪಕ್ಕದ ಮನೆಯಾಕೆ : ಅಂಯ್ಯೋ ಈಗ್ ಏನ್ ಮಾಡ್ತೀಯ?

ಗೆಳತಿ : ನನ್ನ ಬಾಯ್ ಫ್ರೆಂಡ್‌ನನ್ನು ಅವನ ಹಿಂದೆ ಕಳಿಸ್ತೀನಿ. ಆಗ ಎಲ್ಲಾ ಗೊತ್ತಾಗುತ್ತೆ.

ಮೈಸೂರು ಮಿತ್ರ

ಭಾನುವಾರ, 25 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ನಾವು ಯೋಚಿಸುವ ರೀತಿಯಂತೆ ನಾವು ರೂಪುಗೊಳ್ಳುತ್ತೇವೆ. ನೀವು ಯಾವುದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿರೋ ಅದರ ಕಡೆ ನಿಮ್ಮ ಎಲ್ಲಾ ಚೈತನ್ಯ ಎಳೆಯಲ್ಪಡುತ್ತದೆ.– ಜಗ್ಗಿ ವಾಸುದೇವ್

ವೇದ ಸುಳ್ಳಾದರೂ / ಗಾದೆ ಸುಳ್ಳಾಗದು { ಬರಿ ಕೈಗಿಂತ ಹಿತ್ತಾಳೆ ಕಡಗ ಮೇಲು

ನಿಮ್ಮ ಪತ್ರಗಳು

ಹಂಪ್ಸ್ ನಿರ್ಮಾಣ ಸ್ವಾಗತಾರ್ಹ, ಆದರೆ ಬಿಳಿ ಬಣ್ಣ ಬಳಿಯಿರಿ



ಮಾನ್ಯರೇ,

ಮೈಸೂರಿನ ಜಲಪುರಿ ಮಹದೇವಪುರ ಮುಖ್ಯ ರಸ್ತೆಯ ಪೊಲೀಸ್ ಪಬ್ಲಿಕ್ ಶಾಲೆಯ ಮುಂಭಾಗದಲ್ಲಿ ಇತ್ತೀಚೆಗೆ ಹಂಪ್ಸ್ ನಿರ್ಮಾಣ ಮಾಡಿರುವುದು ನಿಜವಾಗಿಯೂ ಸ್ವಾಗತಾರ್ಹ ಕ್ರಮವಾಗಿದೆ. ಆದರೆ, ಅದಕ್ಕೆ ಬಿಳಿ ಬಣ್ಣ ಬಳಿಯಿರಿ.

ಈ ಶಾಲೆಯ ಮುಂಭಾಗ ಹಲವು ದಿನಗಳಿಂದ ಹಂಪ್ಸ್ ನಿರ್ಮಿಸಬೇಕೆಂದು ಕೋರಿ ಎಲ್ಲಾ ಪತ್ರಿಕೆಗಳಲ್ಲಿ ಪತ್ರ ಬರೆದು, ಫೋಟೋ ಸಮೇತವಾಗಿ ಸುದ್ದಿ ಪ್ರಕಟವಾದರೂ ಸಹ ಯಾವುದೇ ಪ್ರಯೋಜನವಾಗಿರಲಿಲ್ಲ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಸಲ್ಲಿಸಲಾಗಿತ್ತು.

ಶಾಲೆಯ ಬೆಳಗಿನ ಸಮಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರು ಆಗಮಿಸುವುದರಿಂದ ಮತ್ತು ಕೆಲಸದ ಮೇಲೆ ಈ ರಸ್ತೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಹನ ಸವಾರರು ಓಡಾಡುತ್ತಿರುವುದರಿಂದ ಪ್ರತಿದಿನ ಈ ರಸ್ತೆಯಲ್ಲಿ ಸಣ್ಣಪುಟ್ಟ ಅಪಘಾತಗಳು ಸರ್ವೆ ಸಾಮಾನ್ಯವಾಗಿತ್ತು. ಈ ಸಂಬಂಧ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ರಸ್ತೆಯಲ್ಲಿ ಹಂಪ್ಸ್ ನಿರ್ಮಿಸಲು ಕೋರಿ ಸಾಕಷ್ಟು ಬಾರಿ ಮನವಿ ಸಲ್ಲಿಸಲಾಗಿತ್ತು. ಕೊನೆಗೆ ಶಿಕ್ಷಣ ಸಚಿವರಾದ ಮಧು ಬಂಗಾರಪ್ಪ ಅವರಿಗೂ ಈ ಸಂಬಂಧ ಮನವಿ ಸಲ್ಲಿಸಲಾಗಿತ್ತು.

ಒಟ್ಟಿನಲ್ಲಿ ಈ ರಸ್ತೆಗೆ ಹಂಪ್ಸ್ ನಿರ್ಮಾಣವಾಗಿರುವುದರಿಂದ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ತುಂಬಾ ಅನುಕೂಲಕರವಾಗಿದೆ ಎಂದರೆ ತಪ್ಪಾಗಲಾರದು.

ಈ ರಸ್ತೆಗೆ ಹಂಪ್ಸ್ ನಿರ್ಮಾಣ ಮಾಡಿ ಹಾಗೇ ಬಿಟ್ಟಿದ್ದಾರೆ. ಇದಕ್ಕೆ ಬಿಳಿ ಬಣ್ಣವನ್ನು ಹಾಕಿರುವುದಿಲ್ಲ. ದಯವಿಟ್ಟು ಈ ಹಂಪ್ಸ್‌ಗೆ ಬೇಗ ಬಣ್ಣವನ್ನು ಹಾಕಬೇಕಾಗಿ ಸಂಬಂಧಪಟ್ಟವರಲ್ಲಿ ಮನವಿ.

–ಎಂ.ಕೆ. ಕಿರಣ್, ಟೆಲಿಕಾಂ ಕಾಲೋನಿ, ಮೈಸೂರು.

ಅರ್ಹ ಕಾರ್ಮಿಕರಿಗೆ ಸವಲತ್ತು ಸಿಗುವಂತಾಗಲಿ

ಮಾನ್ಯರೆ,

2007ರಲ್ಲಿ ಕಾರ್ಮಿಕರ ಮಂಡಳಿ ಸ್ಥಾಪನೆಯಾಗಿತ್ತು. ಪ್ರಾರಂಭದಲ್ಲಿ ಮೂರು ಲಕ್ಷ ಕಾರ್ಮಿಕರು ನೋಂದಣಿ ಸಂಖ್ಯೆ 51 ಲಕ್ಷಕ್ಕೆ ಏರಿಕೆಯಾಗಿದೆ. ಈ ನೋಂದಣಿ ಕಾರ್ಮಿಕರ ಪೈಕಿ 46 ಲಕ್ಷ ಕಾರ್ಮಿಕರು ಅರ್ಹರಿದ್ದಾರೆ. ಉಳಿದವರು ಅನರ್ಹರು. ಫೆರಾರಿ ಕಾರು, ಜಿಎಸ್‌ಟಿ ಪಾವತಿಸುವವರು ಹಾಗೂ ಆರ್ಥಿಕವಾಗಿ ಸುಸ್ಥಿತಿಯಲ್ಲಿರುವವರೇ ಕಾರ್ಮಿಕ ಇಲಾಖೆಯಲ್ಲಿ ತಮ್ಮ ಹೆಸರನ್ನು ನೋಂದಣಿ ಮಾಡಿಕೊಂಡಿರುವ ವಿಷಯವನ್ನು ವಿಧಾನಪರಿಷತ್ತಿನ ಪ್ರಶ್ನೋತ್ತರ ಅವಧಿಯಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಬಹಿರಂಗಪಡಿಸಿರುವ ವಿಚಾರ ನಿಬ್ಬೆರಗಾಗಿಸಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ನೋಂದಣಿಯಾಗಿರುವ ಕಾರ್ಮಿಕರು ಅರ್ಹರೋ ಅಥವಾ ಅನರ್ಹರೋ ಎಂಬುದನ್ನು ತಿಳಿಯಲು ಅಂಬೇಡ್ಕರ್ ಸೇವಾ ಕೇಂದ್ರದ ಮೂಲಕ ತನಿಖೆ ಮಾಡಿಸುತ್ತೇವೆ ಎಂದು ಕಾರ್ಮಿಕ ಸಚಿವರು ತಿಳಿಸಿರುವುದು ಸ್ವಾಗತಾರ್ಹ ಮತ್ತು ತನಿಖೆಯ ಮೂಲಕ ಅರ್ಹ ಕಾರ್ಮಿಕರಿಗೆ ಸವಲತ್ತು ಸಿಗುವಂತಾಗಬೇಕು.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

'ಪ್ರೇಮ ಪುರಾಣ'

ಮಾನ್ಯರೆ,

"ನಿನ್ನ ಪ್ರೇಮದ ಪರಿಯ ನಾನರಿಯೆ, ಕನಕಾಂಗಿ!"

ಎಚ್. ನಿವೇದಿತಾ ಅವರು 'ಓ ಪ್ರೇಮವೇ...!' ಎಂಬ ಶೀರ್ಷಿಕೆಯಲ್ಲಿ (ಫೆ. 15) ಬರೆದ ಪ್ರೇಮ ಪುರಾಣ ಆಗಿತ್ತು, ಆಪ್ಯಾಯಮಾನ' (ವಿಷಯವೇ ಅಂತಹುದಲ್ಲವೆ?)

ವರ್ತಮಾನದ ಮಾತಿರಲಿ, ಪ್ರಾಚೀನಕ್ಕೆ ಹೋದರೆ, ಭಾಗವತ 'ಪುರಾಣ'ದಲ್ಲಿ ರುಕ್ಮಿಣಿ ಕೃಷ್ಣನಿಗೆ ಬರೆದ ಸುಂದರ ಪತ್ರವೊಂದು ಪ್ರೇಮಪತ್ರ ಬರೆಯುವವರಿಗೆಲ್ಲ ಮಾದರಿಯಾಗಿದೆ!.

ಪ್ರೇಮವೆಂದರೇನೆಂಬುದನ್ನು ಸಾಕ್ರಟೀಸ್ ತಮಾಷೆಯಾಗಿ (?) ವಿವರಿಸುತ್ತಾನೆ. ಸೃಷ್ಟಿಯ ಆದಿಯಲ್ಲಿ ಗಂಡು–ಹೆಣ್ಣು ಎಂಬ ಭೇದವಿಲ್ಲದೆ ಒಂದೇ ಉಂಡೆ ಇತ್ತಂತೆ; ಅದರ ಆರ್ಭಟ, ಪ್ರತಾಪ ಹೇಳತೀರದು! ಅದನ್ನು ತಗ್ಗಿಸುವುದಕ್ಕಾಗಿ ಸೃಷ್ಟಿಕರ್ತ ಅದನ್ನು ಗಂಡು, ಹೆಣ್ಣು ಎಂದು ಎರಡಾಗಿ ಒಡೆದನಂತೆ. ಆನಂತರ, ಎರಡೂ ಮತ್ತೆ ಕೂಡಿಕೊಳ್ಳಲು ಹಾತೊರೆಯುವ ಪ್ರಕ್ರಿಯೆಯೇ ಪ್ರೇಮ! (ಪರಸ್ಪರ ತೊರೆಯುವ ಪ್ರಶ್ನೆಯೇ ಇಲ್ಲ).

ಕೊಲ್ಲಿ ಕವಿ ತನ್ನ 'ಪ್ರೇಮ ತತ್ತ್ವ' (Philosophy of love) ಕವನದಲ್ಲಿ ಸಾರುತ್ತಾನೆ, ಸೃಷ್ಟಿಯಲ್ಲಿ ಯಾವುದೂ ಒಂಟಿಯಾಗಿಲ್ಲ ಎಂದು !

ಒಂದು 'ಜೋಕು' : ಫೆ. 14 'ಪ್ರೇಮಿಗಳ ದಿನ'ವಾದರೆ, 9 ತಿಂಗಳ ಬಳಿಕ ನ. 14 'ಮಕ್ಕಳ ದಿನ'!

ಪ್ರೇಮ ಎನ್ನುವಾಗ ಕಾಮವನ್ನೂ ಅಗತ್ಯವಾಗಿ ಪರಿಗಣಿಸಬೇಕು. ಕಾಮ ಸ್ವಾರ್ಥಪೂರಿತವಾದದ್ದು; ಪ್ರೇಮ ನಿಸ್ವಾರ್ಥವಾದದ್ದು. ಆದರೆ ವಿಷಯ ಅಷ್ಟು ಸರಳವಲ್ಲ: ಎರಡರ ನಡುವೆ ಸ್ಪಷ್ಟವಾಗಿ ಗೆರೆ ಎಳೆಯುವುದು ಕಷ್ಟ. ಪ್ರೇಮದಲ್ಲೂ ಕಾಮದ ಎಳೆ (ತ) ಇದ್ದೇ ಇರುತ್ತದೆ!

ಸ್ವಾಮಿ ವಿವೇಕಾನಂದರು ಪ್ರೇಮದ ಪರಮ ಪ್ರವಾದಿ ! ಉನ್ನತಾರ್ಥದಲ್ಲಿ ಪ್ರೀತಿ ಮತ್ತು ಸೇವೆ ಅವರ ಭಾಷಣ, ಬರಹಗಳ ಪಲ್ಲವಿ! ಕೊನೆಯಿಲ್ಲದ ಈ ಕಿರು 'ಪುರಾಣ'ವನ್ನು ಮುಗಿಸೋಣ ಹೀಗೆ :

ಕಾಮ 'ಕೆಂಡ' ಸಂಪಿಗೆ, ಕೇದಗೆ;
ಪ್ರೇಮವಾದರು ಮಧುರ ಮಲ್ಲಿಗೆ!

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.

ಸೋಲು ಗೆಲುವಿಗೆ ಮತ್ತೊಂದು ಅವಕಾಶ...!

> "ಬಲ್ಲವರು ಹೇಳುವುದು ಬದುಕಿನಲ್ಲಿ ಸೋಲು ಗೆಲುವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಸಾಗುವ ದಾರಿಯಲ್ಲಿ ಈ ಎರಡು ಜೊತೆಯಲ್ಲಿರುತ್ತವೆ. ಸೋಲು ಅನುಭವ ನೀಡಿದರೆ, ಗೆಲುವು ಸಂತೋಷವನ್ನು ಉಣಬಡಿಸುತ್ತದೆ. ಈ ಸೋಲು–ಗೆಲುವಿನಿಂದಲೂ ಕಲಿಯಬೇಕಾದ ಪಾಠ ನೂರಾರು. ಗೆದ್ದಾಗ ತಲೆತಗ್ಗಿಸಿ ನಡೆಯಬೇಕು ವಿನೀತದ ಭಾವಕ್ಕಾಗಿ, ಸೋತಾಗ ತಲೆ ಎತ್ತಿ ನಡೆಯಬೇಕು ಸೋಲೇನು ಸಾವಲ್ಲ, ಗೆಲುವಿಗೆ ಮತ್ತೊಂದು ಅವಕಾಶ.



ಪರಮೇಶ ಕೆ.ಉತ್ತನಹಳ್ಳಿ
ಕನ್ನಡ ಉಪನ್ಯಾಸಕ,
ಮೊ: 7795862281

ಕಲಿಕೆ ಎಂಬುದು ಕಲಿಯಲಾಗದ ಬ್ರಹ್ಮಾಂಡ. ದೇಹದಲ್ಲಿ ಜೀವ ಇರೋವರೆಗೂ ಒಂದಲ್ಲ ಒಂದು ಬಗೆಯಲ್ಲಿ ಕಲಿಕೆಗೆ ನಮ್ಮನ್ನು ನಾವು ಒಳಗು ಮಾಡಿಕೊಂಡೇ ಜೀವನವನ್ನು ಜೀವಂತಿಕೆಗೊಳಿಸಬೇಕು. ಒಂದು ತಪ್ಪು, ಒಂದು ಸನ್ನಿವೇಶ, ಒಂದು ಸಂಗತಿ ಇಲ್ಲವೇ ಘಟನೆ, ಒಂದು ಸೋಲು ಕೂಡ ನಮಗೆ ಬದುಕಿನಲ್ಲಿ ಒಂದು ಮರೆಯಲಾಗದ ಪಾಠವನ್ನು ಬೋಧಿಸಿ, ಕಲಿಯುವ ಮನಸಿಲ್ಲವಾದರೂ ಕಲಿಸಿ, ನೀತಿಯನ್ನು ಹೇಳಿ ಬದುಕಿನ ಒಳ– ಹೊರಗನ್ನು ಅರ್ಥೈಸಲು ಅನುವು ಮಾಡಿಕೊಡುತ್ತದೆ. ಅದಕ್ಕೆ ಬಲ್ಲವರು ಹೇಳುವುದು ಬದುಕಿನಲ್ಲಿ ಸೋಲು–ಗೆಲುವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಸಾಗುವ ದಾರಿಯಲ್ಲಿ ಈ ಎರಡು ಜೊತೆಯಲ್ಲಿರುತ್ತವೆ. ಸೋಲು ಅನುಭವ ನೀಡಿದರೆ, ಗೆಲುವು ಸಂತೋಷವನ್ನು ಉಣಬಡಿಸುತ್ತದೆ. ಈ ಸೋಲು–ಗೆಲುವಿನಿಂದಲೂ ಕಲಿಯಬೇಕಾದ ಪಾಠ ನೂರಾರು. ಗೆದ್ದಾಗ ತಲೆತಗ್ಗಿಸಿ ನಡೆಯಬೇಕು ವಿನೀತದ ಭಾವಕ್ಕಾಗಿ, ಸೋತಾಗ ತಲೆ ಎತ್ತಿ ನಡೆಯಬೇಕು ಸೋಲೇನು ಸಾವಲ್ಲ ಗೆಲುವಿಗೆ ಮತ್ತೊಂದು ಅವಕಾಶ. ಹಾಗೆ ನೋಡಿದರೆ ಜೀವನದಲ್ಲಿ ಪ್ರತಿಯೊಂದು ವಸ್ತುವಿನಿಂದ, ವ್ಯಕ್ತಿಯಿಂದ ಒಂದಲ್ಲ ಒಂದು ರೀತಿಯ ಪಾಠವನ್ನು ಕಲಿಯುತ್ತೇವೆ. ಬೆಳಕು ನೀಡುವ ಸೂರ್ಯ, ಹರಿಯುವ ನದಿ, ಬೀಳುವ ಮಳೆ, ಪುಟಾಣಿ ಮಕ್ಕಳು, ಮನೆಯ ಹಿರಿಯರು ಹೀಗೆ ಎಲ್ಲರೂ ಒಂದಲ್ಲ ಒಂದು ರೀತಿಯ ನೀತಿಯನ್ನು ಹೇಳುವ ಗುರುಗಳೇ ಆಗಿರುತ್ತಾರೆ. ಅದಕ್ಕಾಗಿಯೇ **ಪುಲಿಗೆರೆ ಸೋಮನಾಥನ ಸೋಮೇಶ್ವರ ಶತಕ** ನೀತಿಮೋಥೆಯ ಕೃತಿಯು ಜ್ಞಾನವನ್ನು ಹೊಂದುವ ಮಾರ್ಗವನ್ನು ಹಾಗೂ ಲೋಕಾನು ಭವದ ಅನರ್ಘ್ಯ ಸಂಪತ್ತನ್ನು ಗಳಿಸಿಕೊಳ್ಳುವ ನೀತಿಪಾಠವನ್ನು ಬೋಧಿಸುತ್ತದೆ.

ಕೆಲವಂ ಬಲ್ಲವರಿಂದ ಕಲ್ತು
ಕೆಲವಂ ಶಾಸ್ತ್ರಗಳಿಂ ಕೇಳ್ದುತಂ
ಕೆಲವಂ ಮಾಳ್ಪವರಿಂದ ಕಂಡು
ಕೆಲವಂ ಸುಜ್ಞಾನದಿಂ ನೋಡುತಂ
ಕೆಲವಂ ಸಜ್ಜನ ಸಂಘದಿಂದಲರಿಯಲ್
ಸರ್ವಜ್ಞನಪ್ಪಂತೆ ನರಂ,
ಘಲವಂ ಪಳ್ಳ ಸಮುದ್ರವೈ ಹರಹರಾ
ಶ್ರೀ ಚೆನ್ನ ಸೋಮೇಶ್ವರಾ

ಕೆಲವಂ ಎಂಬುದು ಹುಟ್ಟಿನಿಂದ ಚಟ್ಟದವರೆಗೆ, ಜನನದಿಂದ ಮರಣದವರೆಗೆ, ತೊಟ್ಟಿಲಿನಿಂದ ಚಟ್ಟದವರೆಗೆ ಎಂದು ನಿರ್ದಿಷ್ಟಪಡಿಸಿ ಗಡಿಕೊರೆದಂತೆ ಹೇಳಲಾಗದು. ಸಾಯುವ ಕೊನೆಯ ಕ್ಷಣದವರೆಗೂ ಕಲಿಕೆಯ ಕಾರ್ಯ ಸಾಗುತ್ತಲೇ ಇರುತ್ತದೆ. ಕೆಲವನ್ನು ಬಲ್ಲವರಿಂದ ಕೆಲವನ್ನು ಶಾಸ್ತ್ರಗ್ರಂಥಗಳಿಂದ, ಇನ್ನು ಕೆಲವನ್ನು ಅತ್ಯಂತ ನಿಚ್ಚಳವಾಗಿ, ಪರಿಶುದ್ಧವಾಗಿ, ಚೆನ್ನಾಗಿ ಒಂದು ಕೆಲಸವನ್ನು ಮಾಡುವುದರಿಂದ, ಒಳ್ಳೆಯ ಸದ್ವಿಚಾರಗಳನ್ನು ಅರಿತುಕೊಂಡಿರುವವರಿಂದ, ಉತ್ತಮರ–ಆದರ್ಶ ಸ್ನೇಹಿತರ ಸಂಘಪರಿವಾರದಿಂದ ಕಲಿತು, ಅಂದರೆ ಎಲ್ಲ ವಿದ್ಯೆಗಳನ್ನು ಕಲಿತು ಪಾರಂಗತನಾದನು ಮಾತ್ರವೇ ಸರ್ವಜ್ಞ ಎಂದು ಕರೆಸಿಕೊಳ್ಳಲು ಸಾಧ್ಯ. 'ಹನಿ–ಹನಿಗೂಡಿದರೆ ಹಳ್ಳ, ತೆನೆ–ತೆನೆಗೂಡಿದರೆ ಬಳ್ಳ' ಎನ್ನುವಂತೆ ಹಲವು ಹಳ್ಳಗಳು ಸೇರಿ ಸಮುದ್ರವಾಗುತ್ತವೆ. ಹಾಗೆಯೇ ಹಲವು ಭಿನ್ನ ರೂಪ, ಸ್ವರೂಪ ವಿಶ್ವರೂಪದ ಭಾವ ಲಹರಿಯಲ್ಲಿ ಪ್ರತಿ ಕ್ಷಣದಲ್ಲಿ ಯಾವುದಾದರೂ ಯುಕ್ತವಾದ ಅನುಭವದ ಮಾಹಿತಿ, ಜ್ಞಾನವನ್ನು ಸಂಪಾದಿಸುತ್ತಲೇ ಬದುಕನ್ನು ಬಂಗಾರ ಮಾಡಿಕೊಂಡಾಗ ಬದುಕು ಸಾರ್ಥಕವಾಗುತ್ತದೆ. ಬದುಕು ಒಂದು ಪಾಠಶಾಲೆಯು ಹೌದು, ಪಾಕಶಾಲೆಯು ಹೌದು. ಜ್ಞಾನವೃದ್ಧಿಯಲಿ ತಿಳುವಳಿಕೆಯಿಂದ ಬದುಕಲು ಹಲವು ಬಗೆಯ ಕಲಿಕೆಗಳನ್ನು ಕಲಿಯಬೇಕು. ಹಾಗೆಯೇ ಸದೃಢವಾಗಿ ಬದುಕಲು ಹಲವು ಬಗೆಯ ಅಡುಗೆ ಮಾಡುವುದನ್ನು ಕಲಿತು ಊಟ ಮಾಡಬೇಕು.

ಅಂತೆಯೇ ಕಣ್ಣು ತೆರೆದು ನೋಡಿದರೆ ಕಾಣುವುದೆಲ್ಲವೂ ಒಂದೊಂದು ಬಗೆಯ ಬಣ್ಣದ ಜಗತ್ತು. ಈ ಬಣ್ಣದ ಜಗತನ್ನು ಆಡಿಸುವವನು ಒಬ್ಬ ಕಾಣದೆ ಎಲ್ಲೋ ಮರೆಯಾಗಿ ಇರುವ, ಕಾಣುತ್ತಿರುವ ನಾವುಗಳೇ ಆತನ ಸೂತ್ರದ ಕೈಯ್ಯಲ್ಲಿ ಆಡುವ ಗೊಂಬೆಗಳು. ಈ ಬಗೆಯ ಬೊಂಬೆಗಳು ಕೂಡ ಬದುಕಿನ ಎಳೆಯನ್ನು ತೆರೆದಿಡುತ್ತವೆ. ಹೀಗೆ ಒಂದು ಗೊಂಬೆಯಿಂದಲೂ ಜೀವನ ಪಾಠವನ್ನು ಕಲಿಯಲು ಸಾಧ್ಯವಿದೆ ಹಾಗೂ ಈ ಬಗೆಯಲ್ಲಿ ಮಾತನಾಡಲು ಮತ್ತು ಲೇಖನದ ನಡೆಯಲ್ಲಿ ಸದರಿ ಬರಹವನ್ನು ಬರೆಯಲು ಗಣ್ಯ ಕಾರಣವೆಂದರೆ ಸಾಹಿತ್ಯದ ಸೆಳೆತ ಅನುಗಾಲ ಬದುಕುವ ನೀತಿಯ ಹಂದರವನ್ನು ಸಾರುವ ಶಾಶ್ವತ ರೂಪಕಗಳು ಕನ್ನಡಿಯಾಗಿ ಮನುಷ್ಯನ ಬದುಕನ್ನು ಹಾಸುಹೊಕ್ಕಾಗಿ ನಮ್ಮನ್ನು ಆವಹಿಸಿಕೊಳ್ಳುತ್ತದೆ.



ಕನ್ನಡ ಚಿತ್ರರಂಗ ಕಂಡ ಮೇರು ಚಿತ್ರಸಾಹಿತಿಯಾದ ಚಿ. ಉದಯಶಂಕರ್ (ಚೆಟ್ಟನಹಳ್ಳಿ ಸದಾಶಿವಯ್ಯ ಉದಯಶಂಕರ್) ಅವರ ಆಡಿಸಿ ನೋಡು, ಬೀಳಿಸಿ ನೋಡು... ಈ ಹಾಡನ್ನು ಕೇಳದ ಕಿವಿಗಳಿಲ್ಲ ಹಾಗೂ ಗುನುಗದ ನಾಲಿಗೆ ಇಲ್ಲ. 'ರಾಜಕುಮಾರ' ಎಂಬ ಸಿನಿಮಾ ಬಂದ ಮೇಲಂತೂ ಈ ಹಾಡಿನ ಮಹತ್ತು ಮತ್ತೊಂದು ಬಗೆಯ ವ್ಯಕ್ತಿತ್ವವು ಅನಾವರಣಗೊಂಡು ಎತ್ತರಕ್ಕೆ ಬಂದು ತಲುಪಿತು. ಚಿತ್ರಸಾಹಿತ್ಯವೆಂದರೆ ತುಂಬು ಆದರದಿಂದ ಸ್ವಚ್ಛಂದ ಮನಸ್ಸಿನಿಂದ ಬರೆಯುತ್ತಿದ್ದ, ಒಂದು ಬಗೆಯಲ್ಲಿ ತೆರೆಮರೆಗೆ ಸರಿದಾಗ ಈ ಹಾಡಿನ ಮಾಧುರ್ಯದಷ್ಟೆ ಹಾಡಿನ ಒಡಲು ನಮ್ಮ ಗಮನವನ್ನು ಸೆಳೆಯುತ್ತದೆ. ಪ್ರತಿಯೊಂದು ಪದವು ನೀತಿಯ ಹಂದರದಲ್ಲಿ ಬದುಕಿನ ಮಂದಿರವನ್ನು ನಿರ್ಮಿಸಲು ಶ್ರಮಿಸುವಂತಿದೆ. ಎಲ್ಲರ ಹೃದಯದ ಮನೋಮಂದಿರದ ಹಾಳೆಯಲ್ಲಿ ಬರೆದ ಸಾಲುಗಳು ಒಂದು ಮಗುವಿಗೆ ಕಲಿಸುವ ನೀತಿಪಾಠ.

ಬೆಳೆಯುವ ಸಿರಿ ಮೊಳಕೆಯಲ್ಲಿಯೇ ಎಂಬಂತೆ ನಾಯಕನು ಈ ಸಿನಿಮಾದಲ್ಲಿ ಒಂದು ಮಗುವಿಗೆ ಸಾಂತ್ವನವನ್ನು ಹೇಳುತ್ತಾ ಬದುಕಿನ ಮೇಲೆ ತಿಳಿಬೆಳಕನ್ನು ಸುರಿಯುವ ಕೆಲಸ ನಡೆಯುತ್ತದೆ. ಈ ಹಾಡಿನ ಜನನವಾದುದೇ ಒಂದು ವಿಶೇಷ ಸಂಗತಿ. ಸ್ವಾಗತ್ ಹೋಟೆಲಿನ ಟೇಬಲ್ ಮೇಲೆ ಬೊಂಬೆಯಿಟ್ಟು ಅದನ್ನು ನೂಕಿದಾಗ ಸಂಗೀತ ನಿರ್ದೇಶಕ ಜಿ.ಕೆ. ವೆಂಕಟೇಶ್ ಅವರು ಈ ರೀತಿ ಹೇಳುತ್ತಾರೆ. 'ಯಾರು ಹೇಗೆ ನೂಕಿದರೂ ಇದು ವಾಲಾಡುತ್ತೇ ವಿನಃ ಉರುಳಿಹೋಗಲ್ಲ, ನಗೋದು ನಿಲ್ಲೊಲ್ಲ. ಇದನ್ನು ತಯಾರಿಸಿದನಲ್ಲ ಶಿಲ್ಪಿ, ಅವನ ಕೈಚಳಕ ದೊಡ್ಡದು' ಎಂದು ಹೇಳಿದ ಮಾತನ್ನು ಉದಯ ಶಂಕರ್ ಅವರು ಗುನುಗುತ್ತಲೇ ಮನನ ಮಾಡುತ್ತಾ ಮುಂದಿನ ಐದೇ ನಿಮಿಷದಲ್ಲಿ 'ಆಡಿಸಿ ನೋಡು ಬೀಳಿಸಿ ನೋಡು ಉರುಳಿ ಹೋಗದು...' ಎಂಬ ಸಾಲುಗಳು ಅಕ್ಷರದ ಶೋಭೆಯಲ್ಲಿ ಪಲ್ಲವಿಯ ರೂಪವಾಗಿಯೇ ಜನ್ಮವೆತ್ತಿ ಇಂದಿಗೂ ಕರ್ಣ ರಸಾಯನವನ್ನು ಉಂಟು ಮಾಡುತ್ತಿರುವುದು ಹಾಡಿನ ಗಟ್ಟಿತನಕ್ಕೆ ಹಿಡಿದ ಕೈಗನ್ನಡಿ. ಆದರೆ ಒಂದಂತು ಸತ್ಯ ಈ ಸಾಲುಗಳ ಎಳೆ ಎಳೆಗಳು ಕೇವಲ ಮಗುವಿಗಾಗಿ ಅಲ್ಲವೇ ಅಲ್ಲ ಕಿರಿಯರಿಂದ ಹಿರಿಯರವರೆಗೆ ಬದುಕಿನ ಪಾಠವನ್ನೇ ಸಾರವತ್ತಾಗಿ ಸಾರುವ ಅದ್ಭುತ ನೀತಿಯ ರಸಗ್ರಹಣವಾಗಿದೆ. ಇದರಲ್ಲಿ ಮುಗ್ಧ ಮಗುವಿನ ಸಂಭ್ರಮವಿದೆ, ನಾಯಕನ ಸಂಕಟವಿದೆ. ಸಾರ್ವಕಾಲಿಕವಾದ ಸಂದೇಶವಿದೆ. ವಿಧಿಯ ಕೈಯಲ್ಲಿ ನಾವೆಲ್ಲರೂ ಆಟಿಕೆಯ ವಸ್ತುಗಳು, ಆತನ ಆಣತಿಯಂತೆ ನಾವು ಆಡಲೇಬೇಕು. ನಾವು ನೆನಸಿದಂತೆ ಅದು ಎಂದಿಗೂ ನಡೆಯುವುದಿಲ್ಲ ಎಂಬ ವಿಧಿವಾದ ಇಡೀ ಹಾಡಿನಲ್ಲಿ ತಳಕು ಹಾಕುತ್ತದೆ. ಜೊತೆಗೆ ನಿಸರ್ಗ ಸಹಜವಾಗಿ ಎಲ್ಲವು ಮೌನದಲ್ಲಿ ನಡೆದು ಹೋಗುವಾಗ ಮನುಷ್ಯನು ಮಾತ್ರವೇ ಸಣ್ಣ ಕಾರ್ಯಗಳಿಗೂ ಡಂಗೂರ ಸಾರಿಕೊಂಡು ಬದುಕುವ ಮನುಷ್ಯನ ಬದುಕು ನಿರರ್ಥಕ. ಮೊದಲ ಭಾಗದ ಪಲ್ಲವಿಯಲ್ಲಿನ

ಆಡಿಸಿನೋಡು ಬೀಳಿಸಿನೋಡು ಉರುಳಿ ಹೋಗದು
ಏನೇ ಬರಲಿ ಯಾರಿಗೂ ಸೋತು ತಲೆಯಬಾಗದು
ಎಂದಿಗು ನಾನು ಹೀಗೆ ಇರುವ ಎಂದು ನಗುವುದು
ಹೀಗೆ ನಗುತಲಿರುವುದು॥

ಈ ಸಾಲುಗಳು ಜೀವಂತಿಕೆಯ ಧಾತುಗಳು ಎಂತಹ ಸೋಲಿನ ಬಳಲಿಕೆಯಲ್ಲಿ ಸೊರಗಿ ಕುಳಿತಿರುವ ಮನಸ್ಸನ್ನು ಪುಟಿಯುವಂತೆ ಜೀವನೋತ್ಸಹವನ್ನು ತುಂಬುತ್ತದೆ. ತೊಟ್ಟಿಲಲ್ಲಿ ಮಲಗಿರುವ ಮಗುವಿನ ಮುಂದೆ ಕುಳಿತ ಮಂದಿ ಜೋಗುಳ ಆಡಿ, ತೊಟ್ಟಿಲ ತೂಗುವ ಹೃದಯವಂತ ಮನಸ್ಸಿನ ಮಂದಿಗಳು ಮಾತ್ರ ಎಂದು ಅವರನ್ನು ಭಾವಿಸಲಾಗದು. ಕೆಲವು ಮಂದಿಗಳು ತೂಗುವ ನೆಪದಲ್ಲಿ ಕೊರಳ ಹಿಸುಕೆಲೆಳೆಸುವ ಮಂದಿಗಳು ಆಗಿರಬಹುದು ಅಂತಹ ಸಂದರ್ಭದಲ್ಲಿ ಎಚ್ಚರಿಕೆಯ ನಡೆ ಎಂಬುದು ಅತೀ ಮುಖ್ಯವಾದ ಮನಸ್ಥಿತಿ. ಗೊಂಬೆಯು ಈ ಬಗೆಯ ಚೈತನ್ಯ ಶಕ್ತಿಯನ್ನು ತಿಳಿಸಲಾಗುತ್ತಿದೆ.

ಅಂತೆಯೇ ದಣಿವರಿಯದ ಜೀವದ ಶಕ್ತಿಯಂತೆ ಸದಾ ಕಾಲ ಅಸ್ಮಿತೆಯ ಜಾಲದಲ್ಲಿ ಹಸನ್ಮುಖಿಯಾಗಿ ನಗುತ್ತಲೇ ಸಾಗುವ ಗೊಂಬೆ ನಮ್ಮೆಲ್ಲರಿಗೂ ಸ್ಫೂರ್ತಿಯ ಚಿಲುಮೆ. ಎಷ್ಟೇ ಕಷ್ಟ–ನಷ್ಟ, ಸೋಲು–ಸವಾಲುಗಳು ಎದುರಾದರೂ ಧೃತಿಗೆಡದೆ ಸಾಗಬೇಕು ಎಂದು ಕರೆ ನೀಡುತ್ತಿದೆ.

ಮೊದಲ ಚರಣದಲ್ಲಿ ಕಷ್ಟವೂ ಇರಲಿ ಸುಖವೇ ಬರಲಿ, ಎರಡನ್ನು ಒಂದೇ ರೀತಿ ಸ್ವೀಕರಿಸಬೇಕು. ಕಷ್ಟ ಎದುರಾದಾಗ ಕುಗ್ಗದೆ, ಸುಖ ಬಂದಾಗ ಹಿಗ್ಗದೆ, ಒಂದೇ ಬಗೆಯ ಇರುವಿಕೆ ನಮ್ಮ ಸಮಚಿತ್ತತೆಯನ್ನು ತೋರಿಸುತ್ತದೆ. ಗೊಂಬೆಗೆ ಗುಡಿಸಲು ಒಂದೇ, ಅರಮನೆಯು ಒಂದೇ, ಕಿರಿಯರು ಒಂದೇ, ಹಿರಿಯರು ಒಂದೇ. ನಾವು ಅಷ್ಟೇ ಸಿರಿತನ ಬರಲಿ–ಬಡತನ ಇರಲಿ ನಾವು ಅಹಂಕಾರ ಪಡಬಾರದು, ಕುಗ್ಗ ಬಾರದು ಹಿರಿ–ಕಿರಿಯರಿಗೆ ಗೌರವವನ್ನು ನೀಡಿ ಹೊಂದಾಣಿಕೆ ಮಾಡಿಕೊಂಡು ಸಾಗಬೇಕು ಎಂದು ಮನೋಜ್ಞವಾಗಿ ಹೇಳಲಾಗಿದೆ.

ಎರಡನೇ ಚರಣದಲ್ಲಿ ತಮ್ಮ ನೋವನ್ನು ಮರೆತು, ನೋವಲ್ಲೇ ಬದುಕಿ, ಜಗಕ್ಕೆ ನೆರವಾಗುವ ಕೆಲವು ಉದಾಹರಣೆಗಳ ಮೂಲಕ ಬದುಕಿನ ಸಾರ್ಥಕತೆಯನ್ನು ತಿಳಿಸಲಾಗಿದೆ. ಕಬ್ಬು ತನ್ನೆಲ್ಲ ದೇಹವನ್ನು ನೋಯಿಸಿಕೊಂಡು ಸಂಕಷ್ಟವನ್ನು ಅನುಭವಿಸಿದರು ಹೇಗೆ ಜಗದ ಬಾಯಿಗಳಿಗೆ ಸಿಹಿಯನ್ನು ಹಂಚುವಂತೆ, ಅಕ್ಕಿಯು ಅನ್ನವಾಗಲು ಹೇಗೆಲ್ಲ ಕೊತಕೊತ ಕುದಿಯುವ ನೀರಿನಲ್ಲಿ ಕುದಿದು ಮೃದುವಾಗಿ ಹಸಿವನ್ನು ನೀಗಿಸುವಂತೆ, ಶಿಲ್ಪಿಯು ಶಿಲೆಯನ್ನು ಉಳಿ ಪೆಟ್ಟಿನಿಂದ ಕಡೆದು ಕಲೆಯನ್ನು ಅರಳಿಸಿ ಮೂರ್ತಿಯಾಗಿಸುವಂತೆ, ಅಷ್ಟೇ ಅಲ್ಲದೆ, ಹಾಡಿನ ಸಾಲಿನಲ್ಲೇ ಬರುವ ಗಂಧವನ್ನು ಎಷ್ಟು ತೇಯ್ದರು ಸಹಾ ಪರಿಮಳವು ಹೇರಳವಾಗಿ ತುಂಬಿ ಬರುತ್ತದೆ ಹಾಗೆಯೇ ದೀಪವು ತಾನು ಉರಿದು ಸುಟ್ಟು ಹೋದರೂ ಜಗದ ಕಗ್ಗತ್ತಲನ್ನು ದೂರ ಮಾಡಿ ಬೆಳಕಿನ ಬುಗ್ಗೆಯನ್ನು ಚಿಮ್ಮಿಸಿ ಜೀವನವನ್ನೇ ಸಾರ್ಥಕಗೊಳಿಸಿಕೊಳ್ಳುವಂತೆ ವ್ಯಕ್ತಿಯು ಆಯುಷ್ಯ ಇರುವಷ್ಟರಲ್ಲೇ ಜಗಕ್ಕೆ ಯಾವುದಾದರೂ ಕಿರು ಕಾಣಿಕೆಯನ್ನು ನೀಡಿ ತನ್ನ ಹುಟ್ಟನ್ನು ಸಾರ್ಥಕಗೊಳಿಸಿಕೊಳ್ಳಲೇಬೇಕು.

ಮೂರನೇ ಚರಣದಲ್ಲಿ ಮತ್ತು ಕೊನೆಯ ಸಾಲಿನಲ್ಲಿ ಬದುಕಿನ ಸಾರ ಸಂಗ್ರಹವನ್ನೇ ಸಾರುವ ಸಾಲುಗಳು ಸದಾ ನಮ್ಮನ್ನು ಎತ್ತಲೋ ಕೊಂಡೊಯ್ಯುತ್ತವೆ. ವಿಧಿಯಾಟದ ಮುಂದೆ ಮನುಷ್ಯನ ಆಟ ಏನು ನಡೆಯಲಾರದು. ನಮ್ಮ ಕೈಯ್ಯಲ್ಲಿ ಏನು ಇಲ್ಲ. ಅಧಿಕಾರ, ಅಂತಸ್ತು, ಸಂಪತ್ತು, ಕೀರ್ತಿ, ಗೌರವ, ಹೆಸರು... ಏನೆಲ್ಲವನ್ನು ಸಂಪಾದಿಸಿದರೂ ಅದು ಕ್ಷಣಿಕವಾದದು. ಇದನ್ನು ಅರ್ಥ ಮಾಡಿಕೊಂಡವರು ಮಾತ್ರವೇ ಬದುಕಿಗೊಂದು ಅರ್ಥ ಸಿಗುತ್ತದೆ. ಇಲ್ಲವಾದರೆ ಈ ಬಾಳು ನಿರರ್ಥಕವಾಗುತ್ತದೆ.

ಅದಕ್ಕೆ ಕವಿ ಹೃದಯ. ಮತ್ತೊಂದು ಕಡೆ ಈ ರೀತಿ ಹೇಳಿದೆ **'ಬಾಳು ಮೂರೇ ದಿನ ಬಾಳ ಜೋಪಾನ, ಬಾಳ ಮೆರಿ ಬ್ಯಾಡ ಬೀಳ್ತಿಕಾಣಣ್ಣ'** ಎಂದು. ಈ ಸಾಲುಗಳು ಕವಿಯ ಗರ್ಭವನ್ನು ಸವರಿ ಮೆದುಳಲ್ಲಿ ಮೆತ್ತಿ ಕೊಂಡಾಗ ಹೊಡೆದಾಟ, ಹೋರಾಟ, ಹಾರಾಟಗಳ ಹಾವಳಿ ನಮ್ಮನ್ನು ಮುತ್ತುವುದಿಲ್ಲ, ನಾನತ್ವ ನಮ್ಮಿಂದ ಮರೆಯಾಗಿ ವಿಶಾಲತೆ ಅದರ ಬದಲಾಗಿ ಹೇಳುವ ಮತ್ತೊಂದು ಹಾಡು ಕವಿಯ ಗರ್ಭದಲ್ಲಿ ಮಾರ್ದನಿಸಿದಾಗ ಮನುಷ್ಯನಾದವನು ನೀರ ಮೇಲಣ್ಣ ಗುಳ್ಳೆ ಮಾತ್ರ ಆ ಗುಳ್ಳೆ ನುಚ್ಚು ನೂರು ಯಾವಾಗ ಎಂದು ತಿಳಿಯಲು ಸಾಧ್ಯವಿಲ್ಲ. ಅದರಂತೆಯೇ ವಿಧಿವಾದದಲ್ಲಿ ಮಾತನಾಡುವಾಗ ಯಾವ ಕ್ಷಣದಲ್ಲಿ ಏನಾಗುತ್ತದೋ ಎಂದು ಹೇಳಲು ಸಾಧ್ಯವಿಲ್ಲ. ಈಗಿರುವಾಗ ಮನುಷ್ಯ ಮಾತ್ರನಾಗಿರುವ ವ್ಯಕ್ತಿಯು ಅಹಂಕಾರವನ್ನು ಬಿಟ್ಟು ಆತ್ಮಚೈತನ್ಯವನ್ನು ಜಾಗೃತಗೊಳಿಸಿಕೊಂಡು ಸಾಧನೆಯ ಶಿಖರದಲ್ಲಿ ಸಿದ್ಧಿಯ ಫಲವನ್ನು ಅನುಭವಿಸಲು ಸಾಧ್ಯವಾಗಿಸಿಕೊಳ್ಳಬೇಕು.

ಕಲಿಕಾರ್ಥಿ

ಕಲಿ(ತಿಳಿ), ಕಲಿತವನೇ ಮಹಾನ್ ಕಲಿ(ವೀರ),
ಕಲಿಕಾರ್ಥಿಗಳು ಕಲಿಸುವುದೆಲ್ಲವನ್ನು
ಕಲಿಯುವುದಿಲ್ಲ,
ಕಲಿಸುವವರು ತಾವು ಕಲಿತಿರುವುದೆಲ್ಲವನ್ನು
ಸಹ ಕಲಿಸುವುದಿಲ್ಲ,
ಒಂದು ವೇಳೆ ಇದು ಸಾಧ್ಯವಾಗಿದ್ದರೆ
ಒಬ್ಬೊಬ್ಬರು ಗ್ರಂಥಕೋಶದ ರಾಶಿಯನ್ನೇ
ರಚಿಸಿರುತ್ತಿದ್ದರು. ಕಲಿತಂತೆ ನಟನೆ
ಮಾಡುವುದಕ್ಕು ಕಲಿತು ನಟನೆ ಮಾಡುವುದಕ್ಕು
ಭಿನ್ನತೆ ಬಹಳ. ಓದದೆ–ಬರೆಯದೆ–ಕಲಿಯದೆ–
ಅನುಭವದ ರಸಪಾಕವನ್ನು ಸವಿಯದೆ
ಬದುಕಿನ ಪುಸ್ತಕ ರಚನೆಯಾಗದು ಎಂದಳು
ನನ್ನವ್ವ ಸಾಕವ್ವ....

'ಮತ್ತೊಮ್ಮೆ ಮೋದಿಜಿ–2024' ಗೋಡೆ ಬರಹ ಕಾರ್ಯಕ್ರಮಕ್ಕೆ ವರುಣದಲ್ಲಿ ಚಾಲನೆ



ಮೈಸೂರು, ಫೆ.24– ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ವತಿಯಿಂದ ವರುಣ ವಿಧಾನಸಭಾ ಕ್ಷೇತ್ರದ ಕೂಡನ ಹಳ್ಳಿ, ಸೋಮೇಶ್ವರಪುರ ಸೇರಿದಂತೆ ಪ್ರಮುಖ ಗ್ರಾಮಗಳಲ್ಲಿ 'ಮತ್ತೊಮ್ಮೆ ಮೋದಿ–2024' ಗೋಡೆ ಬರಹ ಕಾರ್ಯಕ್ರಮಕ್ಕೆ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್ ಮಹದೇವಸ್ವಾಮಿ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಇಡೀ ದೇಶ ಮೋದಿಯವರ ಅಭಿವೃದ್ಧಿ ಕೆಲಸಗಳನ್ನು ಶ್ಲಾಘಿಸುತ್ತಿದ್ದು ನಾವೆಲ್ಲರೂ ಬಿಜೆಪಿಯಲ್ಲಿ ಕೆಲಸ ಮಾಡುತ್ತಿರುವುದು ನಮ್ಮೆಲ್ಲರ ಪುಣ್ಯ, ಜೊತೆಗೆ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಯಡಿಯೂರಪ್ಪರವರ ಅಧ್ಯಕ್ಷತೆ ಹಾಗೂ ಮಾರ್ಗದರ್ಶನದಲ್ಲಿ ಸಂಘಟನೆ ಮಾಡುತ್ತಿರುವುದು ಸಂತಸ ತಂದಿದೆ ಮುಂದಿನ ದಿನಗಳಲ್ಲಿ ಅವರ ನೇತೃತ್ವದಲ್ಲಿ ಲೋಕಸಭಾ ಚುನಾವಣೆಯನ್ನು ಎದುರಿಸಿ, 28ಕ್ಕೆ 28 ಕ್ಷೇತ್ರಗಳಲ್ಲೂ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ನಿಟ್ಟಿನಲ್ಲಿ ಹಗಲಿರುಳು ಶ್ರಮಿಸುತ್ತೇವೆ ಎಂದರು, ಪ್ರಧಾನಮಂತ್ರಿಗಳವರ ಅಭಿವೃದ್ಧಿ ಸಂಕೇತದ ಯೋಜನೆಗಳಾದ ಸಂಧ್ಯಾ ಸುರಕ್ಷ, ಫಸಲ್ ಭೀಮ, ಜಲಜೀವನ್ ಮಿಷನ್, ಮುದ್ರಾ ಸಂಸದ್ ಆದರ್ಶ್ ಗ್ರಾಮ ಯೋಜನೆ, ಪ್ರಧಾನ್ ಮಂತ್ರಿ ಉಜ್ವಲ ಯೋಜನೆ, ಇನ್ನೂ ಸಾಕಷ್ಟು ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತಂದಿದ್ದು ಅದೆಲ್ಲವೂ ದೇಶದಲ್ಲಿ ಪ್ರಸ್ತುತ ಮಾನವ ಸಂಪನ್ಮೂಲ ಯಂತ್ರಗಳಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದರು.

ಬಡ ಸಮುದಾಯಕ್ಕೆ ಸ್ವಂತ ಉದ್ದಿಮೆ ಮಾಡಲು ಹಲವಾರು ಯೋಜನೆಗಳ ಮುಖಾಂತರ ಅತೀ ಕಡಿಮೆ ಬಡ್ಡಿದರದಲ್ಲಿ ಲೋನ್ ನೀಡಿದ್ದು, ಅದರಲ್ಲೂ ಬಡವರ ವ್ಯವಹಾರ ವಹಿವಾಟುಗಳಿಗೆ ಲಾಭ ದೊರೆಯುವ ನಿಟ್ಟಿನಲ್ಲಿ ಮೋದಿಯವರ ಸರ್ಕಾರವು ಕೆಲಸ ಮಾಡುತ್ತಿದೆ. 500 ವರ್ಷಗಳ ನಮ್ಮ ಕನಸಾದ ಅಯೋಧ್ಯೆ ರಾಮಮಂದಿರ ನಿರ್ಮಾಣ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಇದಲ್ಲದೇ ಅತ್ಯುತ್ತಮ ರಸ್ತೆಗಳು, ರೈಲು ಸೇವೆಗಳು, ಕೃಷಿ ಯೋಜನೆಗಳು ಹತ್ತು ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಯಶಸ್ವಿಯಾಗಿ ಜನರಿಗೆ ತಲುಪುವ ನಿಟ್ಟಿನಲ್ಲಿ ಪ್ರಧಾನಮಂತ್ರಿಗಳು ಕೆಲಸ ಮಾಡಿದ್ದಾರೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನಾವೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುವ ಮೂಲಕ ಲೋಕಸಭಾ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಬೇಕು ಹಾಗೂ ನರೇಂದ್ರ ಮೋದಿಯವರನ್ನು ಮತ್ತೊಮ್ಮೆ ದೇಶದ ಪ್ರಧಾನಮಂತ್ರಿಗಳಾಗಿ ದೇಶಸೇವೆ ಮಾಡಲು ನಾವೆಲ್ಲರೂ ಶ್ರಮಿಸಬೇಕು ಎಂದರು.

ಈ ಸಂದರ್ಭದಲ್ಲಿ ಬೂತ್ ಸಂಖ್ಯೆ 128, 129ರ ಅಧ್ಯಕ್ಷರನ್ನು ಸನ್ಮಾನಿಸಲಾಯಿತು. ಈ ವೇಳೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಡವಾಡಿ ಮಹೇಶ್, ತಾಪಂ ಮಾಜಿ ಸದಸ್ಯ ಕೂಡನಹಳ್ಳಿ ಶಂಕರ, ಮಹಾ ಶಕ್ತಿ ಕೇಂದ್ರದ ಅಧ್ಯಕ್ಷ ಅಲಗಯ್ಯನಹುಂಡಿ ಸೋಮಶೇಖರ್, ಬಿಜೆಪಿ ಮುಖಂಡರಾದ ನಂಜಪ್ಪ, ಗ್ರಾಪಂ ಸದಸ್ಯರಾದ ಕೋಚನಳ್ಳಿ ಮಾದಪ್ಪ, ಸಿದ್ದರಾಜು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ರಾಜ್ಯದ ವಿವಿಧ ಜೈಲುಗಳಿಂದ ಪರಾರಿಯಾಗಿದ್ದ 199 ಕೈದಿಗಳ ಪೈಕಿ 32 ಮಂದಿ ಇನ್ನೂ ನಾಪತ್ತೆ!

ಬೆಂಗಳೂರು, ಫೆ.24– ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಕೈದಿಗಳಲ್ಲಿ ಪರಾರಿಯಾಗಿದ್ದ 199 ಕೈದಿಗಳ ಪೈಕಿ 32 ಮಂದಿ ಕೈದಿಗಳು ಇನ್ನೂ ಪತ್ತೆಯಾಗಿಲ್ಲ. 2010 ರಿಂದ 2024ರವರೆಗಿನ ಅಂಕಿ ಅಂಶಗಳ ಪೈಕಿ ಒಟ್ಟು 199 ಮಂದಿ ಬಂದಿಗಳು ಜೈಲಿಂದ ಪರಾರಿಯಾಗಿದ್ದರು.

ಗೃಹ ಇಲಾಖೆ ನೀಡಿರುವ ಮಾಹಿತಿಗಳ ಪ್ರಕಾರ, ಪರಾರಿಯಾಗಿದ್ದ 199 ಕೈದಿಗಳಲ್ಲಿ 167 ಮಂದಿಯನ್ನು ಮತ್ತೆ ಬಂಧನಕ್ಕೆ ಒಳಪಡಿಸಲಾಗಿದೆ. ಆದರೆ 32 ಅಪರಾಧಿಗಳು ಮಾತ್ರ ಇನ್ನೂ ಪತ್ತೆಯಾಗದೆ ಉಳಿದಿದ್ದಾರೆ

ಬೆಂಗಳೂರು ಪರಪ್ಪನ ಅಗ್ರಹಾರದಲ್ಲಿದ್ದ ದೀಪಕ್ ಮಿಶ್ರಾ ಎಂಬ ಕೈದಿ 2010ರಲ್ಲಿ ವಿಚಾರಣೆಗೆ ಕರೆದುಕೊಂಡು ಹೋದ ಸಂದರ್ಭದಲ್ಲಿ ತಮಿಳುನಾಡಿನ ರೈಲ್ವೇ ನಿಲ್ದಾಣದಿಂದ ಪರಾರಿಯಾಗಿದ್ದಾನೆ. ಮೈಸೂರು ಕಾರಾಗೃಹದಲ್ಲಿದ್ದ ಪ್ರಕಾಶನ್ ಎಂಬಾತ 2014 ಕೇರಳಕ್ಕೆ ವಿಚಾರಣೆಗೆ ಕರೆದೊಯ್ದ ಸಂದರ್ಭದಲ್ಲಿ ಬೆಂಗಾವಲು ಪೊಲೀಸರ ಕಣ್ತಪ್ಪಿಸಿ ಪರಾರಿಯಾಗಿದ್ದಾನೆ.

ಶಿವಮೊಗ್ಗ ಸೆಂಟ್ರಲ್ ಜೈಲಿನಲ್ಲಿದ್ದ ಮುಹಮ್ಮದ್ ಹುಸೇನ್ ಎಂಬಾತ 2017ರಲ್ಲಿ ಜೈಲು ಗೇಟು ದಾಟಿ ಪರಾರಿಯಾಗಿದ್ದಾನೆ ಕಲಬುರಗಿ ಸೆಂಟ್ರಲ್ ಜೈಲಿನಲ್ಲಿದ್ದ ಶಿವಕುಮಾರ್ ಎಂಬಾತ 2016ರಲ್ಲಿ ಜೈಲು ಗೋಡೆಹಾರಿ ಪರಾರಿಯಾಗಿದ್ದಾನೆ. ಬೆಳಗಾವಿ ಸೆಂಟ್ರಲ್ ಜೈಲಿನಲ್ಲಿದ್ದ ಮಂಜುನಾಥ್ ಎಂಬಾತ 2015ರಲ್ಲಿ ವಿಚಾರಣೆಗೆ ಕರೆದುಕೊಂಡು ಹೋಗಿದ್ದ ಸಂದರ್ಭದಲ್ಲಿ ಬೆಂಗಾವಲು ಪೊಲೀಸರ ಕಣ್ತಪ್ಪಿಸಿ ಪರಾರಿಯಾಗಿದ್ದಾನೆ. ಇವರ ಸುಳಿವು ಸಿಕ್ಕಿಲ್ಲ.

ಕೊಪ್ಪಳ ಜಿಲ್ಲಾ ಕಾರಾಗೃಹದಿಂದ 2010ರಲ್ಲಿ ಒಂದೇ ದಿನ ಜೈಲಿನ ಗೋಡೆ ಹಾರಿ 7 ಮಂದಿ ಕೈದಿಗಳು ಪರಾರಿಯಾಗಿದ್ದರು. ಆದರೆ ಅವರು ಈವರೆಗೆ ಪತ್ತೆಯಾಗಿಲ್ಲ. ಮುಹಮ್ಮದ್ ಶೇಖ್, ಮಜ್ರಬ್, ಮುಹಮ್ಮದ್ ಅಶ್ರಫ್ ಅಲಿ, ಮುಹಾಬರ್ ಶೇಖ್, ಮಾಖ್ಯಯಡ್ಯ, ಆಸೀಫ್ ಇಕ್ಬಾಲ್, ಆಬಿದ್ ಖಾನ್ ಪರಾರಿಯಾದ ಕೈದಿಗಳಾಗಿದ್ದಾರೆ.

ಇಂದಿನಿಂದ ಉತ್ತನಹಳ್ಳಿ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ಜಾತ್ರೆ

ಮೈಸೂರು, ಫೆ.24(ಎಸ್‌ಪಿಎನ್)– ತಾಲೂಕಿನ ಉತ್ತನಹಳ್ಳಿ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ ಫೆ.25ರಿಂದ 27ರವರೆಗೆ ನಡೆಯಲಿದೆ.

ಫೆ.25ರಂದು ಬೆಳಗ್ಗೆ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರಿಗೆ ವಿವಿಧ ಪೂಜಾ ಕೈಂಕರ್ಯ ನಡೆಯಲಿದ್ದು, ಮಧ್ಯಾಹ್ನ 12.30ಕ್ಕೆ ಪ್ರಸಾದ ವಿನಿಯೋಗ, ರಾತ್ರಿ 9ಕ್ಕೆ ಅಮ್ಮನವರಿಗೆ ಮಹಾಮಂಗಳಾರತಿ ನೆರವೇರಲಿದೆ. ಫೆ.26ರಂದು ಕನ್ಯಾಕನ್ನಡಿ ಉತ್ಸವ ಪುಣ್ಯಾಹ ಮಂಟಪೋತ್ಸವ ನಡೆಯಲಿದ್ದು, ಫೆ.27ರಂದು ರುದ್ರಾಭಿಷೇಕ, ಪಂಚೋಪಚಾರ ಸೇರಿದಂತೆ ಇತರೆ ಪೂಜಾ ಕೈಂಕರ್ಯ ನಡೆಯಲಿದೆ ಎಂದು ದೇವಸ್ಥಾನದ ಪಾರುಪತ್ತೇದಾರ ಹೆಚ್.ಆರ್.ಸಂಜೀವ್ ತಿಳಿಸಿದ್ದಾರೆ.

ಜಾತ್ರಾ ಮಹೋತ್ಸವದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಾಲಯಗಳ ಆಡಳಿತಾಧಿಕಾರಿ ಪಿ.ಶಿವರಾಜ್, ದೇವಾಲಯದ ಆಗಮಿಕರಾದ ಎಸ್.ಸಿ.ಮಹದೇವಪ್ರಸಾದ್ ಸೇರಿದಂತೆ ಇತರರು ಉಪಸ್ಥಿತರಿರುತ್ತಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ನನಗೆ ಬ್ರಾಹ್ಮಣರ ಬೆಂಬಲ ಮುಖ್ಯ

ನಿವೃತ್ತ ಎಡಿಜಿಪಿ ಭಾಸ್ಕರ್‌ರಾವ್ ಮನವಿ



ಮೈಸೂರಿನ ಆರಾಧ್ಯ ಮಹಾಸಭಾದಲ್ಲಿ ಶನಿವಾರ ಮೈಸೂರು ವಿಪ್ರ ಬಳಗ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ನಿವೃತ್ತ ಎಡಿಜಿಪಿ ಭಾಸ್ಕರ್ ರಾವ್ ಅವರೊಂದಿಗೆ ಸಂವಾದ ಆಯೋಜಿಸಿತ್ತು.

ಮೈಸೂರು, ಫೆ.24(ಬಿಎಲ್‌ಯು)– ಮೈಸೂರು ಹಾಗೂ ಕೊಡಗು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡಲು ಬ್ರಾಹ್ಮಣ ಸಮುದಾಯದ ಬೆಂಬಲ ನನಗೆ ಬಹಳ ಮುಖ್ಯ ಎಂದು ನಿವೃತ್ತ ಎಡಿಜಿಪಿ ಭಾಸ್ಕರ್‌ರಾವ್ ತಿಳಿಸಿದ್ದಾರೆ.


ಮೈಸೂರಿನ ಆರಾಧ್ಯ ಮಹಾಸಭಾದಲ್ಲಿ ಮೈಸೂರು ವಿಪ್ರ ಬಳಗ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸಂಯುಕ್ತವಾಗಿ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದ ಅವರು, ಪೊಲೀಸ್ ಇಲಾಖೆಯ ನನ್ನ ಸೇವೆಯಲ್ಲಿ ಒಂದು ಕಪ್ಪು ಚುಕ್ಕೆ ಇಲ್ಲ. ಯಾವುದೇ ತಪ್ಪುಗಳಾಗಿಲ್ಲ. ಈಗ ರಾಜಕೀಯಕ್ಕೆ ಬಂದಿದ್ದೇನೆ. ಇಲ್ಲಿ ಕೂಡ ಯಾವುದೇ ತಪ್ಪುಗಳಾಗುವುದಿಲ್ಲ ಎಂದರು.

ಜೈನ ಹಾಗೂ ಸಿಖ್ ಧರ್ಮದಲ್ಲಿ ಬಡವರನ್ನು ಮೇಲೆತ್ತುವಂತೆ ಬ್ರಾಹ್ಮಣ ಸಭಾ ಕೂಡ ಬಡವರನ್ನು ಮೇಲೆತ್ತಬೇಕು ಹಾಗೂ ಉದ್ಧಾರ ಮಾಡಬೇಕು. ಇದಕ್ಕಾಗಿ ಇಡೀ ಸಮುದಾಯ ಟೊಂಕ ಕಟ್ಟಿ ನಿಲ್ಲಬೇಕು ಎಂದು ಸಲಹೆ ನೀಡಿದರು.

> **“ನಾನು ಕೂಡ ಮೂಲತಃ ಮೈಸೂರಿನವನು. ನಂಜನಗೂಡು ತಾಲೂಕಿನ ಕಳಲೆ ನನ್ನ ಹುಟ್ಟೂರು. ನಮ್ಮ ಪೂರ್ವಿಕರೆಲ್ಲಾ ಮೈಸೂರಿನಲ್ಲೇ ನೆಲೆಸಿದ್ದರು. ಮೈಸೂರು ಜಿಲ್ಲೆಯಲ್ಲಿ ಪೊಲೀಸ್ ಅಧಿಕಾರಿಯಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ. ಯಾವುದೇ ಗಲಾಟೆಗೆ ಆಸ್ಪದ ನೀಡದೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಿದ್ದೇನೆ. –ಭಾಸ್ಕರ್‌ರಾವ್**

ಬ್ರಾಹ್ಮಣರಲ್ಲಿ ಸಂಸ್ಕಾರ ಹಾಗೂ ಬುದ್ಧಿವಂತಿಕೆ ಇದೆ. ಹಾಗೆಯೇ ಆರ್ಥಿಕವಾಗಿ ದುರ್ಬಲರಾಗಿರುವವರು ಕೂಡ ಇದ್ದಾರೆ. ಇಂತಹ ಸಂದರ್ಭದಲ್ಲಿ ಸ್ಥಿತಿವಂತ ಬ್ರಾಹ್ಮಣರು ಬಡವರ ಬಗ್ಗೆ ಪ್ರೀತಿ ಮತ್ತು ಕಾಳಜಿ ತೋರಬೇಕು ಎಂದು ಹೇಳಿದರು.

ನಮ್ಮ ಒಪ್ಪಿಗೆಯಿಲ್ಲದೆ ಮೇಕೆದಾಟು ಯೋಜನೆಗೆ ಒಂದೇ ಒಂದು ಇಟ್ಟಿಗೆ ಇಡಲು ಕೂಡ ಆಗಲ್ಲ





ದುರೈ ಮುರುಗನ್

ಚೆನ್ನೈ, ಫೆ.24– ಕರ್ನಾಟಕ ನಮ್ಮ ಒಪ್ಪಿಗೆಯಿಲ್ಲದೇ ಉದ್ದೇಶಿತ ಮೇಕೆದಾಟು ಯೋಜನೆಗೆ ಒಂದೇ ಒಂದು ಇಟ್ಟಿಗೆ ಇಡಲು ಕೂಡ ಸಾಧ್ಯವಾಗುವುದಿಲ್ಲ ಎಂದು ತಮಿಳುನಾಡು ಜಲ ಸಂಪನ್ಮೂಲ ಸಚಿವ ದುರೈ ಮುರುಗನ್ ಇಂದಿಲ್ಲಿ ಹೇಳಿದ್ದಾರೆ.

ತಮಿಳುನಾಡು ವಿಧಾನಸಭೆಯಲ್ಲಿ ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ನಮ್ಮ ಜೊತೆ ಸಮಾಲೋಚನೆ ನಡೆಸದೇ ಯೋಜನೆ ಕಾರ್ಯಗತವಾಗುವುದಿಲ್ಲ ಎಂದು ಸದನಕ್ಕೆ ಭರವಸೆಯನ್ನು ನೀಡಿದರು.

ತಮಿಳುನಾಡಿನ ಪ್ರತಿರೋಧದ ನಡುವೆಯೂ ಕರ್ನಾಟಕ ಸರ್ಕಾರವು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯೂಎಂಎ) ಸಭೆಗಳಲ್ಲಿ ಮೇಕೆದಾಟು ಜಲಾಶಯದ ನಿರ್ಮಾಣದ ಬಗ್ಗೆ ವಿಷಯವನ್ನು ಪ್ರಸ್ತಾಪಿಸುತ್ತಿತ್ತು ಎಂದು ತಮಿಳುನಾಡು ಜಲ ಸಂಪನ್ಮೂಲ ಸಚಿವ ದುರೈ ಮುರುಗನ್ ಹೇಳಿದ್ದಾರೆ.

ಮೇಕೆದಾಟು ಯೋಜನೆ ಬಗ್ಗೆ ತಮಿಳುನಾಡು ವಿಧಾನಸಭೆಯ ಸದನದ ವೇಳೆ ಶೂನ್ಯ ವೇಳೆಯಲ್ಲಿ ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ ಪಳನಿಸ್ವಾಮಿ ಪ್ರಶ್ನೆ ಕೇಳಿದ್ದರು. ಈ ಪ್ರಶ್ನೆಗೆ ಉತ್ತರಿಸಿದ ದುರೈ ಮುರುಗನ್, ಫೆಬ್ರವರಿ 1ರಂದು ಕರ್ನಾಟಕ ಸರ್ಕಾರ ಮತ್ತೆ ಈ ವಿಚಾರವನ್ನು ಪ್ರಸ್ತಾಪಿಸಿತ್ತು. ಆದರೆ, ನಾವು ಮೊದಲಿನಿಂದಲೂ ಈ ಪ್ರಸ್ತಾಪವನ್ನು ವಿರೋಧಿಸಿದ್ದೇವೆ. ಜೊತೆಗೆ ಈ ಬಗ್ಗೆ ಕಾನೂನು ಪ್ರಕ್ರಿಯೆಗಳನ್ನು ಪ್ರಾರಂಭಿಸಿದ್ದೇವೆ. ಈ ವಿಷಯವನ್ನು ಚರ್ಚೆಗೆ ತರಬೇಡಿ ಎಂದು ಡಬ್ಲ್ಯೂಆರ್‌ಡಿ ಕಾರ್ಯದರ್ಶಿಗೆ ತಿಳಿಸಿದ್ದೆವು. ಆದರೆ, ನಮ್ಮ ಮನವಿಯ ಹೊರತಾಗಿಯೂ ಸಿಡಬ್ಲ್ಯೂಎಮ್‌ಎ ಮೇಕೆದಾಟು ವಿಷಯವನ್ನು ಚರ್ಚೆಗೆ ತೆಗೆದುಕೊಂಡಿತ್ತು ಎಂದು ಸಚಿವರು ಹೇಳಿದರು.

ಸಿಡಬ್ಲ್ಯೂಎಂಎನಲ್ಲಿ ಚರ್ಚೆಯಾದ ಬಳಿಕ ಮೇಕೆದಾಟು ಯೋಜನೆಯಲ್ಲಿನ ತಾಂತ್ರಿಕ ಮತ್ತು ಆರ್ಥಿಕ ಅಂಶಗಳನ್ನು ಪರಿಗಣಿಸಿ ಮತ್ತು ಜಲಾಶಯದ ನಿರ್ಮಾಣ ಸಾಧ್ಯತೆ ಇದೆಯೇ ಎಂಬುದನ್ನು ಪರಿಶೀಲಿಸಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲು ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲಾಗುವುದು ಎಂದು ತಿಳಿಸಲಾಯಿತು. ಆದರೆ, ನಾವು ಈ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದು, ನ್ಯಾಯಾಲಯದ ಮೊರೆ ಹೋಗುತ್ತೇವೆ ಎಂದು ತಿಳಿಸಿದ್ದು, ನಮ್ಮ ಕಾರ್ಯದರ್ಶಿ ಜಲಶಕ್ತಿ ಸಚಿವಾಲಯ, ಅರಣ್ಯ ಇಲಾಖೆ, ಸಿಡಬ್ಲ್ಯೂಸಿ ಅಧ್ಯಕ್ಷರಿಗೆ ಪತ್ರ ಬರೆದಿದ್ದು, ಪ್ರಸ್ತಾವಿತ ಯೋಜನೆಯ ವಿರುದ್ಧ ಪ್ರಕರಣಗಳು ಬಾಕಿ ಉಳಿದಿವೆ. ಯೋಜನೆಯನ್ನು ಸುಪ್ರೀಂ ಕೋರ್ಟ್ ಅನುಮತಿಸಿಲ್ಲ ಎಂದು ತಿಳಿಸಲಾಗಿದೆ ಎಂದರು.

ಕರ್ನಾಟಕದಲ್ಲಿ ಬಿಜೆಪಿ ಅಥವಾ ಕಾಂಗ್ರೆಸ್ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಅವರು ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಜಲಾಶಯ ನಿರ್ಮಾಣದ ಬಗ್ಗೆ ಮಾತನಾಡುತ್ತಲೇ ಇರುತ್ತಾರೆ. ಆದರೆ, ಅದರ ನಿರ್ಮಾಣಕ್ಕೆ ತಮಿಳುನಾಡಿನ ಯಾವುದೇ ಪಕ್ಷವೂ ಬಿಡುವುದಿಲ್ಲ ಎಂದು ಸಚಿವರು ವಿಧಾನಸಭೆಯಲ್ಲಿ ಹೇಳಿದರು. ಅದಲ್ಲದೇ ತಮಿಳುನಾಡು ಮೇಕೆದಾಟು ಯೋಜನೆ ಪ್ರಶ್ನಿಸಿ ಸುಪ್ರೀಂಕೋರ್ಟ್ ಮೊರೆ ಹೋಗಲು ನಿರ್ಧರಿಸಿದೆ.

ಕ್ರೀಡಾ ಶಾಲಾ ಪ್ರವೇಶಕ್ಕೆ ಫೆ.27 ಆಯ್ಕೆ ಪ್ರಕ್ರಿಯೆ

ಮೈಸೂರು,ಫೆ.24– 2024–25ನೇ ಸಾಲಿನ ಜಿಲ್ಲಾ ಕ್ರೀಡಾಶಾಲೆ ಪ್ರವೇಶ ಪಡೆಯುವ ಸಂಬಂಧ ಆಯ್ಕೆ ಪ್ರಕ್ರಿಯೆ ಫೆ.27ರಂದು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಯಲಿದೆ. ಅಂದು ಬಾಲಕ ಅಥವಾ ಬಾಲಕಿಯರನ್ನು ಅಥ್ಲೆಟಿಕ್ ಮತ್ತು ಜಿಮ್ನ್ಯಾಸ್ಟಿಕ್ ಕ್ರೀಡೆಗಳಲ್ಲಿ ಮಾತ್ರ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು. (ದಿನಾಂಕ 01–06–2024ಕ್ಕೆ 10 ವರ್ಷದೊಳಗಿರಬೇಕು ಹಾಗೂ 4ನೇ ತರಗತಿ ಓದುತ್ತಿರಬೇಕು) 2024–25ನೇ ಶೈಕ್ಷಣಿಕ ಸಾಲಿಗೆ 5ನೇ ತರಗತಿಗೆ ಪ್ರವೇಶ ಪಡೆಯಲು ಅರ್ಹರಾಗಿರಬೇಕು. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ನಡೆದ ತಾಲ್ಲೂಕು ಮಟ್ಟದ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ಆಯ್ಕೆಯಾದ ಕ್ರೀಡಾಪಟುಗಳು ಹಾಗೂ ಕ್ರೀಡಾ ಶಾಲೆಗೆ ಸೇರಲು ಇಚ್ಛಿಸುವವರು ನೇರವಾಗಿ ಫೆ.27 ರಂದು ಬೆಳಗ್ಗೆ 9ಕ್ಕೆ ನಜರಾಬಾದ್‌ನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಾಮುಂಡಿ ವಿಹಾರ ಕ್ರೀಡಾಂಗಣ, ದೂ.ಸಂ: 0821–2564179 ಹಾಗೂ ಜಿಮ್ನಾಸ್ಟಿಕ್ಸ್ ತರಬೇತುದಾರ ಲೋಕೇಶ್ ಮೊ.ಸಂ: 9449175644, ರಾಮಸ್ವಾಮಿ ಮೊಸಂ: 9449300330 ಮೂಲಕ ಸಂಪರ್ಕಿಸಬಹುದು.

ಫೆ.27ಕ್ಕೆ ರೈತರಿಂದ ಗ್ರಾಮೀಣ ಬಂದ್



ಸುದ್ದಿಗೋಷ್ಠಿಯಲ್ಲಿ ಮಂಜು ಕಿರಣ್ ಮಾತನಾಡುತ್ತಿರುವುದು.

ಮೈಸೂರು,ಫೆ.24(ಜಿಎ)–ಕೇಂದ್ರ ಸರ್ಕಾರವು ಎಂ.ಎಸ್.ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಿ ಶಾಸನಬದ್ಧಗೊಳಿಸುವುದು ಹಾಗೂ ರಾಜ್ಯ ಸರ್ಕಾರವು ಕೃಷಿ ಸಾಲ ಮನ್ನಾಕ್ಕೆ ಮುಂದಾಗುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಾಮೂಹಿಕ ನಾಯಕತ್ವದಲ್ಲಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಫೆ.27ರಂದು ರಾಜ್ಯಾದ್ಯಂತ ಗ್ರಾಮೀಣ ಬಂದ್‌ಗೆ ಕರೆ ನೀಡಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ರಾಜ್ಯ ಸಂಚಾಲನಾ ಸಮಿತಿ ಸದಸ್ಯ ವಿದ್ಯಾಸಾಗರ ರಾಮೇಗೌಡ ಮಾತನಾಡಿ, ಅಂದು ಗ್ರಾಮೀಣ ಕೇಂದ್ರಗಳಲ್ಲಿ ಬೆಳಗ್ಗೆ 8ರಿಂದ ಬಂದ್ ಆರಂಭವಾಗುತ್ತದೆ. ರೈತರ ಪರಿಸ್ಥಿತಿ ಬಗ್ಗೆ ಜನರಲ್ಲಿ ಅರಿವು ಮೂಡಿಸಿ, ವ್ಯವಹಾರಿಕ ಚಟುವಟಿಕೆಗಳ ಸ್ಥಗಿತಗೊಳಿಸಿ ರೈತರೆಲ್ಲರೂ ನಗರದತ್ತ ಟ್ರ್ಯಾಕ್ಟರ್‌ಗಳ ಮೂಲಕ ಸಾಗಲಿದ್ದೇವೆ. 11 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಗೆ ತಲುಪಿ ಪ್ರತಿಭಟನೆ ಮಾಡುತ್ತೇವೆ ಎಂದರು.

ವಿವಿಧ ಬೇಡಿಕೆಗಳ ಹೊತ್ತು ದೆಹಲಿಯತ್ತ ಸಾಗುತ್ತಿರುವ ರೈತರ ಮೇಲೆ ಕೇಂದ್ರ ಸರ್ಕಾರ ನಡೆಸುತ್ತಿರುವ ದೌರ್ಜನ್ಯ ನಿಲ್ಲಬೇಕು. ಅವರ ನ್ಯಾಯಯುತ ಬೇಡಿಕೆ ಈಡೇರಬೇಕು. ಕೃಷಿ ಕಾಯ್ದೆ ಹಿಂಪಡೆಯುವಂತೆ ರೈತರು ನಡೆಸಿದ ಹೋರಾಟದ ವೇಳೆ ಕೇಂದ್ರ ನೀಡಿದ್ದ ವಾಗ್ದಾನಗಳನ್ನು ಮರೆತಿದ್ದು, ರೈತರನ್ನು ವಂಚಿಸುವ ನಡೆಯನ್ನು ಕೈ ಬಿಡಬೇಕು. ರಾಜ್ಯ ಸರ್ಕಾರವೂ ಬೆಂಬಲ ಬೆಲೆ, ಸಾಲ ಮನ್ನಾ ವಿಚಾರದಲ್ಲಿ ರೈತ ಪರವಾಗಿ ಕ್ರಮ ವಹಿಸಬೇಕು ಎಂದು ಆಗ್ರಹಿಸದರು.

ಈ ಬಾರಿಂಯು ವಿಶ್ವ ವ್ಯಾಪಾರ ಸಂಸ್ಥೆಯ ಒಪ್ಪಂದದಿಂದ ಭಾರತ ಹೊರಬರಬೇಕು. ಮುಂದುವರಿದ ದೇಶಗಳು ತಮ್ಮಲ್ಲಿನ ಕೃಷಿ ಉತ್ಪನ್ನವನ್ನು ಇಲ್ಲಿ ತಂದು ಮಾರುವ, ನಮ್ಮ ರೈತರನ್ನು ಸಂಕಷ್ಟಕ್ಕೆ ದೂಡುವ ಯೋಜನೆಗಳು ಬೇಡ ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಮಂಜುಕಿರಣ್, ಸತೀಶ್‌ರಾವ್, ಇಮ್ಮಾವು ರಘು, ಶ್ವೇತಾ ಉಪಸ್ಥಿತರಿದ್ದರು.

ಉದ್ಯಮಿ ಸ್ವೀಟ್ ಮಹೇಶ್ ಅವರಿಗೆ ಸಂಸದ ಪ್ರತಾಪ್ ಸಿಂಹರಿಂದ ಸನ್ಮಾನ



ಶುಕ್ರವಾರ ಹುಟ್ಟುಹಬ್ಬ ಆಚರಿಸಿಕೊಂಡ ಯುವ ಮುಖಂಡ ಹಾಗೂ ಹೆಸರಾಂತ ಉದ್ಯಮಿ ಸ್ವೀಟ್ ಮಹೇಶ್ ಅವರನ್ನು ಸಂಸದ ಪ್ರತಾಪ್ ಸಿಂಹ, ಎಪಿಎನ್ ಪ್ರಾಪರ್ಟಿಸ್‌ನ ನಾಗೇಶ್, ಪ್ರದೀಪ್ ಇತರರು ಅಭಿನಂದಿಸಿ, ಶುಭಾಶಯ ಕೋರಿದರು.

ನಾಳೆ, ನಾಳಿದ್ದು ಬೃಹತ್ ಉದ್ಯೋಗ ಮೇಳ

ಮೈಸೂರು,ಫೆ.24–ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಫೆ.26 ಮತ್ತು 27ರಂದು ಬೆಂಗಳೂರು ಅರಮನೆ ಮೈದಾನದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ಉದ್ಯೋಗ ಮೇಳದಲ್ಲಿ 500ಕ್ಕೂ ಹೆಚ್ಚಿನ ಪ್ರತಿಷ್ಠಿತ ಕಂಪನಿ ಅಥವಾ ಉದ್ಯಮೆ ಅಥವಾ ಉದ್ಯೋಗದಾತ ಸಂಸ್ಥೆಗಳು ಭಾಗವಹಿಸು ತ್ತಿದ್ದು, ಮೈಸೂರು ಜಿಲ್ಲೆಯಲ್ಲಿನ ವಿಕಲ ಚೇತನ ಉದ್ಯೋಗ ಆಕಾಂಕ್ಷಿಗಳು http://udyoga.skillconnect.kausha lkar.com ಲಿಂಕ್‌ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಉದ್ಯೋಗ ಮೇಳದ ಸದುಪಯೋಗ ಪಡೆದುಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ತಿಲಕ್‌ನಗರದ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು, ಹಾಗೂ ದೂ. ಸಂ. 0821–2490333 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮತ ಜಾಗೃತಿಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಚಾಲನೆ

ಮತದಾನದ ಹಕ್ಕು ಪ್ರಜೆಗಳಿಗೆ ಅಂಬೇಡ್ಕರ್ ಕೊಟ್ಟ ಶಕ್ತಿ



ಮೈಸೂರಿನ ಚಾಮುಂಡಿಪುರಂ ವೃತ್ತದ ತಲಕಾಡು ರಾಮಚಂದ್ರರಾವ್ ಪಾರ್ಕ್‌ನಲ್ಲಿ ಮತ ಜಾಗೃತಿ ಹಿನ್ನೆಲೆಯಲ್ಲಿ ಮನೆಮನೆಗೆ ಜಾಗೃತಿ ಮೂಡಿಸುವ ಭಿತ್ತಿಪತ್ರ ಹಂಚುವ ಕಾರ್ಯಕ್ರಮಕ್ಕೆ ಮಾಜಿ ಶಾಸಕ ಎಂಕೆ.ಸೋಮಶೇಖರ್ ಚಾಲನೆ ನೀಡಿದರು.

ಮೈಸೂರು,ಫೆ.24–ಲಯನ್ಸ್ ಕ್ಲಬ್ ಆಫ್ ಮೈಸೂರು, ಪರಿವರ್ತನ, ಕರುನಾಡ ರಕ್ಷಣಾ ವೇದಿಕೆ, ಬೆಟರ್ ಲೈಫ್ ಚಾರಿಟೆಬಲ್ ಟ್ರಸ್ಟ್ ಸಹಭಾಗಿತ್ವದಲ್ಲಿ ಮೈಸೂರಿನ ಚಾಮುಂಡಿಪುರಂ ವೃತ್ತದ ತಲಕಾಡು ರಾಮಚಂದ್ರರಾವ್ ಪಾರ್ಕ್‌ನಲ್ಲಿ ಮತ ಜಾಗೃತಿ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮನೆ ಮನೆಗೆ ಜಾಗೃತಿ ಮೂಡಿಸುವ ಭಿತ್ತಿಪತ್ರ ಹಂಚುವ ಕಾರ್ಯಕ್ರಮಕ್ಕೆ ಮಾಜಿ ಶಾಸಕ ಎಂಕೆ.ಸೋಮಶೇಖರ್ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಭಾರತದ ಆತ್ಮ ಸಂವಿಧಾನದಲ್ಲಿ ಅಡಗಿದೆ. ಹಾಗೆ ಸಂವಿಧಾನದ ಆತ್ಮ ಆಡಳಿತದಲ್ಲಿ ಅಡಗಿದೆ. ಆಡಳಿತದ ಆತ್ಮ ಮತದಾನದಲ್ಲಿ ಅಡಗಿದೆ. ಮತದಾನದ ಆತ್ಮ ಈ ದೇಶದ ಪ್ರತಿಯೊಬ್ಬ ಪ್ರಜೆಯ ಪ್ರಜ್ಞೆಯಲ್ಲಿ ಅಡಗಿದೆ. ಇಂತಹದೊಂದು ಮತವೆಂಬ ಅಭೂತಪೂರ್ವ ಹಕ್ಕು ಮತ್ತು ಅವಕಾಶವನ್ನು ಭಾರತೀಯ ಪ್ರಜೆ ಪಡೆದುಕೊಂಡಿದ್ದೇ ಭಾರತದ ಇತಿಹಾಸದಲ್ಲಿ ಮಹತ್ವದ ಹೆಜ್ಜೆ ಗುರುತಾಗಿದೆ.

ನಾವಿಂದು ಪ್ರಪಂಚದ ಇಬ್ಬರು ಬಹು ದೊಡ್ಡ ಪ್ರಜಾಪ್ರಭುತ್ವವಾದಿಗಳ ಮಾತುಗಳನ್ನು ನೆನಪಿಸಿಕೊಳ್ಳಲೇಬೇಕಿದೆ. ಮತದಾನ ಎಂಬುದು ಬಂದೂಕಿನ ಗುಂಡಿಗಿಂತ ಬಲಿಷ್ಠ ಮತ್ತು ಪರಿಣಾಮಕಾರಿ ಎಂಬ ಅಮೇರಿಕಾದ ಮಾಜಿ ಅಧ್ಯಕ್ಷ ಅಬ್ರಹಾಂ ಲಿಂಕನ್ ಮಾತು, ಒಬ್ಬ ವ್ಯಕ್ತಿಗೆ ಒಂದು ಮತ, ಒಂದು ಮತಕ್ಕೆ ಒಂದೇ ಮೌಲ್ಯ ಎಂಬ ಅಂಬೇಡ್ಕರ್ ಮಾತು.

ಭಾರತದಲ್ಲಿ 5 ಸಾವಿರ ವರ್ಷಗಳಿಂದ ರಾಜರ ಆಡಳಿತವಿತ್ತು. ಪ್ರಜೆಗಳನ್ನು ಆಡಳಿತ ಮಾಡುತ್ತಿದ್ದ ರಾಜ, ರಾಣಿ ಹೊಟ್ಟೆಯಿಂದ ಜನಿಸುತ್ತಿದ್ದ. ಆದರೆ ಪ್ರಜಾಪ್ರಭುತ್ವದಲ್ಲಿ ಆಡಳಿತ ಮಾಡುವವರು ಬ್ಯಾಲೆಟ್ ಬಾಕ್ಸ್‌ನಲ್ಲಿ ಹುಟ್ಟುತ್ತಾರೆ ಎಂದು ಅಂಬೇಡ್ಕರ್ ಹೇಳಿದ್ದಾರೆ. ಭಾರತದಂತಹ ಬಹುತ್ವದ ದೊಡ್ಡ ದೇಶದಲ್ಲಿ ಕೋಟ್ಯಂತರ ಮತದಾರರಿದ್ದಾರೆ. ಇಲ್ಲಿ ಸಾವಿರಾರು ಜನಜನಪ್ರತಿನಿಧಿಗಳು ಹುಟ್ಟುತ್ತಾರೆ. ಇಂದು ಪ್ರಜೆಗಳ ಆಡಳಿತದ ಪ್ರಜಾಪ್ರಭುತ್ವವಿದೆ. ಇಲ್ಲಿ ಪ್ರಜೆಗಳೇ ಪ್ರಭುಗಳು ಎಂದು ಸೋಮಶೇಖರ್ ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಹೆಚ್ಚು ಯುವ ಮತದಾರರಿದ್ದಾರೆ. ಎಲ್ಲರೂ ಕಡ್ಡಾಯವಾಗಿ ಮತ ಚಲಾಯಿಸಬೇಕಿದೆ. ಮತದಾನದ ದಿನದಲ್ಲಿ ಯಾವುದೋ ಸಬೂಬು ಹೇಳದೆ ಮತಹಬ್ಬದಲ್ಲಿ ಪಾಲ್ಗೊಳ್ಳಬೇಕು. ಆ ಮುಖೇನಾ ದೇಶದ ಸುಭದ್ರ ಆಡಳಿತಕ್ಕೆ ಎಲ್ಲರೂ ಸಾಕ್ಷಿಯಾಗಬೇಕಿದೆ. ಇಂತಹ ಒಳ್ಳೆಯ ಆಲೋಚನೆ ಇಟ್ಟುಕೊಂಡು ವಿವಿಧ ಸಂಸ್ಥೆಗಳು ಮತ ಜಾಗೃತಿ ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯ ಎಂದು ಮುಕ್ತ ಕಂಠದಿಂದ ಅಭಿನಂದಿಸಿದರು.

ಮಾಜಿ ಮಹಾಪೌರ ನಾರಾಯಣ್, ನಿರ್ಗಮಿತ ಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್, ಲಯನ್ ಡಾ.ಎನ್.ಕೃಷ್ಣೇಗೌಡ, ಮುಖಂಡರಾದ ಸಂದೀಪ್, ಕುಮಾರ್ ಕುಮ್ಮಿ, ವಸಂತ್, ಉಮಾಶಂಕರ್, ಧರ್ಮೆಂದ್ರ ಮತ್ತಿತರರು ಉಪಸ್ಥಿತರಿದ್ದರು.

ಸಿಎಂ ವಿರುದ್ಧ ಶ್ರೀನಿವಾಸ್ ಪ್ರಸಾದ್ ಹೇಳಿಕೆಗೆ ಖಂಡನೆ



ಪತ್ರಿಕಾಗೋಷ್ಠಿಯಲ್ಲಿ ಎಸ್.ರಾಜೇಶ್ ಮಾತನಾಡುತ್ತಿರುವುದು.

ಮೈಸೂರು,ಫೆ.24(ಜಿಎ)–ಸಂಸದ ವಿ.ಶ್ರೀನಿವಾಸಪ್ರಸಾದ್ ಅವರು ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ಹಾಸ್ಯಾಸ್ಪದವಾದ ಟೀಕೆ ಮಾಡುತ್ತಿದ್ದಾರೆ ಎಂದು ನಗರ ಜಿಲ್ಲಾ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್ ಖಂಡಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಪ್ರಧಾನಿ ಮೋದಿ ಸರ್ವಾಧಿಕಾರಿಯಾಗಿದ್ದು, ಸಿದ್ದರಾಮಯ್ಯ ಅವರು ಅಂಬೇಡ್ಕರ್ ಅನುಯಾಯಿಯಾಗಿದ್ದಾರೆ. ಈ ವ್ಯತ್ಯಾಸವನ್ನು ಪ್ರಸಾದ್‌ರವರು ಅರಿಯಬೇಕಾಗಿದೆ ಎಂದರು. ಅಲ್ಲದೆ, ಮುಂದಿನ ಲೋಕಸಭಾ ಚುನಾವಣೆಯಲ್ಲಿ ತಮ್ಮ ಅಳಿಯನಿಗೆ ಬಿಜೆಪಿಯ ಟಿಕೆಟ್ ದೊರಕಿಸಿ ಕೊಡಲು ಓಲೈಸುವ ಕೆಲಸ ಶ್ರೀನಿವಾಸ ಪ್ರಸಾದ್ ಮಾಡುತ್ತಿದ್ದಾರೆ ಎಂದು ದೂರಿದರು.

2023–24ನೇ ಸಾಲಿನ ಬಜೆಟ್‌ನಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಕೇಂದ್ರದಿಂದ ಆದ ಯೋಜನೆಗಳೇನು, ಮಹದೇಶ್ವರ ಬೆಟ್ಟ, ಬಿಳಿಗಿರಿ ರಂಗನಬೆಟ್ಟ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ದಕ್ಷಿಣ ಕಾಶಿ ನಂಜನಗೂಡಿಗೆ ಎಷ್ಟು ಹಣ ಬಿಡುಗಡೆ ಮಾಡಿಸಲಾಗಿದೆ ಎಂದು ಪ್ರಶ್ನಿಸಿದರು.

ದೆಹಲಿಯಲ್ಲಿ ನಮ್ಮ ತೆರಿಗೆ ನಮ್ಮ ಹಕ್ಕು ಎಂದು ಕಾಂಗ್ರೆಸ್ ನಡೆಸಿದ ಪ್ರತಿಭಟನೆಯನ್ನು ಪ್ರಸಾದ್ ವಿರೋಧಿಸಿರುವುದು ಕರ್ನಾಟಕ ಜನತೆಗೆ ಮಾಡಿದ ದ್ರೋಹವಾಗಿದೆ ಎಂದು ದೂರಿದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಸತ್ಯನಾರಾಯಣ, ರಹೀಮ್ ಪಾಷ, ಇಮ್ರಾನ್ ಪಾಷ ಉಪಸ್ಥಿತರಿದ್ದರು.

ಪರೀಕ್ಷಾ ಕೇಂದ್ರಗಳ ಸುತ್ತಲೂ ಇಂದು ನಿಷೇಧಾಜ್ಞೆ ಜಾರಿ

ಮೈಸೂರು, ಫೆ.24– ಫೆ.25ರಂದು ಮೈಸೂರು ಜಿಲ್ಲಾ ಪೊಲೀಸ್ ಘಟಕದಿಂದ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಪೊಲೀಸ್ ಕಾನ್ಸ್‌ಟೇಬಲ್ ಸಿವಿಲ್ ಹುದ್ದೆಗಳಿಗೆ ಲಿಖಿತ ಪರೀಕ್ಷೆ ನಡೆಸಲಾಗುತ್ತಿದ್ದು, ನಗರದ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಮಹಾರಾಣಿ ಸರ್ಕಾರಿ ಕಲಾ ಕಾಲೇಜು ಜೆಎಲ್‌ಬಿ ರಸ್ತೆ, ಮರಿಮಲ್ಲಪ್ಪ ಪಿಯು ಕಾಲೇಜು ಸೀತಾವಿಲಾಸ ರಸ್ತೆ, ಮಹಾರಾಜ ಪಿ.ಯು ಕಾಲೇಜು ಜೆಎಲ್‌ಬಿ ರಸ್ತೆ, ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ಸೆಂಟ್ ಫಿಲೋಮಿನ ಹತ್ತಿರ, ಗೋಪಾಲಸ್ವಾಮಿ ಶಿಶುವಿಹಾರ ಸ್ವತಂತ್ರ ಪಿ.ಯು ಕಾಲೇಜು ಮೈಸೂರು ಈ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಫೆ.25ರಂದು ಬೆಳಗ್ಗೆ 6 ಗಂಟೆಯಿಂದ ಮಧ್ಯಾಹ್ನ 3 ಗಂಟೆವರೆಗೆ ಕಲಂ 144 ರೀತ್ಯಾ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ. ಪರೀಕ್ಷಾ ದಿನದಂದು ಪರೀಕ್ಷಾ ಕೇಂದ್ರದ ಸುತ್ತಲೂ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿಗಳನ್ನು ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು. ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು. ಪರೀಕ್ಷಾ ಕೇಂದ್ರಗಳ ಸುತ್ತ ಮುತ್ತಲಿರುವ ಜೆರಾಕ್ಸ್ ಅಂಗಡಿಗಳನ್ನು ಮುಚ್ಚುವಂತೆ ಪೊಲೀಸ್ ಆಯುಕ್ತ ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಸಿದು ಬಿದ್ದು ನಿವೃತ್ತ ಎಎಸ್‌ಐ ಸಾವು




ಜಿ.ವಿ.ರಾಜು

ಮೈಸೂರು, ಫೆ.24(ಆರ್‌ಕೆ)–ಅಂಗಡಿ ಮುಂದೆ ಸ್ಕೂಟರ್ ನಿಲ್ಲಿಸುತ್ತಿದ್ದಾಗ ಕುಸಿದು ಬಿದ್ದು ನಿವೃತ್ತ ಎಎಸ್‌ಐ ಸಾವನ್ನಪ್ಪಿರುವ ಘಟನೆ ಮೈಸೂರಿನ ಹೆಬ್ಬಾಳು ಸೂರ್ಯ ಬೇಕರಿ ಸರ್ಕಲ್ ಬಳಿ ಗುರುವಾರ ಸಂಭವಿಸಿದೆ. ಹೆಬ್ಬಾಳಿನ ಬಸವನಗುಡಿ ಬಳಿಯ ನಿವಾಸಿ ಜಿ.ವಿ.ರಾಜು(60), ಗುರುವಾರ ರಾತ್ರಿ 7.50ರಲ್ಲಿ ಜ್ಯೂಸ್ ಕುಡಿಯಲೆಂದು ಸೂರ್ಯ ಬೇಕರಿ ಸರ್ಕಲ್ ಬಳಿಯ ಬೇಕರಿ ಮುಂದೆ ಸ್ಕೂಟರ್ ನಿಲ್ಲಿಸುವಾಗಲೇ ಕುಸಿದು ಬೀಳುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಸಾರ್ವಜನಿಕರು ತಕ್ಷಣ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವಾಗಲೇ ಮಾರ್ಗಮಧ್ಯೆ ರಾಜು ಸಾವನ್ನಪ್ಪಿದ್ದಾರೆ. ಪ್ರಕರಣ ದಾಖಲಿಸಿಕೊಂಡ ವಿಜಯನಗರ ಠಾಣೆ ಪೊಲೀಸರು, ಮರಣೋತ್ತರ ಪರೀಕ್ಷೆ ಬಳಿಕ ದೇಹವನ್ನು ವಾರಸುದಾರರಿಗೊಪ್ಪಿಸಿದರು.

ಶಿಕ್ಷಣಕ್ಕೆ ಮಹತ್ವವಾದ ಶಕ್ತಿ ಇದೆ

ಮಾನಸಗಂಗೋತ್ರಿ ಶಾಲೆ ಹಿರಿಯ ವಿದ್ಯಾರ್ಥಿಗಳ ಸಂಘ ಉದ್ಘಾಟಿಸಿದ ಎಂಎಲ್‌ಸಿ ಮಂಜೇಗೌಡ ಅಭಿಮತ



ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಮಂಜೇಗೌಡರನ್ನು ಸನ್ಮಾನಿಸಲಾಯಿತು.

ಮೈಸೂರು,ಫೆ.24 –ಶಿಕ್ಷಣಕ್ಕೆ ಮಹತ್ವವಾದ ಶಕ್ತಿ ಇದ್ದು, ನೀವು ನಿಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ನೀಡಿ ಸಾಧನೆಗಳ ಮೂಲಕ ಇನ್ನೊಬ್ಬರ ಹೃದಯವನ್ನು ಗೆಲ್ಲುವಂತೆ ಮಾಡಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಕರೆ ನೀಡಿದರು.

ಮಾನಸಗಂಗೋತ್ರಿಯ ಶಿಕ್ಷಣ ಸಂಸ್ಥೆ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಮಾನಸಗಂಗೋತ್ರಿ ಶಾಲೆಯ ಹಿರಿಯ ವಿದ್ಯಾರ್ಥಿಗಳ ಸಂಘವನ್ನು ಉದ್ಘಾಟಿಸಿ ಮಾತನಾಡಿದ ಅವರು ನಾನು ಬಡತನದಲ್ಲಿ ಬೆಳೆದು ಕಷ್ಟಪಟ್ಟು ಓದಿ ನಿಮ್ಮ ಮುಂದೆ ಎಂ.ಎಲ್.ಸಿ ಆಗಿ ನಿಲ್ಲಲು ಶಿಕ್ಷಣವೇ ಕಾರಣ. ಪ್ರತಿಯೊಬ್ಬ ಮನುಷ್ಯನಿಗೂ ನಾಗರಿಕತೆ ಇರಬೇಕು. ಸಮಾಜವನ್ನು ಹೇಗೆ ಬದಲಾವಣೆ ಮಾಡಬೇಕು ಎಂಬ

ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದರೆ ಅಧಿಕಾರ ಇರಬೇಕು. ಅಧಿಕಾರ ಬರಬೇಕಾದರೆ ಶಿಕ್ಷಣ ಇರಬೇಕು. ತಾಯಿ ತನ್ನ ಮಕ್ಕಳನ್ನು ಬೆಳೆಸಿ ವಿದ್ಯಾವಂತರನ್ನಾಗಿ ಮಾಡಲು ಜೀವನವನ್ನೇ ತ್ಯಾಗ ಮಾಡುತ್ತಾಳೆ. ಆ ತಾಯಿಯ ಋಣವನ್ನು ತೀರಿಸಲು ಸಾಧ್ಯವಿಲ್ಲ. ಆದ್ದರಿಂದ ಮನುಷ್ಯನ ಜೀವನದ ಉದ್ದೇಶಗಳು ಉತ್ತಮವಾಗಿರಬೇಕಾದರೆ ಹಾಗೂ ಸಮಾಜಕ್ಕೆ ಉಪಯೋಗವಾಗುವಂತಿರಬೇಕಾದರೆ ಶಿಕ್ಷಣ ಸಂಸ್ಥೆಗಳು ಬೆಳೆಯಬೇಕು. ಮೈಸೂರು ವಿವಿಯಿಂದ ಪ್ರತಿವರ್ಷ ಬರುತ್ತಿರುವ 20 ಲಕ್ಷ ಅನುದಾನವನ್ನು ಇನ್ನೂ ಒಂದು ವರ್ಷ ಮುಂದುವರೆಸಲು ಕುಲಪತಿಗಳೊಂದಿಗೆ ಮಾತನಾಡುತ್ತೇನೆ ಎಂದರು.

ಮುಂದಿನ ವರ್ಷದಿಂದ ನನ್ನ ಅನುದಾನದಲ್ಲಿ ಸಂಸ್ಥೆಗೆ ಸಹಾಯ ಮಾಡುತ್ತೇನೆ. ಸಿಎಸ್‌ಆರ್ ಫಂಡ್ ಕೇಳಲು ಹೋದಾಗ ನನ್ನನ್ನು ಕರೆಯಿರಿ. ಹಣ ಮತ್ತು ರಕ್ತ ಒಂದೇ ಕಡೆ ನಿಲ್ಲಬಾರದು ಅದು ನದಿಯಂತೆ ಹರಿಯುತ್ತಿರಬೇಕು. ಈ ಸಂಸ್ಥೆಯಲ್ಲಿ ಪ್ರಸಿದ್ಧ ವಿದ್ವಾಂಸರ ಮತ್ತು ಪತ್ರಕರ್ತರ ಮಕ್ಕಳು ಓದಿದವರಿದ್ದಾರೆ. ಹಳೆಯ ವಿದ್ಯಾರ್ಥಿಗಳು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ದೇಶ ವಿದೇಶಗಳಲ್ಲಿಯೂ ಕೆಲಸ ಮಾಡುತ್ತಿದ್ದಾರೆ. ಬಾಲ್ಯದ ನೆನಪುಗಳನ್ನು ಮೆಲುಕು ಹಾಕುವ ಸ್ನೇಹ, ಸಂಬಂಧಗಳನ್ನು ಬೆಸೆಯುವ ಈ ಹಳೇ ವಿದ್ಯಾರ್ಥಿ ಸಂಘವನ್ನು ಎಲ್ಲರೂ ಸೇರಿಕೊಂಡು ಕಟ್ಟಿ ಬೆಳೆಸಬೇಕು ಎಂದರು.

ಸಂಸ್ಥೆಯ ಗೌರವ ಅಧ್ಯಕ್ಷ ಪ್ರೊ.ಬಿ.ಕೆ. ಜಗದೀಶ್, ಮುಖ್ಯ ಶಿಕ್ಷಕರಾದ ಚಿಂದೇಗೌಡ, ಪಿ.ಆರ್.ಪದ್ಮ, ಅಧ್ಯಕ್ಷ ದಿವಾಕರ್, ಉಪಾಧ್ಯಕ್ಷ ಹರೀಶ್‌ಮೊಗಣ್ಣ, ಕಾರ್ಯದರ್ಶಿ ರಮೇಶ್, ಬಸವಯ್ಯ, ಸಾಗರ್ ಇದ್ದರು.

ಚಾಮರಾಜ ಕ್ಷೇತ್ರದಲ್ಲಿ ಕಾರ್ಯಕರ್ತರನ್ನು ಸಕ್ರಿಯಗೊಳಿಸಲು ಜೆಡಿಎಸ್ ಮುಖಂಡರ ನಿರ್ಧಾರ



ಮೈಸೂರಿನ ಜೆಡಿಎಸ್ ಕಚೇರಿಯಲ್ಲಿ ಶನಿವಾರ ಚಾಮರಾಜ ಕ್ಷೇತ್ರದ ಜೆಡಿಎಸ್ ಮುಖಂಡರ ಸಭೆ ನಡೆಯಿತು.

ಮೈಸೂರು,ಫೆ.24(ಎಂಟಿವೈ)– ಮುಂಬರುವ ಲೋಕಸಭಾ ಹಾಗೂ ಪಾಲಿಕೆ ಚುನಾವಣೆಯಲ್ಲಿ ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್ ಕಾರ್ಯಕರ್ತರನ್ನು ಸಕ್ರಿಯರಾಗಿಸಲು ಬೂತ್ ಹಾಗೂ ವಾರ್ಡ್ ಮಟ್ಟದಲ್ಲಿ ಸಂಘಟನಾ ಕಾರ್ಯಕ್ರಮ ನಡೆಸಲು ಚಾಮರಾಜ ಕ್ಷೇತ್ರದ ಜೆಡಿಎಸ್ ಘಟಕ ನಿರ್ಧರಿಸಿದೆ.

ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಜೆಡಿಎಸ್ ಕಚೇರಿಯಲ್ಲಿ ಶನಿವಾರ ನಡೆದ ಕ್ಷೇತ್ರದ ಪಕ್ಷದ ಮುಖಂಡರ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದ್ದು, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೀಡಿರುವ ಸಲಹೆ–ಸೂಚನೆಯೊಂದಿಗೆ ಕ್ಷೇತ್ರದಲ್ಲಿ ಪಕ್ಷ ಸಂಘಟನೆಗೆ ಮುಖಂಡರು ನಿರ್ಧರಿಸಿದರು.

ಚಾಮರಾಜ ಕ್ಷೇತ್ರ ಜೆಡಿಎಸ್ ಭದ್ರಕೋಟೆಯಾಗಿದೆ. ಮೈಸೂರು ಮಹಾನಗರಪಾಲಿಕೆಗೆ ಮೊದಲಿನಿಂದಲೂ ಪಕ್ಷದ ಹೆಚ್ಚಿನ ಸದಸ್ಯರು ಆಯ್ಕೆಯಾಗಿದ್ದಾರೆ. ಕೆಲ ಕಾರಣದಿಂದ ವಿಧಾನಸಭಾ ಚುನಾವಣೆಯಲ್ಲಿ ಹಿನ್ನೆಡೆಯಾಗಿರಬಹುದು. ಆದರೆ, ಕ್ಷೇತ್ರದಲ್ಲಿರುವ ನಿಷ್ಠಾವಂತ ಕಾರ್ಯಕರ್ತರು ಇಂದಿಗೂ ಪಕ್ಷದ ಮೇಲೆ ಅಪಾರ ಪ್ರೀತಿ, ಗೌರವ ಹೊಂದಿದ್ದು, ಅವರನ್ನು ಸರಿಯಾಗಿ ಬಳಸಿಕೊಳ್ಳಲು ಕಾರ್ಯಕ್ರಮ ರೂಪಿಸುವ ತೀರ್ಮಾನಕ್ಕೆ ಬರಲಾಯಿತು.

ಮುಂದಿನ ಲೋಕಸಭೆ ಚುನಾವಣೆ ಹಾಗೂ ನಗರಪಾಲಿಕೆ ಚುನಾವಣೆಯಲ್ಲಿ ಚಾಮರಾಜ ಕ್ಷೇತ್ರದಲ್ಲಿ ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆ ಮಾಡುವುದು. ಪಕ್ಷದ ಕಾರ್ಯಕರ್ತರಲ್ಲಿ ಬೇಸರ, ಮನಸ್ತಾಪ ಇದ್ದಲ್ಲಿ ಮನವೊಲಿಸುವುದು. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಯುವ ನಾಯಕ ನಿಖಿಲ್ ಕುಮಾರಸ್ವಾಮಿ, ಮೈಸೂರು ಭಾಗದ ನಾಯಕರಾದ ಜಿ.ಟಿ. ದೇವೇಗೌಡ, ಸಾ.ರಾ.ಮಹೇಶ್ ಮಾರ್ಗದರ್ಶನದಲ್ಲಿ ಪಕ್ಷ ಸಂಘಟನೆಗೆ ಕಾರ್ಯಕ್ರಮ ಆಯೋಜಿಸಲು ತೀರ್ಮಾನಿಸಲಾಯಿತು. ಸಭೆಯಲ್ಲಿ ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಚಾಮರಾಜ ಕ್ಷೇತ್ರದ ಅಧ್ಯಕ್ಷ ಮಂಜುನಾಥ ಮಾಜಿ ಮೇಯರ್ ಆರ್.ಲಿಂಗಪ್ಪ, ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಸೇರಿದಂತೆ ಇನ್ನಿತರರು ಮಾತನಾಡಿ, ಪಕ್ಷ ಸಂಘಟನೆಗೆ ಕೈಗೊಳ್ಳಬೇಕಾದ ಕ್ರಮ ಕುರಿತಂತೆ ಸಲಹೆ ನೀಡಿದರು. ಸಭೆಯಲ್ಲಿ ಮುಖಂಡರಾದ ಹೆಚ್.ಕೆ.ರಮೇಶ್, ಕೆ.ಉಮಾಶಂಕರ್, ಗಂಗಾಧರ್‌ಗೌಡ, ಫಾಲ್ಕಾನ್ ಬೋರೇಗೌಡ, ರಾಜ್ಯ ಕಾರ್ಯದರ್ಶಿ ಹೇಮಾವತಿ, ಪಾಲಿಕೆ ಮಾಜಿ ಸದಸ್ಯರಾದ ಶಿವಣ್ಣ, ರಮಣಿ, ಶ್ರೀಧರ್, ಪೈರಾಮಣ್ಣ, ವಿವಿಧ ವಾರ್ಡ್‌ಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಪಕ್ಷದ ಕಚೇರಿಯಲ್ಲಿ ಮುಖಂಡರ ಸಭೆ

ಮಾ.8ರಿಂದ ಬೇಬಿಬೆಟ್ಟದ ಜಾತ್ರಾ ಮಹೋತ್ಸವ

ಮತ ಕೇಳಿದ್ದಾರೆ, ಬೆದರಿಕೆ ಹಾಕಿಲ್ಲ...

ಮಂಡ್ಯ: ರಾಜ್ಯಸಭೆ ಚುನಾವಣೆ ಹಿನ್ನೆಲೆಯಲ್ಲಿ ಆಕಾಂಕ್ಷಿತರು ಭೇಟಿ ಮಾಡಿದ್ದು ನಿಜ. ಆದರೆ, ಯಾವುದೇ ರೀತಿಯ ಬೆದರಿಕೆ ಹಾಗೂ ಆಮಿಷ ಒಡ್ಡಿಲ್ಲ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಸ್ಪಷ್ಟಪಡಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಕಾಂಕ್ಷಿತರು ಜನಪ್ರತಿನಿಧಿಗಳನ್ನು ಭೇಟಿ ಮಾಡುವುದು ಸಹಜ. ಇದನ್ನೇ ತಪ್ಪಾಗಿ ಅರ್ಥೈಸಿಕೊಳ್ಳಬಾರದು. ಶಾಸಕ ರವಿಕುಮಾರ್ ಅವರು ಯಾವ ಅರ್ಥದಲ್ಲಿ ಹೇಳಿದ್ದಾರೆ ಗೊತ್ತಿಲ್ಲ. ನನಗಂತೂ ಯಾವುದೇ ಬೆದರಿಕೆ ಹಾಗೂ ಆಮಿಷ ಬಂದಿಲ್ಲ ಎಂದು ಸ್ಪಷ್ಟಪಡಿಸಿದರು. ಮಂಡ್ಯ ಶಾಸಕ ರವಿಕುಮಾರ್ ಅವರು ದೂರವಾಣಿ ಮೂಲಕ ನನ್ನನ್ನು ಸಂಪರ್ಕಿಸಿದ್ದರು. ಆ ವೇಳೆ ರಾಜ್ಯ ಸಭೆ ಚುನಾವಣೆ ಸಂಬಂಧ ಆಕಾಂಕ್ಷಿತರು ಭೇಟಿ ಮಾಡಿದ್ದು ನಿಜ ಎಂದು ತಿಳಿಸಿದ್ದೆ. ಆದರೆ ಅವರು ಈ ರೀತಿ ಏಕೆ ಹೇಳಿದ್ದಾರೆ ಗೊತ್ತಿಲ್ಲ ಎಂದರು.

ಕಾಂಗ್ರೆಸ್ ಅಭ್ಯರ್ಥಿಗೆ ನನ್ನ ಬೆಂಬಲ: ನನ್ನ ಗೆಲುವಿಗೆ ಕಾಂಗ್ರೆಸ್ ಪಕ್ಷ ಸಹಕಾರ ನೀಡಿದೆ. ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬೆಂಬಲ ನೀಡುವುದು ನನ್ನ ಕರ್ತವ್ಯ ಎಂದರು. ಕಳೆದ ಬಾರಿ ನಡೆದ ಲೋಕಸಭೆ ಚುನಾವಣೆಯಲ್ಲಿ ಸಂಸದೆ ಸುಮಲತಾ ಅಂಬರೀಷ್‌ಗೆ ಬೆಂಬಲ ನೀಡಿದ್ದೀರಿ, ಮುಂಬರುವ ಚುನಾವಣೆಯಲ್ಲಿ ಸರ್ವೋದಯ ಕರ್ನಾಟಕ ಪಕ್ಷದ ಬೆಂಬಲ ಯಾರಿಗೆ ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿ, ಪಕ್ಷದ ಹಿರಿಯ ಮುಖಂಡರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತೇವೆ ಎಂದರು.

ಮಂಡ್ಯ,ಫೆ.24– ತಾಲೂಕು ಆಡಳಿತ ಹಾಗೂ ತಾ.ಪಂ ಸಹಯೋಗದಲ್ಲಿ ಮಾರ್ಚ್ 8ರಿಂದ 16ವರೆಗೆ ಪಾಂಡವಪುರ ತಾಲೂಕಿನ ಬೇಬಿಬೆಟ್ಟ ಜಾತ್ರಾ ಮಹೋತ್ಸವ ನಡೆಯಲಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.8 ರಂದು ಸಂಜೆ 4 ಗಂಟೆಗೆ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಿದ್ದು, ವಿವಿಧ ಇಲಾಖೆಗಳಿಂದ ವಸ್ತು ಪ್ರದರ್ಶನ ಹಾಗೂ ರಾತ್ರಿ 7 ಗಂಟೆಗೆ ಚೋರ ಚರಣದಾಸ ಮತ್ತು ಕೃಷ್ಣೇಗೌಡನ ಆನೆ ನಾಟಕ ಪ್ರದರ್ಶನ ನಡೆಯಲಿದೆ ಎಂದರು.



ಮಂಡ್ಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಶಾಸಕ ದರ್ಶನ್ ಪುಟ್ಟಣ್ಣಯ್ಯ

ಜಾತ್ರಾ ಮಹೋತ್ಸವದ ಅಂಗವಾಗಿ ಮಾ. 13 ರಂದು ಬೆಳಿಗ್ಗೆ 9.10 ರಿಂದ 9.40 ರ ವರೆಗೆ ಸಾಮೂಹಿಕ ವಿವಾಹ ಏರ್ಪಡಿಸಲಾಗಿದ್ದು, ಅಂದು ಮಧ್ಯಾಹ್ನ 1 ಗಂಟೆಗೆ ಅನ್ನ ದಾಸೋಹವಿರುತ್ತದೆ. ವಿವಾಹವಾಗಲಿಚ್ಛಿಸುವ ಜೋಡಿಗಳು ನೋಂದಣಿ ಮಾಡಿಕೊಳ್ಳಬಹುದಾಗಿದೆ. ನೋಂದಣಿ ಮಾಡಿಕೊಂಡ ಜೋಡಿಗಳಿಗೆ ತಾಳಿ ಹಾಗೂ ವರನಿಗೆ ವಾಚ್ ನೀಡಲಾಗುವುದು. ರಾತ್ರಿ 8 ಗಂಟೆಗೆ ಹಾಸ್ಯನಟ ಮಿಮಿಕ್ರಿ ಗೋಪಿ ಮತ್ತು ಕಾಟೇರ ಕೇಶವ್ ತಂಡದಿಂದ ಹಾಸ್ಯಸಂಜೆ ಕಾರ್ಯಕ್ರಮವಿರುತ್ತದೆ ಎಂದು ತಿಳಿಸಿದರು.

ಮಾ.9 ರಂದು ಬೆಳಿಗ್ಗೆ 10 ಗಂಟೆಗೆ ಮಹಿಳಾ ಸಾಂಸ್ಕೃತಿಕ ಉತ್ಸವ ನಡೆಯಲಿದ್ದು, ಮಹಿಳಾ ಕ್ರೀಡಾಕೂಟ, ರಂಗೋಲಿ ಸ್ಪರ್ಧೆ, ಲೇಮ್ ಇನ್ ಸ್ಪೂನ್, ಮ್ಯೂಸಿಕ್ ಚೇರ್ ರಾತ್ರಿ 7 ರಿಂದ ಗಾನಸುಧೆ ಮೇಲೋಡಿಸ್ ಅವರಿಂದ ಅರ್ಕೆಸ್ಟ್ರಾ ಏರ್ಪಡಿಸಲಾಗಿದೆ ಎಂದು ವಿವರಿಸಿದರು. ಮಾ.10ರಂದು ಮಧ್ಯಾಹ್ನ 1 ಗಂಟೆಗೆ ಪುರುಷರ ಕ್ರೀಡಾಕೂಟಕ್ಕೆ ಚಾಲನೆ ನೀಡಲಿದ್ದು, ವಾಲಿಬಾಲ್ ಪಂದ್ಯಾವಳಿ ನಡೆಯಲಿದೆ. ರಾತ್ರಿ 7 ಗಂಟೆಗೆ ಗ್ರಾಮ ರಂಗ ಸಾಂಸ್ಕೃತಿಕ ವೇದಿಕೆ ಅವರಿಂದ ಸುಗಮ ಸಂಗೀತ ರಸಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ. ಮಾ.11 ರಂದು 1 ಗಂಟೆಗೆ ನಡೆಯುವ ಪುರುಷರ ಕ್ರೀಡಾಕೂಟದಲ್ಲಿ ಕಬಡ್ಡಿ ಪಂದ್ಯಾವಳಿ, ರಾತ್ರಿ 7 ಗಂಟೆಗೆ ಭರತನಾಟ್ಯ ಹಾಗೂ ರಾತ್ರಿ 8 ರಿಂದ ಪವಾಡ ರಹಸ್ಯ ಬಯಲು ಕಾರ್ಯಕ್ರಮ ನಡೆಯಲಿದೆ ಎಂದರು.

ಮಾ12 ರ ಮಧ್ಯಾಹ್ನ 1 ಗಂಟೆಗೆ ಕುಸ್ತಿ ಪಂದ್ಯಾವಳಿ ನಡೆಯಲಿದ್ದು, ರಾತ್ರಿ 8 ಗಂಟೆಗೆ ಬನ್ನಂಗಾಡಿ ಗ್ರಾಮ ಪಂಚಾಯಿತಿಯಿಂದ ಶನಿಮಹಾತ್ಮೆ ಅಥವಾ ರಾಜವಿಕ್ರಮ ಎಂಬ ಸುಂದರ ಪೌರಾಣಿಕ ನಾಟಕ ಏರ್ಪಡಿಸಲಾಗಿದೆ. 14 ರಂದು ಬೆಳಿಗ್ಗೆ 10 ಗಂಟೆಗೆ ಆರೋಗ್ಯ ಶಿಬಿರ ಉದ್ಘಾಟನೆ, ಸಂಜೆ 6.30ಕ್ಕೆ ಬ್ಯಾಡರಹಳ್ಳಿ ಶಾಲಾ ಮಕ್ಕಳಿಂದ ನಾಟಕ, 7.30 ರಿಂದ ಕ್ಯಾತನಹಳ್ಳಿ ಗುರುಕುಲ ಮಕ್ಕಳಿಂದ ಕಂಸಾಳೆ, 8 ಗಂಟೆಗೆ ಹಾಸ್ಯ ಕಲಾವಿದರಿಂದ ಚಂದ್ರಪ್ರಭ ಮತ್ತು ವಿನೋದ್ ಗೊಬ್ಬರಗಾಲ ತಂಡದಿಂದ ಹಾಸ್ಯಸಂಜೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು.

ಮಾ.15ರಂದು ರಥೋತ್ಸವ ಹಾಗೂ ಉತ್ತಮ ರಾಸುಗಳ ಆಯ್ಕೆ ಕಾರ್ಯಕ್ರಮ ರಾತ್ರಿ 8 ಗಂಟೆಗೆ ಕೇಬಲ್ ಮಂಜು ಅವರಿಂದ ಅರ್ಕೆಸ್ಟ್ರಾ ಕಾರ್ಯಕ್ರಮ ಏರ್ಪಡಿಸಲಾಗಿದೆ. 16 ರಂದು ಸಂಜೆ 4 ಗಂಟೆಗೆ ಬಹುಮಾನ ವಿತರಣೆ ಹಾಗೂ ಸಮಾರೋಪ ಸಮಾರಂಭ ನಡೆಯಲಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಚಂದ್ರಣ್ಣ, ಸರ್ವೋದಯ ಕರ್ನಾಟಕ ಪಕ್ಷದ ತಾಲೂಕು ಅಧ್ಯಕ್ಷ ದಯಾನಂದ್, ತಾಲೂಕು ಉಪಾಧ್ಯಕ್ಷ ವಿಜಯ್ ಕುಮಾರ್ ಹಾಗೂ ನಾಗರಾಜು ಗಾಣದಾಳು ಉಪಸ್ಥಿತರಿದ್ದರು.

ಟ್ರಯಲ್ ಬ್ಲಾಸ್ಟ್‌ಗೆ ನನ್ನ ವಿರೋಧವಿದೆ

ಮಂಡ್ಯ: ಕೆ.ಆರ್.ಎಸ್ ಅಣೆಕಟ್ಟೆ ವ್ಯಾಪ್ತಿಯಲ್ಲಿ ನಡೆಸಲುದ್ದೇಶಿಸಿರುವ ಟ್ರಯಲ್ ಬ್ಲಾಸ್ಟ್‌ಗೆ ನನ್ನ ಸಂಪೂರ್ಣ ವಿರೋಧವಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಡ್ಯ, ಮೈಸೂರು, ರಾಮನಗರ ಹಾಗೂ ಬೆಂಗಳೂರು ಸೇರಿದಂತೆ ಕೋಟ್ಯಾಂತರ ಜನರಿಗೆ ಕುಡಿಯುವ ನೀರೊದಗಿಸುತ್ತಿರುವ ಕೆಆರ್‌ಎಸ್ ಜಲಾಶಯ ಉಳಿಯಬೇಕು. ಟ್ರಯಲ್ ಬ್ಲಾಸ್ಟ್‌ನಿಂದ ಕೆ.ಆರ್.ಎಸ್.ಗೆ ಅಪಾಯ ಎದುರಾಗುವುದಾದರೆ ಟ್ರಯಲ್ ಬ್ಲಾಸ್ಟ್ ಬೇಡವೇ ಬೇಡ ಎಂದು ತಿಳಿಸಿದರು.

ಕೆ.ಆರ್.ಎಸ್. ಅಣೆಕಟ್ಟೆ ಸುತ್ತಮುತ್ತಲಿನ 8 ಪಂಚಾಯಿತಿಯ ಜನರು ಅಣೆಕಟ್ಟೆ ಕಟ್ಟಲು ಬಂದವರು ನಮ್ಮ ತಂದೆಯ ಕಾಲದಿಂದಲೂ ಕೈಕುಳಿ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಅವರಿಗೆ ಅವಕಾಶ ಮಾಡಿಕೊಡಿ ಎಂದು ಜಿಲ್ಲಾಡಳಿತಕ್ಕೆ ಕೇಳಿದ್ದೇನೆ. ಇಲ್ಲದಿದ್ದರೆ ಅವರಿಗೆ ಪರ್ಯಾಯವಾಗಿ ಏನಾದರೂ ಮಾಡಬೇಕಿದೆ ಎಂದರು.

ಅಕ್ರಮ ಗಣಿಗಾರಿಕೆ ವಿರುದ್ಧ ರೈತ ಸಂಘ ಈ ಹಿಂದಿನಿಂದಲೂ ಹೋರಾಟ ನಡೆಸಿಕೊಂಡು ಬಂದಿದೆ. ಕೆ.ಆರ್.ಎಸ್. ವ್ಯಾಪ್ತಿಯ 20 ಕಿ.ಮೀ. ವ್ಯಾಪ್ತಿಯಲ್ಲಿ ಬ್ಲಾಸ್ಟ್ ಮಾಡಿ ಗಣಿಗಾರಿಕೆ ಮಾಡುವುದನ್ನು ನಿಷೇಧಿಸಲಾಗಿದೆ. ಟ್ರಯಲ್ ಬ್ಲಾಸ್ಟ್ ನಂತರ ಗಣಿಗಾರಿಕೆ ನಡೆಸಬಹುದು ಎಂಬ ಆತಂಕ ಎಲ್ಲರಲ್ಲೂ ಇದೆ ಎಂದು ಹೇಳಿದರು.

ಗಣಿಗಾರಿಕೆ ಮುಖ್ಯವಲ್ಲ: ಕೆ.ಆರ್.ಎಸ್ ಅಣೆಕಟ್ಟೆ ಮುಖ್ಯ, ಗಣಿಗಾರಿಕೆ ನಡೆಸುವವರು ಅರ್ಥ ಮಾಡಿಕೊಳ್ಳಬೇಕು. ಟ್ರಯಲ್ ಬ್ಲಾಸ್ಟ್‌ನಿಂದ ನೆಗೆಟಿವ್ ವರದಿ ಬಂದರೆ ಗಣಿಗಳಿಗೆ ಕುತ್ತಿಗೆಗೆ ಬರಲಿದೆ ಎಂದರು. ಯಾರೇ ಬಂದರೂ ನಾನು ಹೆದರುವುದಿಲ್ಲ. ಕೆ.ಆರ್. ಎಸ್. ಉಳಿವಿಗೆ ಸದಾ ನನ್ನ ಬೆಂಬಲವಿರುತ್ತದೆ ಎಂದು ತಿಳಿಸಿದರು.

ಡಿಕೆಶಿ ಜತೆ ಇರುವ ಫೋಟೋ ಎರಡು ವರ್ಷ ಹಿಂದಿನದು

ಗೊಂದಲ ಸೃಷ್ಟಿಸಲು ಸಣ್ಣತನದ ರಾಜಕೀಯ: ಮಾಜಿ ಸಚಿವ ಸಿ.ಎಸ್.ಪುಟ್ಟರಾಜು



ಪುಟ್ಟರಾಜು

ಪಾಂಡವಪುರ, ಫೆ.24– ಡಿ.ಕೆ.ಶಿವಕುಮಾರ್ ಜತೆ ಇರುವ 2 ವರ್ಷದ ಹಿಂದಿನ ಫೋಟೋವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟು ಗೊಂದಲ ಸೃಷ್ಟಿಸುವ ಸಣ್ಣತನದ ರಾಜಕೀಯ ಮಾಡುತ್ತಿದ್ದಾರೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಪರೋಕ್ಷವಾಗಿ ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದಿನ ಎಚ್.ಡಿ.ಕುಮಾರಸ್ವಾಮಿ ಅವರ ಸಮ್ಮಿಶ್ರ ಸರಕಾರದಲ್ಲಿ ನಾನು ಮತ್ತು ಡಿ.ಕೆ.ಶಿವಕುಮಾರ್ ಸಚಿವರಾಗಿ ಕೆಲಸ ಮಾಡುತ್ತಿದ್ದೆವು. ಜತೆಗೆ ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಆಗಿನ ಮೈತ್ರಿ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರ ಪರವಾಗಿ ನಾನು ಮತ್ತು ಡಿಕೆಶಿ ಇಬ್ಬರು ಕೆಲಸ ಮಾಡಿದ್ದೇವೆ ಎಂದರು.

ಒಮ್ಮೆ ಆಕಸ್ಮಿಕವಾಗಿ ಏಟ್ರಿಯಾ ಹೋಟೆಲ್‌ನಲ್ಲಿ ಭೇಟಿಯಾದ ಸಂದರ್ಭದಲ್ಲಿ ಕಾರ್ಯಕರ್ತರೊಬ್ಬರು ನೀಡುತ್ತಿದ್ದ ಹೂಗುಚ್ಛ ಹಿಡಿದು ನಿಂತಿರುವ ಫೋಟೋವನ್ನು ಇದೀಗ ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವ ಮೂಲಕ ಗೊಂದಲ ಸೃಷ್ಟಿಸುವ ಕೆಲಸ ಮಾಡುತ್ತಿದ್ದಾರೆ. ಇದು ಎರಡು ವರ್ಷದ ಹಳೆಯ ಫೋಟೊ. ಸೋಲಿನ ಭೀತಿಯಿಂದಾಗಿ ಕಾಂಗ್ರೆಸ್‌ನವರು ಈ ರೀತಿಯ ಕೆಲಸ ಮಾಡುತ್ತಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಜಿಲ್ಲೆಯ ಜನತೆ ಅವರಿಗೆ ತಕ್ಕಪಾಠ ಕಲಿಸಲಿದ್ದಾರೆ ಎಂದು ಕಿಡಿಕಾರಿದರು.

ಮಂಡ್ಯದಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಯ ಗೆಲುವು ಖಚಿತ, ಶ್ರೀರಾಮನ ಆಶೀರ್ವಾದದಿಂದ ದೇಶದ ಪ್ರಧಾನಿ ನರೇಂದ್ರಮೋದಿ ಹಾಗೂ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರನ್ನು ಬೆಂಬಲಿಸಬೇಕೆಂದು ಜಿಲ್ಲೆ ಸೇರಿದಂತೆ ರಾಜ್ಯದ ಜನ ತೀರ್ಮಾನಿಸಿದ್ದಾರೆ. ರಾಜ್ಯದ 28 ಲೋಕಸಭಾ ಕ್ಷೇತ್ರದಲ್ಲೂ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಗಳ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಾಘ ಮಾಸದ ಹುಣ್ಣಿಮೆ

ಶ್ರೀ ನಿಮಿಷಾಂಭ ದೇವಸ್ಥಾನಕ್ಕೆ ಹರಿದು ಬಂದ ಭಕ್ತ ಸಾಗರ



ಶ್ರೀರಂಗಪಟ್ಟಣದ ಗಂಜಾಂನಲ್ಲಿರುವ ಶ್ರೀ ನಿಮಿಷಾಂಭ ದೇವಿಯ ದರ್ಶನಕ್ಕೆ ಆಗಮಿಸಿರುವ ಭಕ್ತರ ದಂಡು.

ಶ್ರೀರಂಗಪಟ್ಟಣ, ಫೆ.24– ಎಲ್ಲಿ ನೋಡಿದ್ರೂ ಜನವೋ ಜನ... ಪೂಜೆ ಪುನಸ್ಕಾರ... ಮಕ್ಕಳಿಂದ ಹಿಡಿದು ಹಿರಿಯರೆನ್ನದೇ ಈ ದೇವಿ ದರ್ಶನಕ್ಕೆ ಜನ ಸಾಗರವೇ ಹರಿದು ಬಂದಿದೆ. ಮಾಘ ಹುಣ್ಣಿಮೆಯ ಅಂಗವಾಗಿ ಶ್ರೀರಂಗಪಟ್ಟಣದ ಗಂಜಾಂನಲ್ಲಿರುವ ಶ್ರೀ ನಿಮಿಷಾಂಭ ದೇವಿಯ ದರ್ಶನಕ್ಕೆ ಭಕ್ತರ ದಂಡೆ ಹರಿದು ಬಂದಿದೆ.

ನಿಮಿಷಾಂಭದೇಗುಲದ ಬಳಿ ಇರುವ ಕಾವೇರಿ ನದಿಯಲ್ಲಿ ಲಕ್ಷಾಂತರ ಜನರು ಪುಣ್ಯಸ್ನಾನ ಮಾಡಿ ಪುನೀತರಾದರು. ನದಿಯಲ್ಲಿ ಸ್ನಾನ ಮಾಡಿದ ಬಳಿಕ ನಿಮಿಷಾಂಭ ದೇವಿಯ ದರ್ಶನ ಪಡೆದು, ವಿಶೇಷ ಪೂಜೆ ನೆರವೇರಿಸಿದರು. ಮಾಘ ಮಾಸದ ಹುಣ್ಣಿಮೆಯಲ್ಲಿ ಸೂರ್ಯ ಉದಯಿಸುವ ಮುನ್ನಾ ನದಿಯಲ್ಲಿ ಸ್ನಾನ ಮಾಡಿ ಶಕ್ತಿ ದೇವತೆಯ ದರ್ಶನ ಪಡೆದರೆ ಪುಣ್ಯ ಪ್ರಾಪ್ತಿಯಾಗುತ್ತದೆ ಎಂಬುದು ಇಲ್ಲಿನ ಭಕ್ತರ ನಂಬಿಕೆ. ಹೀಗಾಗಿ ಪ್ರತಿ ವರ್ಷ ಮಾಘ ಮಾಸದ ಹುಣ್ಣಿಮೆಯಂದು ಇಲ್ಲಿಗೆ ಲಕ್ಷಾಂತರ ಭಕ್ತರು ಬರುತ್ತಾರೆ. ಮಧ್ಯ ರಾತ್ರಿಯೇ ಇಲ್ಲಿಗೆ ಭಕ್ತರು ಆಗಮಿಸುತ್ತಾರೆ. ಕಾವೇರಿ ನದಿಯಲ್ಲಿ ಸ್ನಾನ ಮಾಡಿದ ಬಳಿಕ, ನದಿ ದಂಡೆಯಲ್ಲಿ ಗಂಗಾರತಿ ಮಾಡಿ ಸರತಿ ಸಾಲಿನಲ್ಲಿ ನಿಂತು ತಾಯಿ ನಿಮಿಷಾಂಭ ದೇವಿಯ ದರ್ಶನ ಪಡೆದರು.

ಇನ್ನೂ ಬಂದ ಜನರನ್ನು ರಂಜಿಸಲು ದೇವಸ್ಥಾನದ ಆಡಳಿತ ಮಂಡಳಿ ಮನರಂಜನೆ ಕಾರ್ಯಕ್ರಮಗಳು ನಡೆಸಿದವು. ಇಡೀ ರಾತ್ರಿ ಸುಗಮ ಸಂಗೀತ, ಭರತನಾಟ್ಯ, ಭಕ್ತಿಗೀತೆ, ಜಾನಪದ ಗೀತೆ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಭಕ್ತರಿಗಾಗಿ ಎಲ್ಲ ರೀತಿಯ ಮೂಲ ಸೌಕರ್ಯಗಳನ್ನು ಆಡಳಿತ ಮಂಡಳಿಯು ಅಚ್ಚುಕಟ್ಟಾಗಿ ನಿರ್ವಹಿಸಿತ್ತು. ನೆಚ್ಚಿನ ದೇವಿಯ ದರ್ಶನ ಪಡೆದು ಭಕ್ತಿಯ ಪರಕಾಷ್ಠೆಯಲ್ಲಿ ಮಿಂದೆದ್ದರು.

ಕಾರ್ಕಹಳ್ಳಿ ಡೇರಿ ಅಧ್ಯಕ್ಷರಾಗಿ ಬಾಬು ಆಯ್ಕೆ



ಭಾರತೀನಗರ: ಇಲ್ಲಿಗೆ ಸಮೀಪದ ಕಾರ್ಕಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡರ ಬೆಂಬಲಿಗರಾದ ಬಾಬು, ಉಪಾಧ್ಯಕ್ಷರಾಗಿ ಅವಿನಾಶ್ ಆಯ್ಕೆಗೊಂಡರು.

ನೂತನವಾಗಿ ಆಯ್ಕೆಗೊಂಡ ಅಧ್ಯಕ್ಷ, ಉಪಾಧ್ಯಕ್ಷರನ್ನು ಶಾಸಕ ಮಧು ಜಿ. ಮಾದೇಗೌಡ ಅವರು ಅಭಿನಂದಿಸಿ ಗೌರವಿಸಿದರು. ನಂತರ ಮಾತನಾಡಿದ ಅವರು ಸಂಘವನ್ನು ಅಭಿವೃದ್ಧಿಪಡಿಸುವಲ್ಲಿ ಕಾರ್ಯಕಾರಿ ಮಂಡಳಿ ಮುಂದಾಗಬೇಕು. ಯಾವುದೇ ರಾಜಕೀಯಕ್ಕೆ ಒಳಗಾಗಬಾರದು. ಗ್ರಾಮದ ರೈತರಿಗೆ ಸಿಗುವಂತಹ ಸೌಲಭ್ಯಗಳನ್ನು ಸಂಘದಿಂದ ಪೂರೈಸ ಬೇಕೆಂದು ಸಲಹೆ ನೀಡಿದರು. ಮುಖಂಡರಾದ ಕಾರ್ಕಹಳ್ಳಿ ಸ್ವರೂಪ್‌ಚಂದ್ರ, ಬಸಂತ್, ಬಸವರಾಜು, ಕೃಷ್ಣ, ಮಿಣಕೇಗೌಡ, ಗಿರೀಶ್, ಮೊಗಣ್ಣ ನಿರ್ದೇಶಕರಾದ ಸುರೇಶ್, ತಮ್ಮಣ್ಣ, ತಮ್ಮಯ್ಯ, ಪ್ರತಾಪ್, ಚಂದ್ರಮ್ಮಸಿದ್ದೇಗೌಡ, ಆನಂದ್, ಬೋರಮ್ಮ ಇತರರಿದ್ದರು.

ಸೈಕಲ್ ಶಾಪ್ ಕುಮಾರಣ್ಣ ನಿಧನ



ಕೆ.ಆರ್.ಪೇಟೆ, ಫೆ.24– ತಾಲೂಕಿನ ಹೊಸಹೊಳಲು ಗ್ರಾಮದ ನೇಕಾರ ಕುರುಹಿನಶೆಟ್ಟಿ ಸಮಾಜದ ಮುಖಂಡರಾದ ಸೈಕಲ್ ಶಾಪ್ ಕುಮಾರಣ್ಣ(70) ಅನಾರೋಗ್ಯದಿಂದ ನಿಧನ ಹೊಂದಿದ್ದಾರೆ.

ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು ಹಾಗೂ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಫೆ.25ರಂದು ಬೆಳಿಗ್ಗೆ 11ಗಂಟೆಗೆ ಹೊಸಹೊಳಲು ಗ್ರಾಮದ ಚಿಕ್ಕಕೆರೆಯ ಬಳಿಯಿರುವ ಸಾರ್ವಜನಿಕ ಸ್ಮಶಾನದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಮೈಸೂರಲ್ಲಿ 'ಅಪ್ಪು ನಮನ' ಸಂಗೀತ ರಸ ಸಂಜೆ





ಕರ್ನಾಟಕ ಪವರ್ ಇಂಜಿನಿಯರ್ಸ್ ಅಕಾಡೆಮಿ ವತಿಯಿಂದ ಶನಿವಾರ ಏರ್ಪಡಿಸಿದ್ದ 'ಅಪ್ಪು ನಮನ' ಮತ್ತು ಸಂಗೀತ ರಸ ಸಂಜೆ ಕಾರ್ಯಕ್ರಮದಲ್ಲಿ ಹ್ಯಾಟ್ರಿಕ್ ಹೀರೋ ಡಾ.ಶಿವರಾಜ್ ಕುಮಾರ್ ದಂಪತಿ ಸೇರಿದಂತೆ ಇತರೆ ಗಣ್ಯರು ಪುನೀತ್ ರಾಜ್‌ಕುಮಾರ್ (ಅಪ್ಪು) ಭಾವಚಿತ್ರದ ಮುಂದೆ ದೀಪ ಬೆಳಗಿಸಿ ನಮನ ಸಲ್ಲಿಸಿದರು. ಮತ್ತೊಂದು ಚಿತ್ರದಲ್ಲಿ ಶಿಲ್ಪಿ ಯೋಗಿರಾಜ್ ದಂಪತಿಯನ್ನು ಸನ್ಮಾನಿಸುತ್ತಿರುವ ದೃಶ್ಯ.

ಮೈಸೂರು, ಫೆ.24(ಎಸ್‌ಪಿಎನ್)– ಕರ್ನಾಟಕ ಪವರ್ ಇಂಜಿನಿಯರ್ಸ್ ಅಕಾಡೆಮಿ ವತಿಯಿಂದ ಮೈಸೂರು ಕಲಾಮಂದಿರ ಆವರಣದಲ್ಲಿ ಶನಿವಾರ 'ಅಪ್ಪು ನಮನ' ಮತ್ತು ಸಂಗೀತ ರಸ ಸಂಜೆ ಕಾರ್ಯಕ್ರಮ ನಡೆಯಿತು.

ಹ್ಯಾಟ್ರಿಕ್ ಹೀರೋ ಡಾ. ಶಿವರಾಜ್ ಕುಮಾರ್ ದಂಪತಿ ಸೇರಿದಂತೆ ಇತರೆ ಗಣ್ಯರು ಪುನೀತ್ ರಾಜ್‌ಕುಮಾರ್ (ಅಪ್ಪು) ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ನಮನ ಸಲ್ಲಿಸಿದರು. ನಂತರ ನಟ ಡಾ. ಶಿವರಾಜಕುಮಾರ್ ಮಾತನಾಡಿ, ಪುನೀತ್ ರಾಜ್‌ಕುಮಾರ್ ಸಣ್ಣ ವಯಸ್ಸಿನಲ್ಲೇ ಕನ್ನಡಿಗರ ಮನೆ ಮಾತಾಗಿದ್ದರು ಎಂದರು.

ಆತನ ನಟನೆಯನ್ನು ಚಿಕ್ಕ ಮಕ್ಕಳು, ಮಧ್ಯಮ ವಯಸ್ಕರು ಹಾಗೂ ಹಿರಿಯರೂ ಸಹ ಒಪ್ಪಿಕೊಂಡಿದ್ದರು. ಇಂದು ನೀವು ತೋರುತ್ತಿರುವ ಗೌರವದಿಂದಲೇ ಈ ಮಟ್ಟಕ್ಕೆ ನಾವು ಮತ್ತು ನಮ್ಮ ಕುಟುಂಬ ಬೆಳೆದಿದೆ. ಅಪ್ಪು ಕೇವಲ ನಮ್ಮ ಮನೆಯ ಮಗನಲ್ಲ. ಆತ 'ಕರ್ನಾಟಕದ ಮಗ' ಎಂದು ಬಣ್ಣಿಸಿದರು.

ಪುನೀತ್ ರಾಜ್‌ಕುಮಾರ್ ಬೌದ್ಧಿಕವಾಗಿ ಇಂದು ನಮ್ಮೊಂದಿಗಿಲ್ಲ. ಆದರೆ, ಕನ್ನಡಿಗರ ಮನೆ ಮಗವಾಗಿ, ಎಲ್ಲರ ಹೃದಯದಲ್ಲಿ ನೆಲೆಸಿದ್ದಾನೆ. ಪುನೀತ್ ನನ್ನು ಮೈಸೂರಿಗರು ನಮ್ಮವ ಅಂತಾರೆ, ಬೆಂಗಳೂರಿಗರು ನಮ್ಮ ಮನೆಯ ಮಗ ಅಂತಾರೆ. ಉತ್ತರ ಕರ್ನಾಟಕ ಮಂದಿ ನಮ್ಮ ಊರಿನವರೂ ಅಂತಾರೆ. ಒಟ್ಟಾರೆ ಪುನೀತ್ ಕನ್ನಡಿಗರ ಮಗ. ಆತ ಇಂದು ನಮ್ಮ ಜೊತೆಯಲ್ಲಿಲ್ಲ. ಈ ಪ್ರೀತಿ ನೋಡಿದರೆ ಆತ ನಮ್ಮ ಜೊತೆ ಇಂದಿಗೂ ಬದುಕಿದ್ದಾನೆ ಎಂಬ ಭಾವನೆ ಇದೆ. ಹೀಗಾಗಿ, ಆತ ನಿಜವಾದ ಅರ್ಥದಲ್ಲೂ 'ಕರ್ನಾಟಕ ರತ್ನ' ಎಂದು ಬಣ್ಣಿಸಿದರು.

ಕೆಪಿಟಿಸಿಎಲ್ ನಾಲ್ಕು ನಿಗಮಗಳ ಇಂಜಿನಿಯರ್ಸ್ ಸೇರಿ ಕರ್ನಾಟಕ ಪವರ್ ಇಂಜಿನಿಯರ್ಸ್ ಅಕಾಡೆಮಿ ಸ್ಥಾಪಿಸಿದ್ದಾರೆ. ಈ ಮೂಲಕ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಇಂಜಿನಿಯರ್ಸ್‌ಗಳು ಕುಟುಂಬ ಸಮೇತ ತೊಡಗಿರುವುದು ಹೆಮ್ಮೆಯ ಸಂಗತಿ. ಕೆಪಿಟಿಸಿಎಲ್ ಕರ್ನಾಟಕದ ಪ್ರತಿ ಮನೆಗೂ ವಿದ್ಯುತ್ ಪೂರೈಕೆ ಮಾಡುತ್ತಿದೆ. ಇದರ ಹಿಂದೆ ಇಂಜಿನಿಯರ್ಸ್ ಸೇರಿದಂತೆ ಎಲ್ಲಾ ಉದ್ಯೋಗಿಗಳ ಪರಿಶ್ರಮವಿದೆ ಎಂದರು.

ಶಿವಣ್ಣ ಮೊದಲಿಗೆ 'ಬಾನ ದಾರಿಯಲ್ಲಿ ಸೂರ್ಯ ಜಾರಿಹೋದ, ಚಂದ್ರ ಮೇಲೆ ಬಂದ, ಮಿನುಗು ತಾರೆ ಅಂದ, ನೋಡು ಎಂಥ ಚಂದ, ರಾತ್ರಿಯಾಯ್ತು ಮಲಗು ನನ್ನ ಪುಟ್ಟ ಕಂದ' ಎಂಬ ಗೀತೆಯನ್ನು ಸೊಗಸಾಗಿ ಹಾಡಿದರು. ಪ್ರೇಕ್ಷಕರ ಒತ್ತಾಯದ ಮೇರೆಗೆ ತಮ್ಮ ಅಭಿನಯದ ಮೈಲಾರಿ ಚಿತ್ರದ 'ಊರಿಂದ ಓಡಿಬಂದ ಜೋಗಿನಾ ಅಲ್ಲರಿ.. ಮೈಲಾಪುರ ಮೈಲಾರಿ' ಗೀತೆಯನ್ನು ಹಾಡುತ್ತಲೇ ಹೆಜ್ಜೆ ಹಾಕಿ ಸಭಿಕರ ಮನಗೆದ್ದರು.

ಸನ್ಮಾನ: ಈ ವೇಳೆ ಗೀತಾ ಶಿವರಾಜಕುಮಾರ್ ದಂಪತಿ, ಶಿಲ್ಪಿ ಅರುಣ್ ಯೋಗಿರಾಜ್ ದಂಪತಿ, ಅಯೋಧ್ಯೆಯ ರಾಮಮಂದಿರದ ಬಾಲರಾಮನ ಪ್ರತಿಮೆಗೆ ಕಲ್ಲುದಾನ ಮಾಡಿದ ರಾಮದಾಸ್ ಅವರನ್ನು ಸನ್ಮಾನಿಸಲಾಯಿತು. ಸಂಗೀತ ರಸ ಸಂಜೆಯಲ್ಲಿ ಗಾಯಕರಾದ ಹರ್ಷ, ಅಶ್ವಿನ್‌ಶರ್ಮ, ದಿವ್ಯಾ ರಾಘವನ್, ದಿವ್ಯಾ ರಾಮಚಂದ್ರ ಅವರು ಅಪ್ಪು ಅಭಿನಯದ ಸಿನಿಮಾಗಳು ಸೇರಿದಂತೆ ವಿವಿಧ ಚಿತ್ರಗಳ ಗೀತೆಗಳನ್ನು ಹಾಡುವ ಮೂಲಕ ಗಮನ ಸೆಳೆದರು. ಶಿಕಾರಿಪುರ ಮೆಸ್ಕಾಂನ ಕಾರ್ಯ ನಿರ್ವಾಹಕ ಇಂಜಿನಿಯರ್(ವಿದ್ಯುತ್) ಬಿ.ಆರ್.ಯೋಗಿಶ ರಚಿಸಿದ್ದ ವಿದ್ಯುತ್ ಕ್ಷೇತ್ರದ ಸುರಕ್ಷತಾ ಗೀತೆಯ ಕರಪತ್ರವನ್ನು ಬಿಡುಗಡೆಗೊಳಿಸಲಾಯಿತು. ಈ ವೇಳೆ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ, ಅಕಾಡೆಮಿಯ ಅಧ್ಯಕ್ಷ ಕೆ.ಮುನಿಗೋಪಾಲ್ ರಾಜು, ಕಾರ್ಯದರ್ಶಿ ಎಂ.ಎಚ್.ಜಗದೀಶ್, ಕಾರ್ಯಾಧ್ಯಕ್ಷ ರಾಮಾನುಜಂ, ಅಕಾಡೆಮಿಯ ಲಕ್ಷ್ಮೀಕಾಂತ್, ಶಿವಪ್ರಕಾಶ್, ಎಂ.ಎಚ್.ಜಗದೀಶ್, ಸಿ.ಧನಂಜಯ, ಎಂ.ಜಿ.ಹಾಲಸ್ವಾಮಿ, ಲಕ್ಷ್ಮೀಧರ್ ಪ್ರಭು, ಬಿ.ವಿ.ಪಾಲನೇತ್ರ, ಸಿ.ಬಸವಣ್ಣ, ಎಚ್.ಡಿ.ಚನ್ನಕೇಶವ, ಎಂ.ಸುರೇಶ್, ಟಿ.ಮಾರುತಿ, ಬಿ.ಎಲ್.ನರಸಿಂಹಮೂರ್ತಿ, ಎಂ.ಎಲ್.ರಾಜೋಜಿರಾವ್, ರಮೇಶ, ರವೀಂದ್ರ, ಪಿ.ಆರ್.ಚನ್ನ ಕೇಶವಮೂರ್ತಿ, ಎಂ.ಬಿ.ಚಂದ್ರಶೇಖರ್, ಪಿ.ಆರ್. ಅಶೋಕ್, ಸಿ.ಲೋಕನಾಥ್, ವಿ.ಎಚ್. ವೆಂಕಟೇಶಪ್ಪ, ಬಿ.ಎನ್. ಜೀತೇಂದ್ರ ಕುಮಾರ್, ಜಿ.ವಿ.ಭಲಪತಿ, ಬಿ.ಎಂ. ಶ್ರೀನಿವಾಸ, ಸಿ.ಮಲ್ಲಿಕಾರ್ಜುನ, ಎಲ್. ಕಾರ್ತಿಕ್, ಆಯಿಷಾ ಬೇಗಂ, ಶಾಹಿಕ್ ಫರೀದ್ ಜಾಗಿದಾರ್, ಎಸ್. ಪ್ರೀತಮ್, ಮಾನಸ ಪಿ.ಗೌಡ ಉಪಸ್ಥಿತರಿದ್ದರು.

ಉತ್ತರ ಪ್ರದೇಶದಲ್ಲಿ ನಾಲೆಗೆ ಟ್ರಾಕ್ಟರ್ ಪಲ್ಟಿ, ಮಕ್ಕಳು ಸೇರಿದಂತೆ 24 ಮಂದಿ ದುರ್ಮರಣ

ಲಖನೌ: ನಾಲೆಗೆ ಟ್ರಾಕ್ಟರ್ ಟ್ರಾಲಿ ಪಲ್ಟಿಯಾದ ಪರಿಣಾಮ ಮಕ್ಕಳು, ಮಹಿಳೆಯರು ಸೇರಿದಂತೆ 24 ಮಂದಿ ದುರ್ಮರಣ ಹೊಂದಿರುವ ಘಟನೆ ಉತ್ತರ ಪ್ರದೇಶದ ಕಾಸ್ಗಂಜ್ ಜಿಲ್ಲೆಯಲ್ಲಿ ಶನಿವಾರ ನಡೆದಿದೆ.

ಮಾಘ ಪೂರ್ಣಿಮೆ ಅಂಗವಾಗಿ ಗಂಗಾ ನದಿಯಲ್ಲಿ ಪವಿತ್ರ ಸ್ನಾನಕ್ಕಾಗಿ ಜೈಥಾರಾ ಮತ್ತಿತರ ಎರಡ್ಮೂರು ಗ್ರಾಮಗಳಿಂದ ಸುಮಾರು 50 ಕ್ಕೂ ಹೆಚ್ಚು ಜನರು ಟ್ರಾಕ್ಟರ್ ಟ್ರಾಲಿಯಲ್ಲಿ ಹೊರಟ್ಟಿದಾಗ ಈ ಭೀಕರ ದುರಂತ ಸಂಭವಿಸಿದೆ. ನಾಲೆಗೆ ಬಿದ್ದ ಅನೇಕರನ್ನು ರಕ್ಷಿಸಲಾಗಿದೆ. ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಕಾಸ್ಗಂಜ್ ಜಿಲ್ಲೆಯ ಗಾದಾಯಿ ಬಳಿಯ ರಿಯಾಜ್ ಗಂಜ್–ಪಾಟಿಯಾಲಿ ಲಿಂಕ್ ರಸ್ತೆಯಲ್ಲಿ ಅಪಘಾತ ಸಂಭವಿಸಿದೆ. ಹೆಚ್ಚಿನ ಪ್ರಯಾಣಿಕರಿದ್ದ ತುಂಬಿದ ಟ್ರಾಕ್ಟರ್ ಚಾಲಕನ ನಿಯಂತ್ರಣ ತಪ್ಪಿ ಅಪಘಾತ ಸಂಭವಿಸಿದೆ. ಸಂಜೆಯವರೆಗೂ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆ ಮುಂದುವರಿದಿತ್ತು ಎಂದು ಸ್ಥಳೀಯ ಮೂಲಗಳು ತಿಳಿಸಿವೆ. ಚಾಲಕ ಮತ್ತೊಂದು ವಾಹನವನ್ನು ಹಿಂದಿಕ್ಕಲು ಪ್ರಯತ್ನಿಸಿದಾಗ ಟ್ರಾಕ್ಟರ್ ಪಲ್ಟಿಯಾಗಿದ್ದು, 7–8 ಆಳದ ನಾಲೆಗೆ ಬಿದ್ದಿದೆ. ಮೃತರಲ್ಲಿ ಏಳು ಮಕ್ಕಳು, ಎಂಟು ಮಹಿಳೆಯರು ಸೇರಿದ್ದಾರೆ ಎಂದು ಅಲಿಘಡ ವಲಯದ ಇನ್ಸ್‌ಪೆಕ್ಟರ್ ಜನರಲ್ ಶಲಭ್ ಮಾಥುರ್ ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಅಪಘಾತದಲ್ಲಿ ಮೃತಪಟ್ಟವರ ಕುಟುಂಬ ಸದಸ್ಯರಿಗೆ ಸಂತಾಪ ಸೂಚಿಸಿದ್ದಾರೆ. ಮೃತರ ಕುಟುಂಬಕ್ಕೆ ತಲಾ ರೂ. 2 ಲಕ್ಷ ಹಾಗೂ ಗಾಯಾಳುಗಳಿಗೆ ರೂ. 50,000 ಪರಿಹಾರ ಘೋಷಿಸಿದ್ದಾರೆ.



ವಿವಿ, ಪದವಿ ಕಾಲೇಜು, ಐಟಿ–ಬಿಟಿ ಕಚೇರಿ ಪ್ರವೇಶ ದ್ವಾರದಲ್ಲಿ ಸಂವಿಧಾನ ಪೀಠಿಕೆ ಫಲಕ ಅಳವಡಿಸಲು ಸಿಎಂಗೆ ಮನವಿ



ದಿನೇಶ್ ಗೂಳೀಗೌಡ

ಮಂಡ್ಯ, ಫೆ.24–ಸಂವಿಧಾನದ ಪೀಠಿಕೆಯನ್ನು ವಿಶ್ವ ವಿದ್ಯಾಲಯಗಳು, ಪದವಿ ಕಾಲೇಜು, ಸರ್ಕಾರಿ ಕಚೇರಿಗಳು ಹಾಗೂ ಖಾಸಗಿ ಕೈಗಾರಿಕೆಗಳು, ಐಟಿ–ಬಿಟಿ ಕಚೇರಿಗಳ ಪ್ರವೇಶ ದ್ವಾರದಲ್ಲಿ ಅಳವಡಿಸುವಂತೆ ಆದೇಶ ಹೊರಡಿಸಬೇಕೆಂದು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರಿಗೆ ಮನವಿ ಮಾಡಿದ್ದಾರೆ.

ಸಂವಿಧಾನ ಜಾರಿಯಾಗಿ 75 ವರ್ಷವಾದರೂ ಎಲ್ಲರಿಗೂ ಎಲ್ಲಾ ಹಕ್ಕುಗಳು ದೊರೆತಿಲ್ಲ. ಹೀಗಾಗಿ ಸಂವಿಧಾನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ನಿಯಮಾವಳಿಗಳು ರೂಪುಗೊಳ್ಳಬೇಕಾಗಿದೆ ಎಂದು ಅವರು ಮನವಿ ಪತ್ರದಲ್ಲಿ ತಿಳಿಸಿದ್ದಾರೆ. ಈಗಾಗಲೇ ರಾಜ್ಯ ಸರ್ಕಾರದ ವತಿಯಿಂದ ಎಲ್ಲೆಡೆ ಸಂವಿಧಾನ ಜಾಗೃತಿ ಕಾರ್ಯಕ್ರಮಗಳು ನಡೆಯುತ್ತಿವೆ. ಶಾಲೆಗಳಲ್ಲಿ ಬೆಳಗ್ಗೆ ಸಂವಿಧಾನ ಪೀಠಿಕೆ ಓದಿಸಲಾಗುತ್ತಿದೆ. ಸಂವಿಧಾನ ಪೀಠಿಕೆ ಫಲಕ ಅಳವಡಿಸಲು ಆದೇಶವನ್ನೂ ಮಾಡಲಾಗಿದೆ. ಇದರ ಜೊತೆಗೆ ವಿವಿಗಳು, ಪದವಿ ಕಾಲೇಜುಗಳು, ಐಟಿ–ಬಿಟಿ ಕಚೇರಿ ಗಳು, ಸರ್ಕಾರಿ ಕಚೇರಿಗಳು ಹಾಗೂ ಕೈಗಾರಿಕೆಗಳ ಪ್ರವೇಶ ದ್ವಾರದಲ್ಲಿ ಸಂವಿಧಾನ ಪೀಠಿಕೆ ಫಲಕ ಅಳವಡಿಸಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

'ದೆಹಲಿ ಚಲೋ' ಹೋರಾಟದಲ್ಲಿ ಮಡಿದ ರೈತರಿಗೆ ಮೈಸೂರಲ್ಲಿ ಶ್ರದ್ಧಾಂಜಲಿ



ದೆಹಲಿ ಚಲೋ ಹೋರಾಟದಲ್ಲಿ ಮಡಿದ ರೈತರಿಗೆ ಮೈಸೂರಿನಲ್ಲಿ ರೈತ ಮುಖಂಡರು ಶನಿವಾರ ಶ್ರದ್ಧಾಂಜಲಿ ಸಲ್ಲಿಸಿದರು.

ಮೈಸೂರು, ಫೆ.24(ಎಸ್‌ಬಿಡಿ)– 'ದೆಹಲಿ ಚಲೋ' ಹೋರಾಟದ ಸಂದರ್ಭದಲ್ಲಿ ಮೃತಪಟ್ಟ ರೈತರಿಗೆ ಮೈಸೂರಿನಲ್ಲಿ ಶನಿವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು ನ್ಯಾಯಾಲಯ ಮುಂಭಾಗದ ಮಹಾತ್ಮ ಗಾಂಧಿ ಪುತ್ಥಳಿ ಬಳಿ ರಾಜ್ಯ ರೈತ ಸಂಘಗಳ ಒಕ್ಕೂಟ ಮತ್ತು ರಾಜ್ಯ ಕಬ್ಬು ಬೆಳೆಗಾರರ ಸಂಘದ ಮೈಸೂರು ಜಿಲ್ಲಾ ಸಮಿತಿ ಸದಸ್ಯರು ಮೇಣದ ಬತ್ತಿ ಬೆಳಗಿಸುವ ಮೂಲಕ ರೈತ ಹೋರಾಟದಲ್ಲಿ ಜೀವದಾನ ಮಾಡಿದವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ರೈತ ಪರವಾದ ದೆಹಲಿ ಚಲೋ ಹೋರಾಟವನ್ನು ಹತ್ತಿಕ್ಕಲು ಕೇಂದ್ರ ಸರ್ಕಾರ ಪೊಲೀಸ್ ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಂಡು ಗೋಲಿಬಾರ್ ನಡೆಸುವ ಮೂಲಕ ರೈತರ ಸಾವಿಗೆ ಕಾರಣವಾಗಿದೆ. ಗೋಲಿಬಾರ್‌ನಲ್ಲಿ ಪ್ರಾಣ ಕಳೆದುಕೊಂಡ ಯುವ ರೈತನ ಕುಟುಂಬಕ್ಕೆ ಪಂಜಾಬ್ ಸರ್ಕಾರ ಒಂದು ಕೋಟಿ ರೂ. ಪರಿಹಾರ ನೀಡಿ, ಕುಟುಂಬದ ಸದಸ್ಯರೊಬ್ಬರಿಗೆ ಉದ್ಯೋಗದ ಭರವಸೆ ನೀಡಿದೆ. ಆದರೆ ಗೋಲಿಬಾರ್‌ಗೆ ಆದೇಶ ನೀಡಿದ ಪೊಲೀಸ್ ಅಧಿಕಾರಿ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಬೇಕು ಎಂದು ರೈತ ಮುಖಂಡರು ಆಗ್ರಹಿಸಿದರು. ರೈತರ ಹೋರಾಟವನ್ನು ನಿರ್ಲಕ್ಷಿಸಿದರೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸರಿಯಾದ ಉತ್ತರ ನೀಡಲಾಗುವುದು. ಫೆ.26ರಂದು ರಾಜ್ಯಾದ್ಯಂತ ಸಂಸದರ ಮನೆ ಹಾಗೂ ಕಚೇರಿಗಳ ಮುಂದೆ ಹೋರಾಟ ನಡೆಸಿ, ಅವರನ್ನು ನಿದ್ರಾವಸ್ಥೆಯಿಂದ ಎಚ್ಚರಗೊಳಿಸಿ ರೈತ ಹೋರಾಟ ಬೆಂಬಲಿಸಲು ಒತ್ತಾಯಿಸಲಾಗುವುದು ಎಂದು ತಿಳಿಸಿದರು. ಈ ವೇಳೆ ಒಕ್ಕೂಟದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ಕಿರಗಸೂರು ಶಂಕರ್, ಜಿಲ್ಲಾ ಉಪಾಧ್ಯಕ್ಷ ಮಾರ್ಬಳ್ಳಿ ನೀಲಕಂಠಪ್ಪ, ಬಿ.ಪಿ.ಪರಶಿವಮೂರ್ತಿ, ತಾಲೂಕು ಅಧ್ಯಕ್ಷ ಲಕ್ಷ್ಮಿಪುರ ವೆಂಕಟೇಶ್, ಮುಖಂಡರಾದ ವರಕೋಡು ನಾಗೇಶ್, ವಾಜಮಂಗಲ ಮಹಾದೇವ, ಕಾಟೂರು ನಾಗೇಶ್, ಕೂಡನಹಳ್ಳಿ ಸೋಮಣ್ಣ, ಕುಂತನಳ್ಳಿ ಕುಳ್ಳೇಗೌಡ, ಸಾತಗಳ್ಳಿ ಬಸವರಾಜು, ಆದಿಬೆಟ್ಟಳ್ಳಿ ಕುಮಾರ್, ಕೇಬಲ್ ರವಿ, ಯಾಕನೂರು ಮಲ್ಲೇಶ್, ಚಂದ್ರು, ಬರಡನಪುರ ಮಹಾದೇವಸ್ವಾಮಿ ಮತ್ತಿತರರಿದ್ದರು.

ಮೈಸೂರು ಮಿತ್ರ

ಪದ್ಮಶ್ರೀ ಪುರಸ್ಕೃತ ಡಾ.ಸಿ.ಎನ್.ಮಂಜುನಾಥ್‌ರಿಗೆ ಧನ್ಯವಾದ ಧನ್ವಂತರು ಅಭಿನಂದನಾ ಸಮಾರಂಭ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಸತೀಶ್‌ಗೌಡ ಬೀಡನಹಳ್ಳಿ ಮಾತನಾಡಿದರು.

ಮೈಸೂರು, ಫೆ.24(ಜಿಎ)–ಜಯದೇವ ಹೃದ್ರೋಗ ಆಸ್ಪತ್ರೆಯ ಕೀರ್ತಿಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದು ಪದ್ಮಶ್ರೀ ಪುರಸ್ಕೃತ ಡಾ.ಸಿ.ಎನ್.ಮಂಜುನಾಥ್ ಅವರಿಗೆ 'ಧನ್ಯವಾದ ಧನ್ವಂತರು' ಅಭಿನಂದನಾ ಸಮಾರಂಭವನ್ನು ಫೆ.26ರ ಸಂಜೆ 5 ಗಂಟೆಗೆ ನಗರದ ಕಲಾ ಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ನಮ್ಮೂರು ನಮ್ಮೋರು ಸಂಸ್ಥೆಯ ಅಧ್ಯಕ್ಷ ಸತೀಶ್ ಗೌಡ ಬೀಡನಹಳ್ಳಿ ತಿಳಿಸಿದರು.



ಡಾ.ಸಿ.ಎನ್.ಮಂಜುನಾಥ್

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಪಬ್ಲಿಕ್ ಟಿವಿ ಮುಖ್ಯಸ್ಥ ಎಚ್.ಆರ್. ರಂಗನಾಥ್ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ. ಸಮಾರಂಭದಲ್ಲಿ ಡಾ.ಸಿ.ಎನ್. ಮಂಜುನಾಥ್ ಹಾಗೂ ಅನುಸೂಯ ಮಂಜುನಾಥ್ ಅವರನ್ನು ಅಭಿನಂದಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಎನ್.ಆರ್.ಮಂಜುನಾಥ್, ರವಿ ಕುಮಾರ್, ಎ.ರವಿ, ಚೇತನ್, ರಾಜ್ ಕುಮಾರ್ ಉಪಸ್ಥಿತರಿದ್ದರು.

ಇಂದು ನೂಪುರೋತ್ಸವ




ಮೈಸೂರು, ಫೆ. 24– ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗ ಮಂದಿರದಲ್ಲಿ ನಾಳೆ (ಫೆ.25) ಸಂಜೆ 4.30 ಗಂಟೆಗೆ ಕು. ತನಿಷಾಳ 'ನೂಪುರೋತ್ಸವ' ಭರತನಾಟ್ಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಇದೇ ವೇಳೆ ನವದೆಹಲಿಯಲ್ಲಿ ನಡೆದ ರಿಪಬ್ಲಿಕ್ ಡೇ ಕಾರ್ಯಕ್ರಮದಲ್ಲಿ 13 ಕರ್ನಾಟಕ ಬೆಟಾಲಿಯನ್ ಪ್ರತಿನಿಧಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಂದ ಉಪವಿಜೇತ ಪ್ರಶಸ್ತಿಯನ್ನು ಸ್ವೀಕರಿಸಿದ್ದಕ್ಕಾಗಿ ಜೂನಿಯರ್ ಅಂಡರ್ ಆಫೀಸರ್ ಕು.ತನ್ಮಯಿಗೆ ಅಭಿನಂದನಾ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀ ಕ್ಷೇತ್ರದ ಶ್ರೀ ದೇಶಿಕೇಂದ್ರ ಸ್ವಾಮೀಜಿ, ಸಂಸದ ಪ್ರತಾಪ ಸಿಂಹ, ಏಕತ್ವಂ ನ ನಮಿತ ದಾಸಾಜಿ, ಪ್ರಮತಿ ಎಜುಕೇಷನಲ್ ಇನ್ಸ್‌ಟಿಟ್ಯೂಷನ್‌ನ ಕಾರ್ಯದರ್ಶಿ ಹೆಚ್.ವಿ.ರಾಜೀವ್, ಪ್ರಮತಿ ಎಜುಕೇಷನಲ್ ಇನ್ಸ್‌ಟಿಟ್ಯೂಷನ್‌ನ ಎಸ್.ಪಣಿರಾಜ್, ಡಿ.ಎ.ವಿ. ಪಬ್ಲಿಕ್ ಶಾಲೆಯ ಸಿಇಓ ಶ್ರೀಮತಿ ಜಯಶ್ರೀ ಸಚ್ಚಿದಾನಂದ, ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ವಸತಿ ಶಾಲೆಯ ಪ್ರಾಂಶುಪಾಲರಾದ ಲೆಫ್ಟಿನೆಂಟ್ ಕರ್ನಲ್ ಖತ್ರಿ ಅವರು ಉಪಸ್ಥಿತರಿರುವರು.



ಬಿಜೆಪಿ ಮುಖಂಡ ಎಸ್.ಜಯಪ್ರಕಾಶ ಅವರು ಅಯೋಧ್ಯೆಯಿಂದ ಆಗಮಿಸಿದ ರಾಮ ಭಕ್ತರನ್ನು ರೈಲುನಿಲ್ದಾಣದಲ್ಲಿ ಸ್ವಾಗತಿಸಿದರು.

ಮಹಾಜನ ಕಾಲೇಜಿಗೆ ಪುರುಷರ ಕುಸ್ತಿ ಸಮಗ್ರ ಪ್ರಶಸ್ತಿ



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಮೈಸೂರು ವತಿಯಿಂದ ಆಯೋಜಿಸಿದ್ದ, ಮೈಸೂರು ವಿವಿ ಅಂತರ ಕಾಲೇಜು ಪುರುಷರ ಕುಸ್ತಿ ಪಂದ್ಯಾವಳಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು 2023–24ನೇ ಸಾಲಿನ ಪುರುಷರ ಕುಸ್ತಿ ಸಮಗ್ರ ತಂಡ ಪ್ರಶಸ್ತಿ ಪಡೆದುಕೊಂಡಿದೆ. ಚಿತ್ರದಲ್ಲಿ (ಎಡದಿಂದ ಬಲಕ್ಕೆ ಕುಳಿತಿರುವವರು): ಪಿ.ಎಸ್.ಮಧುಸೂಧನ, ದೈಹಿಕ ಶಿಕ್ಷಣ ನಿರ್ದೇಶಕರು, ಡಾ.ಬಿ.ಆರ್.ಜಯಕುಮಾರಿ, ಪ್ರಾಂಶುಪಾಲರು, ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ, ಡಾ.ಎಸ್.ಆರ್.ರಮೇಶ್, ಸಿಇಓ, ಡಾ.ಭಾಸ್ಕರ್, ದೈಹಿಕ ಶಿಕ್ಷಣ ನಿರ್ದೇಶಕರು. (ನಿಂತಿರುವವರು): ಸಚಿನ್, ಲಾಲು ಪ್ರಸಾದ್, ಮಂಚಣ್ಣ, ಡಿ.ಮೋಹನ್‌ಕುಮಾರ್ ಅವರನ್ನು ಕಾಣಬಹುದು.

ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಹಾಹಾಕಾರದ ಆತಂಕ

ಮೈಸೂರಲ್ಲಿ ಖಾಸಗಿ ಬೋರ್‌ವೆಲ್‌ಗಳಿಂದ ನೀರು ಸರಬರಾಜಿಗೆ ನಿರ್ಧಾರ

● ಬಾಪುಲಿಂಗರಾಜ್ ಅರಸ್



- ಮೈಸೂರಿನ ಸಾವಿರ ಖಾಸಗಿ ಬೋರ್‌ವೆಲ್ ಗುರುತು
- ಖಾಸಗಿ ಬೋರ್‌ವೆಲ್ ಮಾಲೀಕರ ಜೊತೆ ಒಪ್ಪಂದ
- ಇಂತಹ ಬೋರೆವೆಲ್‌ಗಳಿಂದ ನೀರು ಪಡೆಯಲು ಹಣ ಸಂದಾಯ
- 5 ಹೆಚ್‌ಪಿ ಪ್ಯಾನಲ್ ಬೋರ್ಡ್, ಕಾಲಂ ಪೈಪ್ ಅಳವಡಿಕೆ
- ನಗರಪಾಲಿಕೆಯಿಂದ ಒಂದೂವರೆ ಕೋಟಿ ರೂ. ವೆಚ್ಚ

ಮೈಸೂರು, ಫೆ.24–ಕೃಷ್ಣರಾಜಸಾಗರ ಹಾಗೂ ಕಬಿನಿ ಜಲಾಶಯ ಬರಿದಾಗುತ್ತಿದ್ದು, ಮೈಸೂರಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗುವ ಆತಂಕ ಎದುರಾಗಿದೆ.



ಈ ಹಿನ್ನೆಲೆಯಲ್ಲಿ ಮೈಸೂರು ನಗರದಲ್ಲಿರುವ ಸಾವಿರ ಖಾಸಗಿ ಬೋರ್‌ವೆಲ್‌ಗಳಿಂದ ನೀರು ಸರಬರಾಜು ಮಾಡಲು ಮೈಸೂರು ನಗರಪಾಲಿಕೆ ಯೋಜನೆ ರೂಪಿಸಿದೆ.

ಸಮರ್ಪಕ ಮಳೆಯಾಗದೆ ಬರಗಾಲ ಆವರಿಸಿ ಬೆಳೆ ಹಾಗೂ ಕುಡಿಯುವ ನೀರಿಗೆ ಸಾರ್ವಜನಿಕರು ಸಂಕಷ್ಟ ಪಡುವ ಪರಿಸ್ಥಿತಿ ಎದುರಾಗಿದೆ.

ಕೆಆರ್‌ಎಸ್, ಕಬಿನಿ ಸೇರಿದಂತೆ ಕಾವೇರಿ ಜಲಾಯನ ಪ್ರದೇಶದ ಅಣೆಕಟ್ಟಿನಲ್ಲಿದ್ದ ಅಷ್ಟೋ ಇಷ್ಟೋ ನೀರು ಕೂಡ ತಮಿಳುನಾಡು ಸೇರಿದೆ.

ಕೆಆರ್‌ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ 90.63 ಅಡಿಗಳಾಗಿದೆ. ಜಲಾಶಯಕ್ಕೆ ಕೇವಲ 350 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, 756 ಕ್ಯೂಸೆಕ್ ನೀರನ್ನು ಜಲಾಶಯದಿಂದ ಹೊರಗೆ ಬಿಡಲಾಗುತ್ತಿದೆ.

ಇನ್ನು ಕಬಿನಿ ಜಲಾಶಯದ ಗರಿಷ್ಠ ಮಟ್ಟ 2,284 ಅಡಿಗಳಾಗಿದ್ದು, ಇಂದಿನ ಮಟ್ಟ 2,270 ಅಡಿಗಳಾಗಿದೆ. ಜಲಾಶಯಕ್ಕೆ ಕೇವಲ 53 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 500 ಕ್ಯೂಸೆಕ್ ನೀರು ಹೊರಗೆ ಬಿಡಲಾಗುತ್ತಿದೆ. ಒಟ್ಟಾರೆ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಲ್ಲಿರುವ ನೀರಿನಲ್ಲಿ



ಬೆಂಗಳೂರು, ಮೈಸೂರು ಹಾಗೂ ಗ್ರಾಮೀಣ ಪ್ರದೇಶಕ್ಕೆ ಬಳಕೆ ಮಾಡಿಕೊಳ್ಳ ಬೇಕಾಗುತ್ತದೆ. ಈ ನೀರು ಒಂದೆರಡು ತಿಂಗಳಿಗೆ ಮಾತ್ರ ಸಾಕಾಗುತ್ತದೆ.

ಈ ಮಧ್ಯೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತೆ ತಮಿಳುನಾಡಿಗೆ ನೀರು ಬಿಡುವಂತೆ ಆದೇಶ ಮಾಡಿದರೆ ಕುಡಿಯುವ ನೀರಿಗೆ ಭಾರೀ ಸಂಕಷ್ಟ ಎದುರಾಗುತ್ತದೆ. ಈ ಹಿನ್ನೆಲೆಯಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗದಂತೆ ಮೈಸೂರು ನಗರಪಾಲಿಕೆ ಹಲವು ಮುಂಜಾಗ್ರತಾ ಕ್ರಮ ಕೈಗೊಳ್ಳುತ್ತಿದೆ.

ಮೈಸೂರು ನಗರದಲ್ಲಿರುವ ಖಾಸಗಿ ಬೋರ್‌ವೆಲ್‌ಗಳನ್ನು ಬಳಸಿಕೊಂಡು ನೀರು ಸರಬರಾಜು ಮಾಡಲು ನಗರ ಪಾಲಿಕೆ ಯೋಜನೆ ರೂಪಿಸಿದೆ. ಈ ಸಂಬಂಧ ಮೈಸೂರು ನಗರದಲ್ಲಿ ಸಾವಿರ ಬೋರ್‌ವೆಲ್‌ಗಳನ್ನು ಗುರುತಿಸಲಾಗಿದೆ. ಈ ಬೋರ್‌ವೆಲ್‌ಗಳಿಂದ ನೀರು ಪಡೆಯಲು ಜಿಲ್ಲಾಡಳಿತದ ಒಪ್ಪಿಗೆ ಕೂಡ ಪಡೆಯಲಾಗಿದೆ.

ಖಾಸಗಿ ಬೋರ್‌ವೆಲ್ ಕೊಟ್ಟವರಿಗೆ ಹಣ

ಖಾಸಗಿ ಬೋರ್‌ವೆಲ್‌ಗಳಿಂದ ನೀರು ಸರಬರಾಜು ಮಾಡಲು ಈಗಾಗಲೇ ಯೋಜನೆ ರೂಪಿಸಲಾಗಿದೆ. ಈ ಸಂಬಂಧ ಖಾಸಗಿ ಬೋರ್‌ವೆಲ್ ಮಾಲೀಕರು ಹಾಗೂ ನಗರಪಾಲಿಕೆ ನಡುವೆ ಒಪ್ಪಂದ ಮಾಡಿಕೊಳ್ಳಲಾಗುವುದು. ಒಪ್ಪಂದದಂತೆ ಜಿಲ್ಲಾಡಳಿತ ನಿಗದಿಪಡಿಸುವ ಹಣವನ್ನು ಖಾಸಗಿ ಬೋರ್‌ವೆಲ್ ಮಾಲೀಕರಿಗೆ ನೀಡಲಾಗುವುದು.

ಖಾಸಗಿ ಬೋರ್‌ವೆಲ್ ಮಾಲೀಕರು ಪ್ರತ್ಯೇಕ ಮೋಟಾರ್ ಪಂಪ್ ಅಳವಡಿಸಿಕೊಂಡಿರುತ್ತಾರೆ. ಇದರಿಂದ ನಗರ ಪಾಲಿಕೆ ವತಿಯಿಂದ ಒಪ್ಪಂದ ಮಾಡಿಕೊಂಡು ಅಂತಹ ಬೋರ್‌ವೆಲ್‌ಗಳಿಗೆ 5 ಹೆಚ್‌ಪಿ ಪ್ಯಾನಲ್ ಬೋರ್ಡ್ ಹಾಗೂ ಕಾಲಂ ಪೈಪ್ ಅಳವಡಿಸಲಾಗುವುದು. ನೀರು ಸಮರ್ಪಕವಾಗಿ ದೊರೆಯುವ ಮೇಲ್ಭಾಗದ ಪ್ರದೇಶಗಳಲ್ಲಿ ಬೋರ್‌ವೆಲ್‌ಗಳನ್ನು ಮೊದಲ ಹಂತದಲ್ಲಿ ಆಯ್ಕೆ ಮಾಡಿಕೊಳ್ಳಲಾಗುವುದು. ಈಗ ಆರಂಭಿಕವಾಗಿ 100 ಬೋರ್‌ವೆಲ್‌ಗಳಿಗೆ ಮಾತ್ರ 5 ಹೆಚ್‌ಪಿ ಪ್ಯಾನಲ್ ಬೋರ್ಡ್ ಹಾಗೂ ಕಾಲಂ ಪೈಪ್ ಅಳವಡಿಸಲಾಗುವುದು. ಇದಕ್ಕಾಗಿ ಸುಮಾರು ಒಂದೂವರೆ ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತಿದೆ. ತರುವಾಯ ಉಳಿದ ಖಾಸಗಿ ಬೋರ್‌ವೆಲ್‌ಗಳಲ್ಲಿ ಹಂತಹಂತವಾಗಿ ಪ್ಯಾನಲ್ ಬೋರ್ಡ್ ಹಾಗೂ ಕಾಲಂ ಪೈಪ್ ಅಳವಡಿಸಿ ನೀರು ಪಡೆಯಲಾಗುವುದು. ಇಂತಹ ಮುಂಜಾಗ್ರತಾ ಕ್ರಮಗಳಿಂದ ಮೈಸೂರು ನಗರದಲ್ಲಿ ಕುಡಿಯುವ ನೀರಿನ ಹಾಹಾಕಾರ ತಪ್ಪಿಸಲಾಗುವುದು. ಒಂದು ವೇಳೆ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯ ಬರಿದಾಗಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗುವ ಪರಿಸ್ಥಿತಿ ಬಂದರೆ ದಿನ ಬಿಟ್ಟು ದಿನ ಕುಡಿಯುವ ನೀರು ಸರಬರಾಜು ಮಾಡಲಾಗುವುದು. ಒಂದು ದಿನ ನಗರದ ಒಳಗಿನ ಪ್ರದೇಶಕ್ಕೆ ನೀರು ಕೊಟ್ಟರೆ, ಮತ್ತೊಂದು ದಿನ ರಿಂಗ್ ರಸ್ತೆ ಹೊರಗಿರುವ ಹೊಸ ಬಡಾವಣೆಗಳಿಗೆ ನೀರು ಸರಬರಾಜು ಮಾಡಲಾಗುವುದು. ಹೀಗೆ ದಿನ ಬಿಟ್ಟು ದಿನ ನೀರು ಬಿಡುವ ನಿರ್ವಹಣಾ ವ್ಯವಸ್ಥೆ ಮೂಲಕ ಕುಡಿಯುವ ನೀರಿನ ಬವಣೆ ತಪ್ಪಿಸಲಾಗುವುದು. ಈಗ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಿಂದ ಮತ್ತೆ ತಮಿಳುನಾಡಿಗೆ ನೀರು ಬಿಟ್ಟರೆ ಮತ್ತಷ್ಟು ಕಷ್ಟ ಎದುರಾಗುತ್ತದೆ. ಈ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಪರ್ಯಾಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

–ಮುಸ್ತಾಫ, ಎಕ್ಸಿಕ್ಯೂಟಿವ್ ಇಂಜಿನಿಯರ್, ವಾಣಿ ವಿಲಾಸ ವಾಟರ್ ವರ್ಕ್ಸ್

ದಲಿತರಿಗೆ ಮೀಸಲಿಟ್ಟ ಹಣ ಗ್ಯಾರಂಟಿಗೆ ಬಳಕೆಗೆ ಖಂಡನೆ

ಕೂಡಲೇ ಹಣ ವಾಪಸ್ ನೀಡದಿದ್ದರೆ ಪ್ರತಿಭಟನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಜೆ.ಸಿ.ವೆಂಕಟರಮಣಪ್ಪ ಮಾತನಾಡುತ್ತಿರುವುದು.

ಮೈಸೂರು, ಫೆ.24(ಜಿಎ)– ರಾಜ್ಯ ಸರ್ಕಾರ ಸಂವಿಧಾನ ಜಾಗೃತಿ ಜಾಥಾ ಮೂಲಕ ಅರಿವು ಮೂಡಿಸುತ್ತಿರುವುದು ಸ್ವಾಗತಾರ್ಹ. ಆದರೆ ದಲಿತರಿಗಾಗಿ ಬಜೆಟ್‌ನಲ್ಲಿ ಮೀಸಲಿಟ್ಟಿದ್ದ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿರುವುದು ಖಂಡನಾರ್ಹ ಎಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಜೆ.ಸಿ. ವೆಂಕಟರಮಣಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2023–24ರ ಸಾಲಿನಲ್ಲಿ ದಲಿತರಿಗೆ ಬಳಸಬೇಕಾಗಿದ್ದ ಹಣದಲ್ಲಿನ 11 ಸಾವಿರ ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಲಾಗಿದೆ. ಹೀಗಾಗಿ ಇದನ್ನು ಕೂಡಲೇ ಹಿಂದಿರುಗಿಸಬೇಕು. ಇನ್ನು, ನೂತನ ಬಜೆಟ್‌ನಲ್ಲಿ ಮೀಸಲಿರಿಸಿರುವ ಹಣವನ್ನೂ ಗ್ಯಾರಂಟಿ ಯೋಜನೆಗಳಿಗೆ ಬಳಸುವ ಶಂಕೆಯಿದೆ. ಆದ್ದರಿಂದ ಈ ರೀತಿ ಮಾಡುವುದಿಲ್ಲ ಎಂದು ಅಧಿಕೃತವಾಗಿ ಘೋಷಿಸಬೇಕು. ಜೊತೆಗೆ ಈ ಹಿಂದೆ ಬಳಸಿಕೊಂಡ ಹಣವನ್ನು ಹಂತ ಹಂತವಾಗಿ ಸಮಾಜ ಕಲ್ಯಾಣ ಇಲಾಖೆಗೆ ವಾಪಸು ಮಾಡಬೇಕು. ಇಲ್ಲದಿದ್ದಲ್ಲಿ ಉಗ್ರ ಹೋರಾಟ ನಡೆಸಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಕಂದೇಗಾಲ ಶಿವಣ್ಣ, ಅನುಷಾ, ಸುರೇಶ್, ಶಿವಮಾದು, ಶಿವನಂಜು ಉಪಸ್ಥಿತರಿದ್ದರು.



ಮೈಸೂರಿನ ಉದ್ಯಮಿ ಹಾಗೂ ಸಮಾಜ ಸೇವಕ ಸ್ವೀಟ್ ಮಹೇಶ್ ಅವರ ಹುಟ್ಟುಹಬ್ಬದ ಅಂಗವಾಗಿ ವಿವಿಧ ಸಂಘಟನೆಯ ಮುಖಂಡರು ಅವರನ್ನು ಅಭಿನಂದಿಸಿ, ಶುಭಾಶಯ ಕೋರಿದರು. ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಪ್ರದೀಪ್, ನಜರ್‌ಬಾದ್ ನಟರಾಜ್, ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಜಿ.ರಾಘವೇಂದ್ರ, ವಿಕ್ರಂ ಅಯ್ಯಂಗಾರ್, ಅನಿಲ್ ಕುಮಾರ್, ಅಜಯ್ ಶಾಸ್ತ್ರಿ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಎಸ್.ಎನ್.ರಾಜೇಶ್, ವರುಣಾ ಮಹದೇವ್, ಮಿರ್ಲೆ ಫಣೀಶ್, ರಾಕೇಶ್, ಸುಚಿಂದ್ರ ಇನ್ನಿತರರು ಉಪಸ್ಥಿತರಿದ್ದರು.

ಉಚಿತ ಥೈರಾಯಿಡ್ ತಪಾಸಣಾ ಶಿಬಿರ


ಮೈಸೂರು: ಸಿಎಸ್‌ಐ ಹೋಲ್ಡ್‌ವರ್ತ್ ಮೆಮೋರಿಯಲ್ ಆಸ್ಪತ್ರೆಯಲ್ಲಿ ಫೆ.29 ರಂದು ಬೆಳಗ್ಗೆ 10.30ರಿಂದ ಮ. 4ರವರೆಗೆ ಉಚಿತ ಥೈರಾಯಿಡ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 7676485412, 9241587565.



ಮೈಸೂರು ತಾಲೂಕು ಪುಟ್ಟೇಗೌಡನಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಪಟೇಲ್ ಎಸ್.ಮಹಾದೇವಪ್ಪ, ಉಪಾಧ್ಯಕ್ಷರಾಗಿ ಸ್ವಾಮಿ ಆಯ್ಕೆಯಾಗಿದ್ದಾರೆ. ನಿರ್ದೇಶಕರಾಗಿ ಎಸ್. ನಂಜಪ್ಪ, ಬಿ.ನಂಜಪ್ಪ, ಬಿ.ಪುಟ್ಟಸ್ವಾಮಿ, ವೈ.ಬಸವಣ್ಣ, ತಮ್ಮಯ್ಯ, ಕೆ.ಪುಟ್ಟಸ್ವಾಮಿ, ಗಂಗಮ್ಮ ದೇವರಾಜ್ ಮೂರ್ತಿ, ನಾಗಮ್ಮ ಶಿವಸ್ವಾಮಿ ಆಯ್ಕೆಯಾಗಿದ್ದಾರೆ. ಮುಖಂಡರಾದ ದೇವರಾಜ ಮೂರ್ತಿ, ಗ್ರಾಪಂ ಮಾಜಿ ಸದಸ್ಯರಾದ ಮಂಜು ಪ್ರಕಾಶ್, ಮಹದೇವಸ್ವಾಮಿ, ರಾಜು ನಂಜಪ್ಪ, ರಾಜು, ಶಿವನಪ್ಪ, ಬಸವಣ್ಣ, ಶಿವಸ್ವಾಮಿ, ಮಂಜು, ಮಾಲಯ್ಯ, ನಾಗರಾಜು, ಕಾರ್ಯದರ್ಶಿ ಮಹದೇವಸ್ವಾಮಿ, ಸಿಬ್ಬಂದಿಗಳಾದ ಶಿವರಾಜು, ಪುಟ್ಟರಾಜು, ಪುಟ್ಟೇಗೌಡನಹುಂಡಿ, ಚಟ್ನಳ್ಳಿ ಪಾಳ್ಯ ಗ್ರಾಮಸ್ಥರು ಹಾಜರಿದ್ದರು.

ವೃತ್ತಕ್ಕೆ ಹಾಮಾ ನಾಯಕ ಹೆಸರಿಡಲು ಆಗ್ರಹ

ಮೈಸೂರು,ಫೆ.24–ಮೈಸೂರಿನ ನ್ಯೂ ಕಾಂತರಾಜ ಅರಸು ಮುಖ್ಯರಸ್ತೆ ಹಾಗೂ ಪಡುವಣ ಮುಖ್ಯ ರಸ್ತೆ ಸೇರುವ (ಕವಿತಾ ಬೇಕರಿ ಪಕ್ಕ) ವೃತ್ತಕ್ಕೆ ಹಾ.ಮಾ.ನಾಯಕ ಅವರ ಹೆಸರಿಡಲು ಪಾಲಿಕೆ ಮಾಜಿ ಸದಸ್ಯ, ಅನಿಕೇತನ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ.ಮಲ್ಲೇಶ್ ಆಗ್ರಹಿಸಿದ್ದಾರೆ.



ಹಾ.ಮಾ.ನಾಯಕ

ಹಾರೋಗದ್ದೆ ಮಾನಪ್ಪ ನಾಯಕರಾದ ಇವರು ಮೈಸೂರಿಗರಿಗೆ ಹಾಮಾನಾ ಎಂದೇ ಚಿರಪರಿಚಿತರು. ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಹತ್ತಾರು ವರ್ಷ ನಿರ್ದೇಶಕರಾಗಿ, ಕಲಬುರಗಿ ವಿವಿ ಕುಲಪತಿಯಾಗಿ ಕನ್ನಡದ ಏಳ್ಗೆಗೆ ದುಡಿದಿದ್ದಾರೆ. ಮಾರುಕಟ್ಟೆಯಲ್ಲಿ ದುರ್ಲಭವಾದ ಅಪರೂಪದ ಆಕರ ಗ್ರಂಥಗಳ ಪರಿಷ್ಕೃತ ಪುನರ್ ಮುದ್ರಣ, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ವಿಶ್ವ ಕೋಶ, ಕನ್ನಡ ಸಾಹಿತ್ಯ ಚರಿತ್ರೆ ಮುಂತಾದ ಮೌಲಿಕ ಸಂಪುಟಗಳಿಗೆ ದುಡಿದಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಅಮೇರಿಕಾ ದೇಶದ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ವಿದ್ವಾಂಸರಾಗಿದ್ದರು. ರುಮೇನಿಯಾ ದೇಶದ ಬುಖಾರೆಸ್ಟ್‌ನಲ್ಲಿ ನಡೆದ 10ನೇ ಅಂತರ ರಾಷ್ಟ್ರೀಯ ಭಾಷಾ ವಿಜ್ಞಾನಿಗಳ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ಕರ್ನಾಟಕ ರಾಜ್ಯ ಸರ್ಕಾರದ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಐಬಿಎಚ್ ಶಿಕ್ಷಣದತ್ತಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾಲಯ ಸುವರ್ಣ ಮಹೋತ್ಸವ ಬಹುಮಾನ, 'ಸಂಪ್ರತಿ' ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹೀಗೆ ಹಲವು ಗೌರವ, ಪ್ರಶಸ್ತಿಗಳಿಗೆ ಅವರು ಪಾತ್ರರು. ಜತೆಗೆ ಬೀದರ್‌ನಲ್ಲಿ ನಡೆದ ಅಖಿಲ ಭಾರತ 57ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ನಾಳೆ ಉಚಿತ ಕಿವಿ ತಪಾಸಣಾ ಶಿಬಿರ

ಮೈಸೂರು,ಫೆ.24–ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಆಪ್ಟಿಕೇರ್ ಆಸ್ಪತ್ರೆಯಲ್ಲಿ ಫೆ.26ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 3ರವರೆಗೆ ಉಚಿತ ಕಿವಿ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 9686699899 ಸಂಪರ್ಕಿಸಬಹುದು.

ವಿಶೇಷಚೇತನರಲ್ಲಿ ವಿಶೇಷ ಪ್ರತಿಭೆಯೂ ಉಂಟು

- ಶ್ರೀ ನವಚೇತನ ಬಸವೇಶ್ವರ ಟ್ರಸ್ಟ್ ಶಾಲೆಯಲ್ಲಿ ಜಗ್ಗು ಜಾದೂ ಪ್ರದರ್ಶನ
- ಜನಪರ ಸಾಹಿತ್ಯ ಪರಿಷತ್ ಮಹಿಳಾ ಘಟಕದ ಅಧ್ಯಕ್ಷೆ ಲಕ್ಷ್ಮೀದೇವಿಗೆ ಸನ್ಮಾನ



ಶ್ರೀ ನವಚೇತನ ಬಸವೇಶ್ವರ ಟ್ರಸ್ಟಿನ ವಿಶೇಷಚೇತನರ ಶಾಲೆಯಲ್ಲಿ ಏರ್ಪಡಿಸಿದ್ದ ಜಗ್ಗು ಜಾದೂ ಪ್ರದರ್ಶನ ಜನಪರ ಸಾಹಿತ್ಯ ಪರಿಷತ್ ಮಹಿಳಾ ಘಟಕದ ಅಧ್ಯಕ್ಷೆ ಲಕ್ಷ್ಮೀದೇವಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಫೆ. 24– ವಿಶೇಷಚೇತನರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಎಲ್ಲರೂ ಕೈಜೋಡಿಸಬೇಕು ಎಂದು ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷರೂ ಆದ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ. ಚಂದ್ರಶೇಖರ್ ಮನವಿ ಮಾಡಿದರು.

ಜನಪರ ಸಾಹಿತ್ಯ ಪರಿಷತ್ತು ವತಿಯಿಂದ ಶ್ರೀರಾಂಪುರ ಅನ್ನಪೂರ್ಣ ಬಡಾವಣೆಯ ಶ್ರೀ ನವಚೇತನ ಬಸವೇಶ್ವರ ಟ್ರಸ್ಟಿನ ವಿಶೇಷ ಚೇತನರ ಶಾಲೆಯಲ್ಲಿ ಏರ್ಪಡಿಸಿದ್ದ ಜಗ್ಗು ಜಾದೂ ಪ್ರದರ್ಶನ ಹಾಗೂ ಜನಪರ ಸಾಹಿತ್ಯ ಪರಿಷತ್ ಮಹಿಳಾ ಘಟಕದ ಅಧ್ಯಕ್ಷೆ ಲಕ್ಷ್ಮೀದೇವಿ ಅವರ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಶೇಷಚೇತನರಿಗೆ ಅನುಕಂಪ, ಕನಿಕರ ಬೇಕಾಗಿಲ್ಲ. ಬದಲಿಗೆ ಅವರಲ್ಲಿ ಆತ್ಮಸ್ಥೈರ್ಯ ಮೂಡಿಸುವ ಮೂಲಕ ಮುಖ್ಯ ವಾಹಿನಿಗೆ ತರುವ ಕೆಲಸ ಆಗಬೇಕಾಗಿದೆ. ಯಾರೊಬ್ಬರೂ ಕೂಡ ವಿಶೇಷಚೇತನರನ್ನು ನಿಕೃಷ್ಟವಾಗಿ ಕಾಣಬಾರದು. ಅಂಗವಿಕಲತೆ ಶಾಪವಲ್ಲ, ವರ. ಅವರಲ್ಲಿ ಕೂಡ ಸಾಕಷ್ಟು ಪ್ರತಿಭಾವಂತರಿದ್ದು, ರಾಜ್ಯ, ರಾಷ್ಟ್ರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದವರು ಇದ್ದಾರೆ. ಹೀಗಾಗಿ ಇಲ್ಲಿರುವ ಮಕ್ಕಳ ವಿಶೇಷ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಬೇಕು ಎಂದರು.

ಮುಖ್ಯ ಅತಿಥಿಯಾಗಿದ್ದ ಎಚ್.ಡಿ. ಕೋಟೆ ತಾಲೂಕಿನ ಸಾವಿತ್ರಿ ಬಾಪುಲೆ ಶಿಕ್ಷಕಿಯರ ಸಂಘದ ಕಾರ್ಯದರ್ಶಿ ಎಲ್.ಕೆ.ರೂಪಾ ಪ್ರಮೋದ್ ಮಾತನಾಡಿ, ವಿಶೇಷಚೇತನರಲ್ಲಿ ತಾಯ್ತನದ ಮನಸ್ಸು, ಮಗುವಿನ ಮುಗ್ಧತೆ ಇರುತ್ತದೆ ಎಂದರು.

ಮಾಜಿ ಸೈನಿಕ ಬೀರೇಶ್ ಮಾತನಾಡಿ, ನಾವು ಪ್ರಯತ್ನ ಮಾಡುವ ಮೊದಲೇ ಸೋಲುತ್ತಿದ್ದೇವೆ. ಇದರ ಬದಲು ಧೈರ್ಯದಿಂದ ಮುಂದೆ ಸಾಗಿದರೆ ಗೆಲುವು ಖಚಿತ ಎಂದರು.

ಅಧ್ಯಕ್ಷತೆ ವಹಿಸಿದ್ದ ಖ್ಯಾತ ವೈದ್ಯ ಡಾ.ಮಾಲೇಗೌಡ ಮಾತನಾಡಿ, ಕೇವಲ ತೋರಿಕೆಗಾಗಿ ಸೇವೆ ಮಾಡಬಾರದು. ನಿಜವಾದ ಕಾಳಜಿ ಇದ್ದಲ್ಲಿ ಈ ರೀತಿಯ ವಿಶೇಷಚೇತನರ ಸೇವೆ ಮಾಡಬೇಕು ಎಂದು ಸಲಹೆ ನೀಡಿದರು. ಜನಪರ ಸಾಹಿತ್ಯ ಪರಿಷತ್ತು ರಾಜ್ಯಾಧ್ಯಕ್ಷ ಡಾ.ಎಂ.ಮಹೇಶ್ ಚಿಕ್ಕಲ್ಲೂರು, ಮಾಜಿ ಕಾರ್ಪೋರೇಟರ್ ನಿರ್ಮಲಾ ಹರೀಶ್, ಉಪಾಧ್ಯಕ್ಷ ಸಾಲುಂಡಿ ದೊರೆಸ್ವಾಮಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಶ್ರೀ ನವಚೇತನ ಬಸವೇಶ್ವರ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಮರೀಗೌಡ, ಕಾವ್ಯಶ್ರೀ, ಡಾ.ಮಾದಪ್ಪ, ಡಾ.ಬಿ.ಬಸವರಾಜು, ಪ್ರೇಮಾ, ಮಹದೇವ, ಮಲ್ಲೇಶ್, ವೆಂಕಟೇಶ್, ಮಂಜು, ನಂಜುಂಡಸ್ವಾಮಿ, ರಾಜೇಶ್, ಶಿವರಾಮೇಗೌಡ, ಬಸವರಾಜು, ಶಾಂತಾ ರಾಮಕೃಷ್ಣ, ಮುಖ್ಯ ಶಿಕ್ಷಕ ಸುಂದರನಾಯಕ ಇನ್ನಿತರರಿದ್ದರು.

ವಿದ್ಯಾರ್ಥಿಗಳ ಗುರಿ ಅಚಲವಾಗಬೇಕು

ಆಧ್ಯಾತ್ಮಿಕ ಚಿಂತಕ ಶಂಕರ ದೇವನೂರು ಅಭಿಮತ

ಮೈಸೂರು,ಫೆ.24–ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ 'ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು' ವಿಷಯ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಆಧ್ಯಾತ್ಮಿಕ ಚಿಂತಕರು ಹಾಗೂ ನಿವೃತ್ತ ಮುಖ್ಯ ಅಭಿಯಂತರರು ಆದ ಶಂಕರ ದೇವನೂರು ಮಾತನಾಡುತ್ತಾ, ಒಂದು ಮಲ್ಲಿಗೆಯ ಬಳ್ಳಿ ಒಂದು ವರ್ಷದ ಸಾಧನೆಯನ್ನು ತನ್ನ ಒಂದು ಮೊಗ್ಗಿನಲ್ಲಿ ಕೂಡಿಟ್ಟು ಆ ಮೊಗ್ಗು ಕಾಲಾಂತರದಲ್ಲಿ ಅರಳಿ ಹೂವಾಗಿ ತನ್ನ ಸೌಂದರ್ಯ ಹಾಗೂ ಸುವಾಸನೆಯ ಮೂಲಕ ತನ್ನ ಸುತ್ತಲಿನ ವಾತಾವರಣವನ್ನು ಸುಗಂಧಗೊಳಿಸುತ್ತದೆ ಹಾಗೆಯೇ ವಿದ್ಯಾರ್ಥಿಗಳು ಈ ನೆಲದ ಸಾಮರ್ಥ್ಯವನ್ನು ಅರಿತು ಪ್ರಕೃತಿಯೊಂದಿಗೆ ಅನುಸಂಧಾನ ಮಾಡಿಕೊಂಡಾಗ ಮಾತ್ರ ಅವರು ತಮ್ಮ ಗುರಿಯನ್ನು ತಲುಪಲು ಸಾಧ್ಯ. ಆದ್ದರಿಂದ ವಿದ್ಯಾರ್ಥಿಗಳ ಗುರಿ ಅಚಲವಾಗಿರಬೇಕು. ಯಾವುದನ್ನು ನೋಡಬೇಕು, ಯಾವುದನ್ನು ನೋಡಬಾರದು ಎಂಬ ವಿವೇಕ ಇರಬೇಕು ಎಂಬುದನ್ನು ಅಲ್ಲಮನ ವಚನದೊಂದಿಗೆ ವಿವರಿಸಿದರು.

ವಿದ್ಯಾರ್ಥಿಗಳು ಜ್ಞಾನಾರ್ಜನೆಗೆ ದಾಸರಾಗಬೇಕು. ವಿದ್ಯಾರ್ಥಿಯ ಕಾಲ ಎಂದರೆ, ಜ್ಞಾನ ಸಂಗ್ರಹಣೆಯ ಕಾಲ. ಆದ್ದರಿಂದ ಬುದ್ಧಿಯನ್ನು ಮಸೆದು ಭಾವವನ್ನು ಕಡೆದು ತತ್ವಜ್ಞರ ಬದುಕನು ಅರಿಯಬೇಕು. ಬಣ್ಣದ ಗುಳ್ಳೆಗಳ ಹವ್ಯಾಸದಲ್ಲಿ ಕಾಲಹರಣ ಮಾಡಬಾರದು ಎಂಬ ಕುವೆಂಪು ಅವರ ನುಡಿಗಳನ್ನು ಉಲ್ಲೇಖಿಸಿದರು. ಯಾವ ಕಡೆಗೆ ಹೋದರೆ ಬದುಕು ಹಾಳಾಗುತ್ತದೆಯೋ ಅಂತಹ ಕಡೆ ಗಮನಹರಿಸಬಾರದು. ತಮ್ಮ ಬದುಕು ಎಂಬ ಅಭ್ಯುದಯದ ಬೇರಿಗೆ ಬಿಸಿನೀರನ್ನು ಎರೆಯಬಾರದು. ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ, ಐಕ್ಯೂಎಸಿ ಸಹಯೋಗದೊಂದಿಗೆ 'ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು' ವಿಷಯ ಕುರಿತು ನಡೆದ ವಿದ್ಯಾರ್ಥಿಗಳೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಶಂಕರ್ ದೇವನೂರು, ಶ್ರೀಮತಿ ಅನಸೂಯ ದಂಪತಿಯನ್ನು ಸನ್ಮಾನಿಸಲಾಯಿತು.

ಜ್ಞಾನ, ದೇಹದ ಸಾಮರ್ಥ್ಯ, ಕೌಶಲ್ಯ, ಪರಿಶ್ರಮ ಮತ್ತು ಏಕಾಗ್ರತೆ, ಸಮಯ ಪ್ರಜ್ಞೆಯನ್ನು ರೂಢಿಸಿಕೊಂಡು ವಿವೇಕವನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಉನ್ನತ ಶಿಕ್ಷಣವೆಂದರೆ ಕೇವಲ ಮಾಹಿತಿ ಸಂಗ್ರಹಿಸುವುದಷ್ಟೇ ಅಲ್ಲ. ಅದು ಜೀವನದಲ್ಲಿ ಸಾಮರಸ್ಯದಿಂದ ಬದುಕುವುದನ್ನು ತಿಳಿಸುತ್ತದೆ. ಶಿಕ್ಷಣದ ಮಹತ್ವ ಬೇರ್ಪಡಿಸುವುದಲ್ಲ ಸೇರ್ಪಡಿಸುವುದು. ವಿದ್ಯಾರ್ಥಿಗಳಲ್ಲಿರುವ ಅಜ್ಞಾನವನ್ನು ದೂರಮಾಡಿ, ಅವರಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಅನಾವರಣಗೊಳಿಸಿ, ನೈಪುಣ್ಯವರ್ಧನೆಗೆ ಅವಕಾಶ ಮಾಡಿಕೊಡುವಂತಹದು ಗುರುಗಳ ಹೊಣೆಗಾರಿಕೆಯಾಗಿದೆ ಎಂದರು.

ಮೊಬೈಲ್ ಅನ್ನು ಸದ್ಬಳಕೆ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ಸದಾ ಬೇರೆಯವರಿಗೆ ಅವಲಂಬಿತರಾಗಿ ಬದುಕಬಾರದು ಎಂಬುದನ್ನು ಆಕಸ್ಮಿಕ ಅಪಘಾತದಿಂದ ತನ್ನ ಬಲಗೈ ಕಳೆದುಕೊಂಡರೂ, ತನ್ನ ಎಡಗೈ ಒಂದರಿಂದಲೇ ವಿದ್ಯಾಭ್ಯಾಸವನ್ನು ಮುಂದುವರೆಸಿ 2012ರಲ್ಲಿ ಯುಪಿಎಸ್‌ಸಿ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಮಂಡ್ಯ ಜಿಲ್ಲೆಯ ನಾಗಮಂಗಲದ ಶಿವರಾಮೇಗೌಡ ಮತ್ತು ಶ್ರೀಮತಿ ರತ್ನಮ್ಮ ದಂಪತಿ ಪುತ್ರ ಗಿರೀಶ್ ಅವರು ಆಂಧ್ರದ ಕರ್ನೂಲ್‌ನಲ್ಲಿ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ನೈಜ್ಯ ಘಟನೆಯನ್ನು ಉಲ್ಲೇಖಿಸುವುದರ ಮೂಲಕ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ವಿವರಿಸಿದರು.

ಕಾರ್ಯಕ್ರಮದಲ್ಲಿ ಶಂಕರ್ ದೇವನೂರು ಮತ್ತು ಶ್ರೀಮತಿ ಅನಸೂಯ ದಂಪತಿಗಳನ್ನು ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಸಹ ಕನ್ನಡ ಪ್ರಾಧ್ಯಾಪಕಿ ಡಾ.ವಿನೋದಮ್ಮ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಭಾನುವಾರ 25 ಫೆಬ್ರವರಿ 2024

ಬೆಳೆಗಾರರ ಮೇಲೆ ಸುಳ್ಳು ಪ್ರಕರಣ ದಾಖಲು

ಎನ್‌ಜಿಓಗಳಿಂದ ಕಾರ್ಮಿಕರ ಹಾದಿ ತಪ್ಪಿಸುವ ಕೆಲಸವಾಗುತ್ತಿದೆ



ಕುಟ್ಟ ಕೊಡವ ಸಮಾಜ ಸಭಾಂಗಣದಲ್ಲಿ ಕುಟ್ಟ ಕೊಡವ ಸಮಾಜದ ಸಭೆಯಲ್ಲಿ ಭಾಗವಹಿಸಿರುವ ಮುಖಂಡರು.

ಮಡಿಕೇರಿ, ಫೆ.24– ಕೊಡಗು ಜಿಲ್ಲೆಯ ಹಲವು ಬೆಳೆಗಾರರ ಮೇಲೆ ಜಾತಿ ನಿಂದನೆ ಮತ್ತು ಜೀತ ಪದ್ಧತಿ ಆರೋಪದಡಿ ಸತ್ಯಕ್ಕೆ ದೂರವಾದ ಪ್ರಕರಣವನ್ನು ದಾಖಲಿಸಲಾಗಿದೆ. ಈ ರೀತಿಯ ದೂರುಗಳು ಬಂದ ಸಂದರ್ಭ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಕೂಲಂಕಷವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕೆಂದು ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಹಾಗೂ ಕುಟ್ಟ ಕೊಡವ ಸಮಾಜದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಒತ್ತಾಯಿಸಿದ್ದಾರೆ.


ಕುಟ್ಟ ಕೊಡವ ಸಮಾಜ ಸಭಾಂಗಣದಲ್ಲಿ ನಡೆದ ಕುಟ್ಟ ಕೊಡವ ಸಮಾಜದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬಹಳ ಹಿಂದಿನಿಂದಲೂ ಬೆಳೆಗಾರರು ಹಾಗೂ ಕಾರ್ಮಿಕರ ನಡುವೆ ಉತ್ತಮ ಬಾಂಧವ್ಯವಿದೆ. ಆದರೆ ಕೆಲವು ಎನ್‌ಜಿಓಗಳು ಕಾರ್ಮಿಕರ ಹಾದಿ ತಪ್ಪಿಸಿ ಬೆಳೆಗಾರರನ್ನು ಸುಲಿಗೆ ಮಾಡಲು ಪ್ರಕರಣ ದಾಖಲಿಸುತ್ತಿದ್ದಾರೆ ಎಂದು ಆರೋಪಿಸಿದರು.

ಜಿಲ್ಲೆಯಲ್ಲಿ ಈಗಾಗಲೇ ಜಾತಿ ನಿಂದನೆ ಹಾಗೂ ಜೀತ ವಿಮುಕ್ತಿ ಪ್ರಕರಣದ ದೂರುದಾರರು ಆಧಾರ್ ಕಾರ್ಡ್‌ಗಳನ್ನು ಹೊಂದಿದ್ದು, ಚುನಾವಣಾ ಗುರುತಿನ ಪತ್ರ ಹೊಂದಿದ್ದಾರೆ. ಪಡಿತರ ಚೀಟಿಯಲ್ಲಿ ತಮ್ಮ ಬೆರಳಚ್ಚನ್ನು ನೀಡಿ ಪಡಿತರ ಸೌಲಭ್ಯ ಪಡೆಯುತ್ತಿದ್ದಾರೆ. ಸಾಮಗ್ರಿ ಖರೀದಿಸಲು ಸಂತೆಗೆ ಹೋಗುತ್ತಿದ್ದಾರೆ. ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಹೋಗುವಂತೆ ಮಾಡಲಾಗಿದೆ. ಹಲವು ಮಕ್ಕಳು ಸರ್ಕಾರಿ ಹಾಸ್ಟೆಲ್‌ನಲ್ಲಿದ್ದಾರೆ ಎಂದರು.

ಪ್ರಕರಣದ ದೂರುದಾರರು ಶಾಲೆ ಮತ್ತು ಹಾಸ್ಟೆಲ್‌ಗಳಲ್ಲಿ ಪೋಷಕರ ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ. ಬಹುತೇಕ ಎಲ್ಲಾ ಕಾರ್ಮಿಕರಲ್ಲಿ ಸ್ಮಾರ್ಟ್ ಫೋನ್‌ಗಳಿವೆ, ಟಿವಿ ಇದೆ. ಸ್ವಂತ ವಾಹನಗಳನ್ನು ಹೊಂದಿದ್ದು, ಕೆಲಸದ ಬಿಡುವು ಹಾಗೂ ರಜೆ ದಿನಗಳಲ್ಲಿ ಇಷ್ಟ ಬಂದಲ್ಲಿಗೆ ತೆರಳುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಜೀತ ಪದ್ಧತಿ ಇದೆ ಎಂದು ವಿನಾಕಾರಣ ಆರೋಪ ಹೊರಿಸಿ ಪ್ರಕರಣ ದಾಖಲಿಸಿ ಬೆಳೆಗಾರರಿಗೆ ಕಿರುಕುಳ ನೀಡುವುದು ಸರಿಯಲ್ಲ ಎಂದು ವಿಷ್ಣು ಕಾರ್ಯಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ಹೊರಗಿನ ಎನ್‌ಜಿಓಗಳು ಹಾಗೂ ಕೆಲವು ಕಾರ್ಮಿಕ ಮುಖಂಡರು ಸ್ಥಳೀಯ ಕಾರ್ಮಿಕರನ್ನು ದಾರಿ ತಪ್ಪಿಸುತ್ತಿದ್ದಾರೆ. ಬೆಳೆಗಾರರು ಹಾಗೂ ಕಾರ್ಮಿಕರ ನಡುವಿನ ಸಾಮರಸ್ಯವನ್ನು ಕದಡುವ ಪ್ರಯತ್ನ ಮಾಡುತ್ತಿದ್ದಾರೆ. ಕೆಲವು ವರ್ಷಗಳ ಹಿಂದೆ ಇದೇ ರೀತಿ ಜೀತ ಪದ್ಧತಿಯ ಬಗ್ಗೆ ಆರೋಪ ಮಾಡಲಾಗಿತ್ತು. ಉನ್ನತ ಅಧಿಕಾರಿಗಳು ಹಾಗೂ ಸಂಬಂಧಿಸಿದ ಎಲ್ಲಾ ಇಲಾಧಿಕಾರಿಗಳು ಪರಿಶೀಲನೆ ನಡೆಸಿದಾಗ ಅಂತಹ ಯಾವುದೇ ಪದ್ಧತಿ ಇಲ್ಲ ಎಂಬುವುದು ಸಾಬೀತಾಗಿತ್ತು. ಪರಿಸ್ಥಿತಿ ಹೀಗಿರುವಾಗ ಮತ್ತೆ ಮತ್ತೆ ಬೆಳೆಗಾರರಿಗೆ ಕಿರುಕುಳ ನೀಡುವುದು ಸರಿಯಲ್ಲ ಎಂದು ಹೇಳಿದರು. ಕುಟ್ಟ ಕೊಡವ ಸಮಾಜದ ಉಪಾಧ್ಯಕ್ಷ ಹೊಟ್ಟೆಂಗಡ ರಮೇಶ್, ಕಾರ್ಯದರ್ಶಿ ಕೊಂಗಂಡ ಸುರೇಶ್, ಖಜಾಂಚಿ ಮಚ್ಚಮಾಡ ಸುಬ್ರಮಣಿ, ಜಂಟಿ ಕಾರ್ಯದರ್ಶಿ ತೀತಿರ ಮಂದಣ್ಣ, ಆಡಳಿತ ಮಂಡಳಿ ಸದಸ್ಯರಾದ ಚೆಪ್ಪುಡೀರ ಪಾರ್ಥ, ಚೆಪ್ಪುಡೀರ ಬೋಪಣ್ಣ, ಚೆಕ್ಕೇರ ಕಾರ್ಯಪ್ಪ ರಾಬಿನ್, ಪೆಮ್ಮಣಮಾಡ ವಾಸು ಉತ್ತಪ್ಪ, ತೀತಿರ ಕಬೀರ್, ಕೆ.ಬಾಡಗ ಗ್ರಾ.ಪಂ. ಅಧ್ಯಕ್ಷ ಮುಕ್ಕಾಟೀರ ರಿತೇಶ್ ಬಿದ್ದಪ್ಪ, ಬೆಳೆಗಾರ ಮಚ್ಚಮಾಡ ಪ್ರಕಾಶ್, ವಕೀಲ ಬಾಚರಣಿಯಂಡ ಅಯ್ಯಪ್ಪ, ಕಳ್ಳಂಗಡ ಸೌರಭ್, ಅಳಮೇಂಗಡ ಮೋಟಯ್ಯ, ಗುಡಿಯಂಗಡ ರಾಜ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

'ಅಯೋಧ್ಯೆ ಶ್ರೀರಾಮಮಂದಿರ, ಇದು ಪ್ರೀತಿಯ ಮಂದಿರ, ರಾಷ್ಟ್ರಮಂದಿರ' ಪುಸ್ತಕ ಬಿಡುಗಡೆ



'ಅಯೋಧ್ಯೆ ಶ್ರೀರಾಮನ ಮಂದಿರ, ಇದು ಪ್ರೀತಿಯ ಮಂದಿರ, ರಾಷ್ಟ್ರಮಂದಿರ' ಪುಸ್ತಕವನ್ನು ಹಿರಿಯ ಸಾಹಿತಿ ಗಜಾನನ ಶರ್ಮ ಬಿಡುಗಡೆ ಮಾಡುತ್ತಿರುವುದು.

ಮಡಿಕೇರಿ,ಫೆ.24– ಪತ್ರಕರ್ತ ಎಚ್.ಟಿ. ಅನಿಲ್ ಬರೆದಿರುವ 'ಅಯೋಧ್ಯೆ ಶ್ರೀರಾಮನ ಮಂದಿರ, ಇದು ಪ್ರೀತಿಯ ಮಂದಿರ, ರಾಷ್ಟ್ರಮಂದಿರ' ಪುಸ್ತಕವನ್ನು ಹಿರಿಯ ಸಾಹಿತಿ ಗಜಾನನ ಶರ್ಮ ಬಿಡುಗಡೆ ಮಾಡಿದರು.

ನಗರದ ಖಾಸಗಿ ಹೋಟೇಲ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿ, ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮ ಎಂಬ ಗೀತ ರಚನೆಕಾರ ಹಾಗೂ ಸಾಹಿತಿ ಗಜಾನನ ಶರ್ಮ, ರಾಮನ ವ್ಯಕ್ತಿತ್ವವನ್ನು ಎಳೆಎಳೆಯಾಗಿ ಸಭಿಕರ ಮುಂದೆ ಬಿಡಿಸಿಟ್ಟರು. ರಾಮನನ್ನು ಕೇವಲ ಹಿಂದೂ ಧರ್ಮದ ದೇವತೆಯಾಗಿ ಗೌರವಿಸಬಾರದು. ಬದಲಿಗೆ, ಅಗತ್ಯವಾಗಿ ಬೇಕಾದ ಆದರ್ಶದಂತೆ ಬದುಕಿದ್ದ ಎಂಬ ಕಾರಣಕ್ಕೆ ರಾಮನನ್ನು ನಂಬಬೇಕು ಎಂದು ಪ್ರತಿಪಾದಿಸಿದರು.


ರಾಮ ಇಷ್ಟು ವರ್ಷಗಳಾದ ನಂತರವೂ ನಮಗೆ ಬೇಕು ಅನ್ನಿಸಿದರೆ, ಇಂಡೋನೇಷ್ಯಾ, ನೇಪಾಳ ಸೇರಿದಂತೆ ವಿಶ್ವದ ಹಲವು ರಾಷ್ಟ್ರಗಳ ಸಂಸ್ಕೃತಿಗಳಲ್ಲಿ ರಾಮ ಹಾಸುಹೊಕ್ಕಾಗಿದ್ದರೆ ಅದಕ್ಕೆ ಆತನ ಆದರ್ಶಗಳು ಮತ್ತು ಪ್ರೀತಿ ಕಾರಣ ಎಂದು ಹೇಳಿದರು.

ಎಂತಹ ಕಷ್ಟವನ್ನಾದರೂ ನಗುಮೊಗದಿಂದಲೇ ಸ್ವೀಕರಿಸಬೇಕು. ಸುಂದರಿಯಾಗಿ ಬಂದ ಶೂರ್ಪನಖಿ ಹಾಗೂ ಲಂಕೆಯ ಸಿಂಹಾಸನದ ಸೆಳೆತಗಳಿಗೆ ಆತ ಒಳಗಾಗಲಿಲ್ಲ. ಅಶ್ವಮೇಧ ಯಾಗ ಮಾಡುವಾಗ ಎಲ್ಲರೂ ಮತ್ತೊಂದು ಮದುವೆಯಾಗು ಎಂದರೂ ಸೀತೆಯ ಪ್ರತಿಮೆಯನ್ನೇ ಪಕ್ಕದಲ್ಲಿರಿಸಿಕೊಂಡವ ರಾಮ. ಆತನ ಕಣ್ಣಿಗೆ ಅಳಿಲಿನ ಸೇವೆ, ಕಡು ಬಡವಿ ಶಬರಿಯ ಭಕ್ತಿಯೂ ಕಂಡಿತು. ಸೇವಕನಿಗೂ ತನ್ನ ಕುಟುಂಬದಲ್ಲಿ ಸ್ಥಾನ ಕಲ್ಪಿಸಿದ್ದ. ರಾಮನ ಬದುಕೇ ಪ್ರೀತಿಯ ಬದುಕಾಗಿತ್ತು. ಇಂತಹ ವ್ಯಕ್ತಿತ್ವವನ್ನು ನಾವು ಗೌರವಿಸಬಾರದೇ ಎಂದು ಪ್ರಶ್ನಿಸಿದರು. ಬಳಿಕ ಅವರು ತಾವು ಬರೆದ 'ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮ' ಎಂಬ ಹಾಡು ಹುಟ್ಟಿದ ಬಗೆಯನ್ನು ಸವಿವರವಾಗಿ ವಿವರಿಸಿದರು. ಪತ್ರಕರ್ತ ಜಿ.ಚಿದ್ವಿಲಾಸ್ ಮಾತನಾಡಿ, ವೀರಪ್ಪನ್ ಕಾರ್ಯಾಚರಣೆ, ಕೋವಿಡ್ ಕಾಲದಲ್ಲಿ ಅತ್ಯುತ್ತಮ ವರದಿಗಳನ್ನು ಎಚ್.ಟಿ.ಅನಿಲ್ ಬರೆದಿದ್ದಾರೆ. ಈಗ ಅಯೋಧ್ಯೆ ಪುಸ್ತಕವನ್ನು ಅಷ್ಟೇ ಅತ್ಯುತ್ತಮವಾಗಿ ರಚಿಸಿದ್ದಾರೆ ಎಂದು ಶ್ಲಾಘಿಸಿದರು. ಪುಸ್ತಕ ರಚನೆಕಾರ ಪತ್ರಕರ್ತ ಅನಿಲ್ ಎಚ್.ಟಿ. ಮಾತನಾಡಿ, ಅಯೋಧ್ಯೆಯಲ್ಲಿ ತಮಗಾದ ಅನುಭವಗಳನ್ನು ವಿವರಿಸಿದರು.

ಇಂದು ಗೋಣಿಕೊಪ್ಪದಲ್ಲಿ ಮಾಜಿ ಸೈನಿಕರ ರ‍್ಯಾಲಿ

ಮಡಿಕೇರಿ: ಗೋಣಿಕೊಪ್ಪಲಿನ ಕಾವೇರಿ ಕಾಲೇಜಿನಲ್ಲಿ ಫೆ.25ರಂದು ಬೆಳಗ್ಗೆ 8 ಗಂಟೆಯಿಂದ ಬೆಂಗಳೂರಿನ ಮುಖ್ಯಾಲಯ ಕರ್ನಾಟಕ ಮತ್ತು ಕೇರಳ ಸಬ್ ಏರಿಯಾ ವತಿಯಿಂದ ಮಾಜಿ ಸೈನಿಕರ ರ‍್ಯಾಲಿ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ತಿತಿಮತಿ, ಮತ್ತಿಗೋಡು ಸಾಕಾನೆ ಶಿಬಿರಗಳಿಗೆ ಶಾಸಕ ಪೊನ್ನಣ್ಣ ಭೇಟಿ



ಮಡಿಕೇರಿ,ಫೆ.24– ತಿತಿಮತಿ, ಮತ್ತಿಗೋಡು ಸಾಕಾನೆ ಶಿಬಿರಕ್ಕೆ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ, ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಭೇಟಿ ನೀಡಿದ್ದರು. ನಂತರ ಸಾಕಾನೆಯ ಮಾವುತರು ಹಾಗೂ ಕಾವಾಡಿಗಳ ಯೋಗ ಕ್ಷೇಮವನ್ನು ವಿಚಾರಿಸಿದರು. ಬಳಿಕ ಪ್ರಾಸಿ ತಾಣವಾಗಿ ಮಾರ್ಪಡಿಸುತ್ತಿರುವ ಆನೆ ಶಿಬಿರದ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗಕ್ಕೆ ಅಧ್ಯಕ್ಷ ನೇಮಕ



ಪೊನ್ನಂಪೇಟೆ, ಫೆ.24– ಕೊಡಗು ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ನೂತನ ಅಧ್ಯಕ್ಷರಾಗಿ ಪಿ.ಎ. ಹನೀಫ್ ಪುನರ್ ನೇಮಕಗೊಂಡಿದ್ದಾರೆ. ಹನೀಫ್ ಅವರು ಅಧ್ಯಕ್ಷರಾಗಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಅವರ ಹೆಸರನ್ನು ಎಐಸಿಸಿ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷರಾದ ಇಮ್ರಾನ್ ಪ್ರತಾಪ್ ಗರ್ಹಿ ಅನುಮೋದನೆಗೊಳಿಸಿದ್ದಾರೆ ಎಂದು ಎಐಸಿಸಿ ಅಲ್ಪಸಂಖ್ಯಾತರ ವಿಭಾಗದ ರಾಷ್ಟ್ರೀಯ ಸಂಯೋಜಕರು ಮತ್ತು ಕರ್ನಾಟಕ ಉಸ್ತುವಾರಿ ಜೀನಾಲ್ ಎನ್. ಗಾಲ ತಮ್ಮ ನೇಮಕಾತಿ ಪತ್ರದಲ್ಲಿ ತಿಳಿಸಿದ್ದಾರೆ. ಪಿ.ಎ.ಹನೀಫ್ ಅವರನ್ನು ಕಳೆದ ಆಗಸ್ಟ್‌ನಲ್ಲಿ ಕೊಡಗು ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷರಾಗಿ ನೇಮಿಸಲಾಗಿತ್ತು. ಆದರೆ ಕೆಲ ದಿನಗಳ ಹಿಂದೆ ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ರಾಜ್ಯ ಘಟಕ ಸೇರಿದಂತೆ ಎಲ್ಲಾ ಜಿಲ್ಲಾ ಮತ್ತು ಬ್ಲಾಕ್ ಸಮಿತಿಗಳನ್ನು ವಿಸರ್ಜನೆಗೊಳಿಸಲಾಗಿತ್ತು. ಈ ಕಾರಣದಿಂದ ಹನೀಫ್ ಅವರನ್ನು ಇದೀಗ ಮತ್ತೆ ಅಧ್ಯಕ್ಷರಾಗಿ ನೇಮಕಗೊಳಿಸಲಾಗಿದೆ.

ಶ್ರೀ ಗೌರಿಶಂಕರ ದೇವಾಲಯದಲ್ಲಿ ಶಿವರಾತ್ರಿ ಮಹೋತ್ಸವ

ಮಡಿಕೇರಿ,ಫೆ.24– ಮೇಕೇರಿಯ ಶ್ರೀ ಗೌರಿಶಂಕರ ದೇವಾಲಯದಲ್ಲಿ ಫೆ.29 ರಿಂದ ಮಾ.9ರವರೆಗೆ ಮಹಾ ಶಿವರಾತ್ರಿ ಮಹೋತ್ಸವವು ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳೊಂದಿಗೆ ನಡೆಯಲಿದೆ. ಫೆ.29ರಂದು ಬೆಳಿಗ್ಗೆ 9.30 ಗಂಟೆಗೆ ಧ್ವಜಾರೋಹಣ ನೆರವೇರಲಿದ್ದು, ಸಂಜೆ 6.30 ಗಂಟೆಗೆ ಮಡಿಕೇರಿಯ ಶ್ರೀ ವಿಜಯ ವಿನಾಯಕ ದೇವಾಲಯ ಮಹಿಳಾ ಭಜನಾ ತಂಡ ಹಾಗೂ ಮೇಕೇರಿ ಶ್ರೀ ಗೌರಿಶಂಕರ ದೇವಾಲಯದ ಭಜನಾ ಸಮಿತಿ ವತಿಯಿಂದ ಭಜನಾ ಕಾರ್ಯಕ್ರಮ ನಡೆಯಲಿದೆ. ಮಾ.9ರಂದು ನೈರ್ಮಲ್ಯ ಪೂಜೆ, ಶಿವನಿಗೆ ರುದ್ರಾಭಿಷೇಕ ನಡೆಯಲಿದ್ದು, ಮಧ್ಯಾಹ್ನ 11 ಗಂಟೆಗೆ ಧಾರ್ಮಿಕ ಪ್ರವಚನ ನಡೆಯಲಿದೆ. ನಂತರ ಮಹಾಪೂಜೆ, ಪ್ರಸಾದ ವಿತರಣೆ ಹಾಗೂ ಅನ್ನಸಂತರ್ಪಣೆ ನೆರವೇರಲಿದೆ.

ದೊಡ್ಡ ಪುಲಿಕೋಟಲ್ಲಿ ಮಣ್ಣು ಪರೀಕ್ಷಾ ಅಭಿಯಾನ



ದೊಡ್ಡ ಪುಲಿಕೋಟು ಗ್ರಾಮದಲ್ಲಿ ಭಾರತೀಯ ಕಾಫಿ ಮಂಡಳಿ ಮಡಿಕೇರಿ ಹಾಗೂ ಚೆಟ್ಟಳ್ಳಿ ಸಂಶೋಧನ ಕೇಂದ್ರದ ಸಹಯೋಗದಲ್ಲಿ ಸಂಚಾರಿ ಮಣ್ಣು ಪರೀಕ್ಷಾ ಅಭಿಯಾನ ದೊಡ್ಡ ಪುಲಿಕೋಟು ಗ್ರಾಮದ ಕರವಂಡ ರವಿ ಬೋಪಣ್ಣರವರ ಮನೆಯಲ್ಲಿ ಈಚೆಗೆ ಹಮ್ಮಿಕೊಳ್ಳಲಾಯಿತು.

ನಾಪೋಕ್ಲು, ಫೆ.24– ಸಮೀಪದ ದೊಡ್ಡ ಪುಲಿಕೋಟು ಗ್ರಾಮದಲ್ಲಿ ಭಾರತೀಯ ಕಾಫಿ ಮಂಡಳಿ ಮಡಿಕೇರಿ ಹಾಗೂ ಚೆಟ್ಟಳ್ಳಿ ಸಂಶೋಧನ ಕೇಂದ್ರದ ಸಹಯೋಗದಲ್ಲಿ ಸಂಚಾರಿ ಮಣ್ಣು ಪರೀಕ್ಷಾ ಅಭಿಯಾನ ದೊಡ್ಡ ಪುಲಿಕೋಟು ಗ್ರಾಮದ ಕರವಂಡ ರವಿ ಬೋಪಣ್ಣ ಅವರ ಮನೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಅಕ್ಕ ಪಕ್ಕದ ಗ್ರಾಮದ ರೈತರು ಈ ಅಭಿಯಾನದಲ್ಲಿ ಪಾಲ್ಗೊಂಡಿದ್ದರು. ಈ ಸಂದರ್ಭ ಚೆಟ್ಟಳ್ಳಿ ಸಂಶೋಧನ ಕೇಂದ್ರದ ಡಾ.ನಡಾಫ್ ಮಾತನಾಡಿ, ಕಾಫಿ ತೋಟದಲ್ಲಿ ಮಣ್ಣನ್ನು ರಸವತ್ತಾಗಿ ಇಡುವ ಬಗ್ಗೆ ಸಲಹೆ ಸೂಚನೆಗಳನ್ನು ನೀಡಿದರು.

ಹಾಗೆಯೇ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಮಣ್ಣನ್ನು ಪರೀಕ್ಷೆ ಮಾಡಿಸಿ ಸದುಪಯೋಗ ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರು ಕಾಫಿ ಬೆಳೆಗಾರರು ಹಾಗೂ ಕಾಫೀ ಬೋರ್ಡಿನ ಅಧಿಕಾರಿಗಳು ಸಿಬ್ಬಂದಿಗಳು ಭಾಗಿಯಾಗಿದ್ದರು.

ತೆರಕಣಾಂಬಿ ಶ್ರೀ ಲಕ್ಷ್ಮೀವರದ ರಾಜಸ್ವಾಮಿ ಬ್ರಹ್ಮರಥೋತ್ಸವ



ತೆರಕಣಾಂಬಿ ಗ್ರಾಮದ ಶ್ರೀ ಲಕ್ಷ್ಮೀವರದರಾಜಸ್ವಾಮಿಯವರ 15 ನೇ ವರ್ಷದ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಗುಂಡ್ಲುಪೇಟೆ, ಫೆ24– ತಾಲೂಕಿನ ತೆರಕಣಾಂಬಿ ಗ್ರಾಮದಲ್ಲಿ ಶ್ರೀ ಲಕ್ಷ್ಮೀವರದ ರಾಜಸ್ವಾಮಿ ದೇವಸ್ಥಾನದ ಬ್ರಹ್ಮರಥೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.


ಈ ಅಂಗವಾಗಿ ಕಳೆದ ಒಂದು ವಾರದಿಂದ ಗ್ರಾಮದಲ್ಲಿ ಹಬ್ಬದ ವಾತಾವರಣವುಂಟಾಗಿತ್ತು. ಕಳೆದ ನಾಲ್ಕು ದಿನಗಳಿಂದ ದೇವಾಲಯದಲ್ಲಿ ನಾನಾ ವಿಧವಾದ ಧಾರ್ಮಿಕ ಕೈಂಕರ್ಯಗಳನ್ನು ನಡೆಸಲಾಗಿತ್ತು. ಇದೇ ಮೊದಲ ಬಾರಿಗೆ ಮೈಸೂರು ದಸರೆ ಮಾದರಿಯಲ್ಲಿ ಬೀದಿಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು.

ಪ್ರತಿ ಮನೆಯ ಮುಂದೆಯೂ ಮಹಿಳೆಯರು, ಮಕ್ಕಳು ಬಣ್ಣಬಣ್ಣದ ರಂಗೋಲಿಗಳನ್ನು ಬಿಡಿಸಿದ್ದರು. ಬೇರೆ ಊರುಗಳಿಂದ ನೆಂಟರನ್ನು ಆಹ್ವಾನಿಸಿ ಹಬ್ಬವನ್ನು ಸಡಗರದಿಂದ ಆಚರಿಸಿದರು. ಆಟೋಗಳವರು ರಥ ಸಾಗುವ ಉದ್ದಕ್ಕೂ ರಸ್ತೆಗೆ ನೀರು ಹಾಕಿ ಧೂಳು ಬಾರದಂತೆ ಮುನ್ನೆಚ್ಚರಿಕೆ ಕೈಗೊಂಡರು. ರಥೋತ್ಸವಕ್ಕೆ ಆಗಮಿಸುವ ಸಾರ್ವಜನಿಕರಿಗೆ ಉದ್ಯಮಿಗಳು ಮಾರ್ಗದುದ್ದಕ್ಕೂ ಕುಡಿಯುವ ನೀರು, ಮಜ್ಜಿಗೆ, ಪಾನಕ, ಮೊಸರನ್ನ, ಬಾತ್, ಪುಳಿಯೋಗರೆ ವಿತರಿಸಿದರು.

ಮಧ್ಯಾಹ್ನ 1 ಗಂಟೆಗೆ ಸರಿಯಾಗಿ ಮುಜರಾಯಿ ಅಧಿಕಾರಿಯೂ ಆದ ತಹಸೀಲ್ದಾರ್ ರಮೇಶ್ ಬಾಬು ರಥಕ್ಕೆ ಪೂಜಿಸುವ ಮೂಲಕ 75 ಅಡಿ ಎತ್ತರದ ದಿವ್ಯ ರಥೋತ್ಸವಕ್ಕೆ ಚಾಲನೆ ನೀಡಿದರು. ಪುರುಷರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರೇ ರಥವನ್ನು ಎಳೆಯುವುದು ಇಲ್ಲಿನ ವಿಶೇಷವಾಗಿದೆ. ಜನಪದ ಕಲಾತಂಡಗಳು, ಗಾಡಿಗೊಂಬೆ, ಗೊರವರ ಕುಣಿತಗಳೊಂದಿಗೆ ಪಂಡಿತ್ ರಾಮಚಂದ್ರ ಅವರ ತಂಡದಿಂದ ನಾದಸ್ವರ ವಾದನ, ಕೇರಳದ ಚಂಡೆಮದ್ದಳೆ, ಬ್ಯಾಂಡ್, ದೇವಸ್ಥಾನದಿಂದ ಹೊರಟ ರಥವು ಮುಖ್ಯ ರಸ್ತೆಯಲ್ಲಿ ಸಾಗಿತು.

ಜಿಲ್ಲಾ ಸಂಪರ್ಕ ರಸ್ತೆಯಲ್ಲಿ ಸಂಚರಿಸಬೇಕಾಗಿದ್ದ ಎಲ್ಲಾ ವಾಹನಗಳನ್ನೂ ಪೊಲೀಸರು ಬದಲಿ ರಸ್ತೆಯಲ್ಲಿ ಸಂಚರಿಸುವಂತೆ ಮಾಡಿದ್ದರಿಂದ ಯಾವುದೇ ಅಡ್ಡಿಯಿಲ್ಲದೆ ರಥೋತ್ಸವ ಸಾಂಗವಾಗಿ ಜರುಗಿತು. ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಸುತ್ತಲೂ ಪ್ರದಕ್ಷಿಣೆ ಹಾಕಿದ ನಂತರ ಬಂದ ಮಾರ್ಗದಲ್ಲಿಯೇ ದೇವಸ್ಥಾನಕ್ಕೆ ಎಳೆದೊಯ್ಯಲಾಯಿತು. ಅಂಗಡಿಗಳವರು ಹಾಗೂ ಗ್ರಾಮದ ನಿವಾಸಿಗಳು ರಥಕ್ಕೆ ಪೂಜೆ ಸಲ್ಲಿಸಿ ತಮ್ಮ ಭಕ್ತಿಭಾವ ಮೆರೆದರು. ನವ ದಂಪತಿಗಳು ಹಣ್ಣು ಧವನ ಎಸೆದು ಕೃತಾರ್ಥರಾದರು.

ಲೋಕಸಭಾ ಚುನಾವಣೆ: ಕೆ.ಶಿವರಾಂಗೆ ಬಿಜೆಪಿ ಟಿಕೆಟ್ ನೀಡಲು ಒತ್ತಾಯ



ಕೆ.ಶಿವರಾಂ

ಚಾಮರಾಜನಗರ, ಫೆ.24– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಮೀಸಲು ಕ್ಷೇತ್ರದಿಂದ ಬಿಜೆಪಿ ವರಿಷ್ಠರು ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂ ಅವರಿಗೆ ಟಿಕೆಟ್ ನೀಡಬೇಕು ಎಂದು ಛಲವಾದಿ ಮಹಾಸಭಾ ರಾಜ್ಯ ಸಂಘಟನಾ ಕಾರ್ಯದರ್ಶಿ ಎಂ.ಹಂಸರಾಜು ಒತ್ತಾಯಿಸಿದರು. ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಕೆ.ಶಿವರಾಂ ಅವರು ಅಧಿಕಾರಿಯಾಗಿದ್ದ ಸಂದರ್ಭದಲ್ಲಿ ಕ್ರಾಂತಿಕಾರಿ ಕೆಲಸ ಮಾಡಿದ್ದಾರೆ. ಅನೇಕ ಚುನಾವಣೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಕೆಲಸ ಮಾಡಿದ್ದಾರೆ. ಸಮಾಜದಲ್ಲಿ ನೊಂದವರ ಪರ ಕೆಲಸ ಮಾಡಬೇಕು ಎಂಬ ಅಭಿಲಾಷೆಯೊಂದಿಗೆ ಚುನಾವಣೆಗೆ ಬಂದಿದ್ದಾರೆ ಅವರಿಗೆ ಬಿಜೆಪಿ ಪಕ್ಷದ ವರಿಷ್ಠರು ಅವಕಾಶ ಮಾಡಿಕೊಡುವ ಮೂಲಕ ಕ್ಷೇತ್ರದ ಅಭಿವೃದ್ಧಿಗಾಗಿ ಕಾರಣೀಭೂತರಾಗಬೇಕು ಎಂದು ಮನವಿ ಮಾಡಿದರು.

ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಲ್ಲಿ ಕೆ.ಶಿವರಾಂ ಪರ ಉತ್ತಮ ವಾತಾವರಣ ಇದ್ದು, ಕ್ಷೇತ್ರ ಪ್ರವಾಸದಲ್ಲಿ ಜನತೆ ನೀವು ಟಿಕೆಟ್ ತೆಗೆದುಕೊಂಡು ಬನ್ನಿ, ಗೆಲ್ಲಿಸಿಕೊಡುತ್ತೇನೆ ಎಂದು ಹೇಳುತ್ತಿದ್ದಾರೆ. ಅವರು ಸಂಸದರಾದರೆ ಮಾದರಿ ಕ್ಷೇತ್ರವನ್ನಾಗಿ ಮಾಡಲಿದ್ದಾರೆ ಎಂದು ತಿಳಿಸಿದರು.

ನಿಂಗರಾಜು ಮಾತನಾಡಿ, ಕೆ.ಶಿವರಾಂ ಅವರು ಚಾಮರಾಜನಗರ ಜಿಲ್ಲೆಯ ಮಗನಾಗಿದ್ದು, ಐಎಎಸ್ ಅಧಿಕಾರಿಯಾಗಿ ರಾಜ್ಯಾದ್ಯಂತ ಹೆಸರುಗಳಿಸಿದ್ದಾರೆ ಅನೇಕ ಜನಪರ ಕೆಲಸಗಳನ್ನು ಮಾಡಿದ್ದಾರೆ. ಇಂತಹ ಸಾಮಾಜಿಕ ಕಳಕಳಿಯುಳ್ಳ ವ್ಯಕ್ತಿಗೆ ಈ ಬಾರಿಯಾದರೂ ಬಿಜೆಪಿ ವರಿಷ್ಠರು ಅವಕಾಶ ಮಾಡಿಕೊಟ್ಟಲ್ಲಿ ಕ್ಷೇತ್ರದಲ್ಲಿ ಬಿಜೆಪಿ ಉಳಿಸಿಕೊಳ್ಳಬಹುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಛಲವಾದಿ ಮಹಾಸಭಾ ಮಾಜಿ ಜಿಲ್ಲಾಧ್ಯಕ್ಷ ಉತ್ತಂಬಳ್ಳಿ ಬಸವಣ್ಣ, ಮೈಸೂರು ಜಿಲ್ಲಾಧ್ಯಕ್ಷ ಅಭಿನಾಗ ಭೂಷಣ್, ರಾಜೇಂದ್ರ, ಶಿವಲಿಂಗಯ್ಯ ಹಾಜರಿದ್ದರು.

ಸಂವಿಧಾನ ಜಾಗೃತಿ ಸ್ತಬ್ಧಚಿತ್ರ

ಚಾಮರಾಜನಗರ ಜಿಲ್ಲೆಗೆ ಬಹುಮಾನ



ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಬಹುಮಾನ ಸ್ವೀಕರಿಸಿದರು.

ಚಾಮರಾಜನಗರ, ಫೆ.24– ಅತ್ಯುತ್ತಮ ಸಂವಿಧಾನ ಜಾಗೃತಿ ಸ್ತಬ್ಧಚಿತ್ರಕ್ಕಾಗಿ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರಿಂದ ಬಹುಮಾನ ಸ್ವೀಕರಿಸಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಇಂದು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಸಂವಿಧಾನ ಮತ್ತು ರಾಷ್ಟ್ರೀಯ ಐಕ್ಯತಾ ಸಮಾವೇಶ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಬಹುಮಾನವಾಗಿ ಜಿಲ್ಲಾಧಿಕಾರಿಗಳಿಗೆ ಒಂದು ಲಕ್ಷ ರೂ. ಚೆಕ್ ಮತ್ತು ಸ್ಮರಣಿಕೆ ವಿತರಿಸಿದರು.

ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ ಅವರೊಂದಿಗೆ ಬಹುಮಾನ ಸ್ವೀಕರಿಸಿದರು. ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ್ ಈ ಸಂದರ್ಭದಲ್ಲಿ ಇದ್ದರು.

ಸಮಾವೇಶದ ವೇದಿಕೆಯಲ್ಲಿ ಗಣ್ಯರ ಮುಂದೆ ಚಾಮರಾಜನಗರದ ಕೇಂದ್ರೀಯ ವಿದ್ಯಾಲಯದ ಎರಡನೇ ತರಗತಿ ವಿದ್ಯಾರ್ಥಿ ತೇಜಸ್ ಚಕ್ರವರ್ತಿ ಸಂವಿಧಾನದ ಅಧ್ಯಾಯಗಳನ್ನು ನಿರರ್ಗಳವಾಗಿ ಹೇಳಿ ಮೆಚ್ಚುಗೆ ಪಡೆದರು. ಸಭೆಯಲ್ಲಿದ್ದ ಗಣ್ಯರು, ಸಭಿಕರು ಎದ್ದು ನಿಂತು ಸುದೀರ್ಘವಾಗಿ ಕರತಾಡನದ ಮೂಲಕ ತೇಜಸ್ ಚಕ್ರವರ್ತಿ ಅವರನ್ನು ಪ್ರಶಂಸಿಸಿದರು.

ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಕುಳಿತಿರುವ ಪ್ರತಿಮೆ, ಸಂವಿಧಾನ ಪೀಠಿಕೆಯನ್ನು ಪುಸ್ತಕದ ಮಾದರಿಯಲ್ಲಿ ಪ್ರದರ್ಶನ ಸೇರಿದಂತೆ ಮಹತ್ತರ ಸಂದೇಶ, ಕೊಡುಗೆಗಳು, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಇನ್ನಿತರ ವೈಶಿಷ್ಟ್ಯಗಳನ್ನು ಒಳಗೊಂಡಂತೆ ಚಾಮರಾಜನಗರ ಜಿಲ್ಲೆಯು ಸಂವಿಧಾನ ಜಾಗೃತಿ ಸ್ತಬ್ಧ ಚಿತ್ರವನ್ನು ಆಕರ್ಷಕವಾಗಿ ವಿನ್ಯಾಸಗೊಳಿಸಿ ರೂಪಿಸಿತ್ತು.

ಮಾ.30, ಸಾಮೂಹಿಕ ವಿವಾಹ

ಚಾಮರಾಜನಗರ ಫೆ.24 ತಾಲೂಕಿನ ಚಂದಕವಾಡಿ ಗ್ರಾಮದಲ್ಲಿರುವ ಶ್ರೀ ಶನೇಶ್ವರಸ್ವಾಮಿಯವರ 33ನೇ ವರ್ಷದ ಆರಾಧನಾ ಮಹೋತ್ಸವದ ಅಂಗವಾಗಿ 36 ಜೋಡಿ ವಿವಾಹ ಮಹೋತ್ಸವವನ್ನು ಮಾ.30ಕ್ಕೆ ಏರ್ಪಡಿಸಲಾಗಿದೆ.

ಈ ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ವಧು–ವರರಿಗೆ ಉಚಿತವಾಗಿ ವಸ್ತ್ರ, ಮಾಂಗಲ್ಯ, ಕಾಲುಂಗುರಗಳನ್ನು ನೀಡಲಾಗುವುದು. ಈ ವಿವಾಹ ಮಹೋತ್ಸವಕ್ಕೆ ಜಾತಿ ಭೇದವಿಲ್ಲದೆ ಯಾವುದೇ ಜಾತಿಯ ವಧು–ವರರು ಭಾಗವಹಿಸಬಹುದಾಗಿದೆ. ವಧುವಿಗೆ 18 ವರ್ಷ, ವರನಿಗೆ 21 ವರ್ಷ ಕಡ್ಡಾಯವಾಗಿ ಆಗಿರಬೇಕು, ಹೆಸರು ನೋಂದಾವಣಿಗೆ ಮಾ.9 ಕಡೆಯ ದಿನವಾಗಿರುತ್ತದೆ,

ಇದಲ್ಲದೆ ಅದೇ ದಿನ ದೇವಸ್ಥಾನದಲ್ಲಿ ಹಿಂದೂ ಸಂಪ್ರದಾಯದಂತೆ ವಿಶೇಷ ಪೂಜೆ, ಹೋಮ ಹವನ ಹಾಗೂ ಶ್ರೀ ಶನೇಶ್ವರ ಸ್ವಾಮಿಯ ಆರಾಧನಾ ಮಹೋತ್ಸವವು ನಡೆಯಲಿದೆ. ಮಾ30ರಂದು ಬೆಳಿಗ್ಗೆ 9 ಗಂಟೆಗೆ ನವಗ್ರಹಗಳ ಕಳಶ ಹಾಗೂ ಶ್ರೀ ಸ್ವಾಮಿಯವರ ಉತ್ಸವ ಮೂರ್ತಿಯ ಪಲ್ಲಕ್ಕಿ ಮೆರವಣಿಗೆ ಕಥಾಕಾಲಕ್ಷೇಪ ಬಳಿಕ ಸಾಮೂಹಿಕ ವಿವಾಹ ನಂತರ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ದೇವಸ್ಥಾನದ ಅಧ್ಯಕ್ಷ ಸಿ.ಎಲ್. ರಂಗರಾಮು, ಕಾರ್ಯದರ್ಶಿ ಪುರುಷೋತ್ತಮ್, ಸೆಲ್ವಂ ನಾಗೇಂದ್ರ ಕೋರಿದ್ದಾರೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: 8277647617, 9742116207 ಸಂಪರ್ಕಿಸಬಹುದು.

ವಿಜೃಂಭಣೆಯ ನಾರಾಯಣಸ್ವಾಮಿ ರಥೋತ್ಸವ



ಕೊಳ್ಳೇಗಾಲದಲ್ಲಿ ನಾರಾಯಣಸ್ವಾಮಿ ರಥೋತ್ಸವವು ವಿಜೃಂಭಣೆಯಿಂದ ಜರುಗಿತು.

ಕೊಳ್ಳೇಗಾಲ, ಫೆ24– ಕೊಳ್ಳೇಗಾಲ ಪಟ್ಟಣದಲ್ಲಿ ನಾರಾಯಣಸ್ವಾಮಿ ರಥೋತ್ಸವವು ಶನಿವಾರ ವಿಜೃಂಭಣೆಯಿಂದ ನೆರವೇರಿತು.

ಶನಿವಾರ ಬೆಳಗ್ಗೆ 9 ಗಂಟೆಗೆ ಸರಿಯಾಗಿ ಮೀನ ಲಗ್ನದಲ್ಲಿ ರಥೋತ್ಸವಕ್ಕೆ ಪೂಜೆ ಸಲ್ಲಿಸಿದ ಬಳಿಕ ಚಾಲನೆ ದೊರೆಯಿತು. ಇದಕ್ಕೂ ಮುನ್ನ ಉತ್ಸವ ಮೂರ್ತಿಗೆ ವಿಧಿ, ವಿಧಾನಗಳೊಂದಿಗೆ ಪೂಜೆ ಸಲ್ಲಿಸಲಾಯಿತು. ಬಳಿಕ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿ ರಥೋತ್ಸವಕ್ಕೆ ಮಂಗಳವಾದ್ಯ ಸಮೇತ ಚಾಲನೆ ನೀಡಲಾಯಿತು.

ರಥೋತ್ಸವದಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ, ಮಾಜಿ ಶಾಸಕರುಗಳಾದ ಎನ್. ಮಹೇಶ್, ಜಿ.ಎನ್.ನಂಜುಂಡಸ್ವಾಮಿ, ಎಸ್. ಬಾಲರಾಜು, ಕೆಪಿಸಿಸಿ ಕಾರ್ಮಿಕ ವಿಭಾಗದ ಕಾರ್ಯದರ್ಶಿ ಜಿ.ಸಿ.ಕಿರಣ್, ದೇವಾಂಗ ಪೇಟೆಯ ಯುವ ಮುಖಂಡ ಗಿರೀಶ್ ಬಾಬು, ಮ.ಬೆಟ್ಟ ಮಾಜಿ ಧರ್ಮದರ್ಶಿ ಕೊಪ್ಪಾಳಿ ಮಹದೇವನಾಯಕ, ನಗರಸಭೆ ಮಾಜಿ ಅಧ್ಯಕ್ಷೆ ರೇಖಾ ರಮೇಶ್, ನಗರಸಭೆ ಸದಸ್ಯ ಎ.ಪಿ.ಶಂಕರ್, ಮಾನಸ ಪ್ರಭುಸ್ವಾಮಿ, ಮಾಜಿ ಸದಸ್ಯ ನರಸಿಂಹನ್, ಬಸವರಾಜು, ತಹಸಿಲ್ದಾರ್ ಮಂಜುಳ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಮುಖಂಡರಾದ ಸ್ವಾಮಿ ನಂಜಪ್ಪ, ಮಹದೇವಸ್ವಾಮಿ ಇನ್ನಿತರರು ಭಾಗವಹಿಸಿದರು

ಭೀಮನಗರ ಸೇರಿದಂತೆ ಕೊಳ್ಳೇಗಾಲದ ಹಲವೆಡೆ ತೇರಿನ ಹಬ್ಬದ ಸಂಭ್ರಮ ಮನೆ ಮಾಡಿತ್ತು. ಭಕ್ತಾದಿಗಳಿಗೆ ತಮ್ಮ ತಮ್ಮ ಮನೆಗಳಿಗೆ ಕರೆದು ಆತಿಥ್ಯ ನೀಡುವ ವಾಡಿಕೆ(ಸಂಪ್ರದಾಯ) ಶನಿವಾರವೂ ಸಹಾ ಮುಂದುವರೆಯಿತು. ಶನಿವಾರ ಸಂಜೆ ನಾರಾಯಣಸ್ವಾಮಿ ದೇಗುಲದಲ್ಲಿ ದೂಳಿ ಉತ್ಸವ ಸಾಂಗವಾಗಿ ನೆರವೇರಿತು.

ಬಾಳೆಹಣ್ಣಲ್ಲಿ ಮೋದಿ ಮುಂದಿನ ಪ್ರಧಾನಿ: ನಾರಾಯಣಸ್ವಾಮಿ ದಿವ್ಯ ರಥೋತ್ಸವದಲ್ಲಿ ಪಾಲ್ಗೊಂಡ ಭಕ್ತ ಸತೀಶ್ ಎಂಬುವರು 'ಮುಂದಿನ ಪ್ರಧಾನಿ ಮೋದಿ 3.0' ಎಂದು ಬಾಳೆಹಣ್ಣಿನಲ್ಲಿ ಬರೆದು, ಹಣ್ಣು, ಜವನ ಸಮೇತ ತೇರಿಗೆ ಎಸೆದು ಗಮನ ಸೆಳೆದಿದ್ದಾರೆ. ಅದೇ ರೀತಿಯಲ್ಲಿ ಮತ್ತೋರ್ವ ಅಭಿಮಾನಿ 'ಕಾಟೇರ ಸಿನಿಮಾ ನೂರು ದಿನ ಪೂರೈಸಲಿದೆ' ಎಂದು ಹಣ್ಣಿನಲ್ಲಿ ಬರೆದು ತೇರಿಗೆಸೆದಿದ್ದಾರೆ. ನವ ದಂಪತಿಗಳು ಸಹಾ ಪಾಲ್ಗೊಂಡು ತಮ್ಮ ಹರಕೆ ಸಲ್ಲಿಸಿದ್ದಾರೆ

ಮಾ.3, ಪ್ರವೇಶ ಪರೀಕ್ಷೆ

ಚಾಮರಾಜನಗರ: ತಾಲೂಕಿನ ಮಲ್ಲಯ್ಯನಪುರದ ಆದರ್ಶ ವಿದ್ಯಾಲಯದ 6ನೇ ತರಗತಿ ಪ್ರವೇಶ ಪರೀಕ್ಷೆ ಮಾ.3ರಂದು ನಡೆಯಲಿದೆ ವಿದ್ಯಾರ್ಥಿಗಳು ಹಾಗೂ ಪೋಷಕರು ವೆಬ್‌ಸೈಟ್ www.schooleducation.kar.nic.in or www.vidyavahini.karnataka.gov.inನಲ್ಲಿ ಪ್ರವೇಶ ಪತ್ರ ಪಡೆಯಬಹುದು. ಮಾಹಿತಿಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಅಥವಾ ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರು (ಮೊ.ಸಂ:8217008446) ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಬಿಜೆಪಿ–ಜೆಡಿಎಸ್ ಮತಗಳ ಒಗ್ಗೂಡಿಸಲು ಉತ್ತರ ಪ್ರದೇಶದ ರಾಧಾ ಮೋಹನ್ ದಾಸ್ ಅಗರವಾಲ್‌ಗೆ ಉಸ್ತುವಾರಿ

ಬೆಂಗಳೂರು, ಫೆ.24(ಕೆಎಂಶಿ)– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮತಗಳನ್ನು ಒಗ್ಗೂಡಿಸುವುದು ಹಾಗೂ ಸಮನ್ವಯತೆ ಕಾಪಾಡುವ ಸಲುವಾಗಿ ಉತ್ತರಪ್ರದೇಶ ಬಿಜೆಪಿ ಹಿರಿಯ ನಾಯಕ ರಾಧಾ ಮೋಹನ್ ದಾಸ್ ಅಗರವಾಲ್ ಅವರನ್ನು ಪಕ್ಷದ ವರಿಷ್ಠರು ನೇಮಕ ಮಾಡಿದ್ದಾರೆ.



ಸಮನ್ವಯತೆ ಸಾಧಿಸುವ ಜೊತೆಗೆ ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಚುನಾವಣಾ ಹೊಣೆಗಾರಿಕೆ ಉಸ್ತುವಾರಿಯೂ ಇವರದ್ದೇ ಆಗಿದೆ.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಆಪ್ತರಾಗಿರುವ ಅಗರವಾಲ್, ಅಲ್ಲಿನ ಚುನಾವಣೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು.

ಕರ್ನಾಟಕದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಭಾರಿ ಹಿನ್ನಡೆ ಆದ ಕಾರಣ ಈ ಬಾರಿ ಎಚ್ಚೆತ್ತ ವರಿಷ್ಠರು ಚುನಾವಣಾ ನಿಪುಣರೊಬ್ಬರನ್ನು ನಿಯೋಜಿಸಿದ್ದಾರೆ. ಅವರು ಈಗಾಗಲೇ ಬಿಜೆಪಿಯ ರಾಜ್ಯ ಮುಖಂಡರೊಂದಿಗೆ ಎರಡು ಸಭೆಗಳನ್ನು ನಡೆಸಿ ಚುನಾವಣಾ ಸಿದ್ಧತೆ ಹಾಗೂ ಜೆಡಿಎಸ್ ಜೊತೆಗಿನ ಸಮನ್ವಯತೆ ಬಗ್ಗೆ ಚರ್ಚೆ ಮಾಡಿದ್ದಾರೆ. ಪ್ರತಿ ಕ್ಷೇತ್ರದ ಮುಖಂಡರು ಮತ್ತು ಕಾರ್ಯಕರ್ತರಿಂದ ಸದ್ಯದ ಪರಿಸ್ಥಿತಿಯ ಮಾಹಿತಿ ಪಡೆದುಕೊಂಡು ರಾಜ್ಯ ಬಿಜೆಪಿ ಕಚೇರಿಯಲ್ಲೇ ಕ್ಷೇತ್ರವಾರು ಸಭೆಗಳನ್ನು ನಡೆಸುತ್ತಿದ್ದಾರೆ. ಕರ್ನಾಟಕದಲ್ಲಿ 28 ಕ್ಷೇತ್ರವನ್ನು ಗೆಲ್ಲುವ ಸಾಧ್ಯತೆ ನಮಗಿದೆ, ಸಮನ್ವಯತೆ ಮತ್ತು ಒಗ್ಗಟ್ಟಿನಿಂದ ಕೆಲಸ ಮಾಡಿದರೆ ನಮ್ಮ ಗುರಿ ಮುಟ್ಟಬಹುದಾಗಿದೆ ಎಂದು ತಿಳಿಸಿದ್ದಾರೆ. ಜೆಡಿಎಸ್, ಎನ್‌ಡಿಎ ಮೈತ್ರಿಕೂಟ ಸೇರಿದ ನಂತರ ರಾಜ್ಯ ಬಿಜೆಪಿಯಲ್ಲಿನ ಎರಡನೇ ಸಾಲಿಗೆ ಸೇರಿದ ಕೆಲವು ಮುಖಂಡರು ಅಪಸ್ವರ ಎತ್ತಿದ್ದರು.

ಪಕ್ಷದಲ್ಲೇ ಅಪಸ್ವರ ಏಳುತ್ತಿದ್ದಂತೆ ಎಚ್ಚರಗೊಂಡ ವರಿಷ್ಠರು, ಸಮನ್ವಯತೆ ಹಾಗೂ ಚುನಾವಣಾ ಸಿದ್ಧತೆ ನಡೆಸಲು ಅಗರವಾಲ್ ಅವರನ್ನು ನಿಯೋಜಿಸಿದ್ದಾರೆ.

ಒಂದನೇ ಪುಟದಿಂದ

ಅಧಿಕಾರವಿರಬೇಕು: ಸಿಎಂ ಪ್ರತಿಪಾದನೆ

ಸೌಧವನ್ನು ಧ್ವಂಸ ಮಾಡುತ್ತಾರೆ ಎಂದು ಡಾ.ಅಂಬೇಡ್ಕರ್ ಹೇಳಿದ್ದರು. ಸಂವಿಧಾನ ಯಶಸ್ವಿಯಾಗಲು ಅಧಿಕಾರ ಯಾರ ಕೈಯಲ್ಲಿ ಇದೆ ಎನ್ನುವುದು ಮುಖ್ಯ.

ಅಧಿಕಾರವು ಸಮಾನತೆ, ಮಾನವ ಸಮಾಜ ನಿರ್ಮಾಣದ ಪರವಾಗಿರುವವರ ಕೈಯಲ್ಲಿದ್ದರೆ ಸಂವಿಧಾನ ಯಶಸ್ವಿಯಾಗುತ್ತದೆ, ಸಂವಿಧಾನಕ್ಕೆ ವಿರುದ್ಧವಾಗಿರುವವರ ಕೈಯ್ಯಲ್ಲಿ ಅಧಿಕಾರವಿದ್ದರೆ ಉಳಿಗಾಲವಿಲ್ಲ, ಸಂವಿಧಾನದ ಆಶಯಗಳು ಈಡೇರಲು ಸಂವಿಧಾನದ ಪರವಾಗಿರುವವರ ಕೈಯ್ಯಲ್ಲಿ ಅಧಿಕಾರವಿರಬೇಕು ಎಂದರು.

ಈ ವರ್ಷದ ಜನವರಿ 26ರಿಂದ ರಾಜ್ಯದಲ್ಲಿ ಸಂವಿಧಾನ ಜಾಥಾ ಹಮ್ಮಿಕೊಳ್ಳಲಾಗಿದೆ. 31 ಜಿಲ್ಲೆಗಳಲ್ಲಿ ಸಂವಿಧಾನದ ಉದ್ದೇಶ, ಅಗತ್ಯ, ಅನಿವಾರ್ಯತೆಯನ್ನು ಜನರಿಗೆ ತಿಳಿಸುವ ಕೆಲಸ ಮಾಡಲಾಗಿದೆ. ಎರಡು ದಿನಗಳ ಕಾಲ ರಾಷ್ಟ್ರೀಯ ಏಕತೆ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದರು. ಎಲ್ಲರೂ ಸಂವಿಧಾನ ಅಧ್ಯಯನ ಮಾಡಬೇಕು. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಮಿತಿ ಅಧ್ಯಕ್ಷರಾಗಿ ಅನೇಕ ದೇಶಗಳ ಸಂವಿಧಾನ ಅಧ್ಯಯನ ಹಾಗೂ ಅರ್ಥ ಮಾಡಿಕೊಂಡು ದೇಶದ ಸಮಸ್ಯೆಗಳಿಗೆ ಪರಿಹಾರ ಸೂಚಿಸುವಂತಹ ಸಂವಿಧಾನ ರಚಿಸಿದ್ದಾರೆ. ಭಾರತದ ಸಂವಿಧಾನ ಅತ್ಯಂತ ಶ್ರೇಷ್ಠ ಸಂವಿಧಾನವಾಗಿದೆ ಎಂದರು.

ಅತ್ಯುತ್ತಮ ಚಟುವಟಿಕೆ ಆಯೋಜಿಸಿದ ತುಮಕೂರು, ದಾವಣಗೆರೆ, ಮೈಸೂರು, ಕೊಡಗು, ಬಳ್ಳಾರಿ ಜಿಲ್ಲೆಗಳಿಗೆ ಬಹುಮಾನ ಹಾಗೂ ನೆನಪಿನ ಕಾಣಿಕೆ ವಿತರಿಸಲಾಯಿತು.

ಕಣಿಯನಹುಂಡಿ ರೈತ ಸಾವು

ಕುಟುಂಬ ಬೀದಿಪಾಲಾಗುತ್ತದೆ ಎಂದು ಹೆದರಿದ್ದಾರೆ. ಆದರೆ ಅಧಿಕಾರಿಗಳು ಮಾತ್ರ ಮಾನವೀಯತೆ ಮರೆತು ವರ್ತಿಸುತ್ತಿದ್ದಾರೆ. ಸರ್ಕಾರವೂ ನಿರ್ಲಕ್ಷ ಮಾಡುತ್ತಿದೆ. ಈಗಾಗಲೇ ಗುರುತಿಸಿರುವ ಮೀಸಲು ಅರಣ್ಯ ಪ್ರದೇಶಕ್ಕೆ ಒಳಪಡದಿದ್ದರೂ ಅನಗತ್ಯವಾಗಿ ಕಿರುಕುಳ ನೀಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಹೆಚ್.ಡಿ.ಕೋಟೆ ತಹಶೀಲ್ದಾರ್, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ, ಪರಿಹಾರ ಪ್ರಕ್ರಿಯೆಯ ಭರವಸೆ ನೀಡಿ, ಸಮಾಧಾನಪಡಿಸಿದರು. ನಂತರ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಿ, ದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಈ ಸಂಬಂಧ ಹೆಚ್.ಡಿ.ಕೋಟೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಯಾವುದೇ ನೋಟೀಸ್ ನೀಡಿಲ್ಲ: ಕಣಿಯನಹುಂಡಿ ರೈತರಿಗೆ ನಾವು ಯಾವುದೇ ನೋಟೀಸ್ ನೀಡಿಲ್ಲ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ. ಕಣಿಯನಹುಂಡಿ ಗ್ರಾಮದ ಸರ್ವೆ ನಂ.8, 115, 132, 156ರ ಒಟ್ಟು 465 ಎಕರೆ ಪ್ರದೇಶವನ್ನು 'ಮೀಸಲು ಅರಣ್ಯ ಪ್ರದೇಶ'ವನ್ನಾಗಿ ಮಾಡಲು ಸರ್ಕಾರ, ನಿವೃತ್ತ ಉಪವಿಭಾಗಾಧಿಕಾರಿಯನ್ನು ಅರಣ್ಯ ವ್ಯವಸ್ಥಾಪನಾಧಿಕಾರಿಯನ್ನಾಗಿ ನೇಮಿಸಿದ್ದು, ಅವರು ರೈತರು ಹಾಗೂ ಸಾರ್ವಜನಿಕರ ಅಹವಾಲು, ಕ್ಲೇಮುಗಳನ್ನು ಸ್ವೀಕರಿಸಲು ಘೋಷಣೆ ಹೊರಡಿಸಿ 3 ತಿಂಗಳೊಳಗಾಗಿ ಜಮೀನುಗಳಿಗೆ ಸಂಬಂಧಿಸಿದ ದಾಖಲೆ ಒದಗಿಸುವಂತೆ ತಿಳಿಸಿದ್ದಾರೆ. ಈ ಪ್ರಕ್ರಿಯೆ ಯಾವುದೇ ರೀತಿಯಲ್ಲಿ ಅರಣ್ಯ ಇಲಾಖೆ ವ್ಯಾಪ್ತಿಗೆ ಒಳಪಡುವುದಿಲ್ಲ. ಅಲ್ಲದೆ ಅರಣ್ಯ ಇಲಾಖೆಯಿಂದ ಯಾವುದೇ ನೋಟೀಸ್ ನೀಡಿಲ್ಲ. ರೈತರು ಅನಗತ್ಯ ಗೊಂದಲಕ್ಕೊಳಗಾಗದೆ ಕ್ಲೇಮುಗಳಿಗೆ ಸಂಬಂಧಿಸಿದ ದಾಖಲೆ ಸಲ್ಲಿಸಬಹುದಾಗಿದೆ ಎಂದು ಮೈಸೂರು ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸ್ಪಷ್ಟಪಡಿಸಿದ್ದಾರೆ. ಆದರೆ ದಿಢೀರ್ ಸರ್ವೆ ಕಾರ್ಯ ಆರಂಭಿಸಿ, ಜಮೀನಿಗೆ ಸಂಬಂಧಿಸಿದ ದಾಖಲೆ ಸಲ್ಲಿಸಲು ಸೂಚನೆ ನೀಡಿರುವುದು ರೈತರಲ್ಲಿ ಆತಂಕ ಹೆಚ್ಚಿಸಿದೆ. ಒಂದಲ್ಲಾ ಒಂದು ಕಾರಣ ನೀಡಿ, ನಮ್ಮ ಜಮೀನುಗಳನ್ನು ಕಿತ್ತುಕೊಳ್ಳಬಹುದು ಎಂದು ಹೆದರಿದ್ದಾರೆ. ಅಧಿಕಾರಿಗಳ ಈ ನಡೆಗೆ ಗಿರೀಗೌಡರು ಬಲಿಯಾಗಿದ್ದಾರೆ ಎಂದು ರೈತ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಟ್ರಾಫಿಕ್ ಸಿಗ್ನಲ್ ಲೈಟ್ ಅಳವಡಿಕೆ ಆರಂಭ

ವೃತ್ತ ಹಾಗೂ ಸಾತಗಳ್ಳಿ ಬಸ್ ಡಿಪೋ ಜಂಕ್ಷನ್ ಒಳಗೊಂಡ ಪಟ್ಟಿ ನೀಡಿದ್ದರು. ಸಂಚಾರ ಪೊಲೀಸರ ಬೇಡಿಕೆ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ, ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿ ಸಿಗ್ನಲ್ ಲೈಟ್ ಅಳವಡಿಸಲು ಮುಂದಾಗಿತ್ತು. ಸಂಚಾರ ಪೊಲೀಸರು ಸೂಚಿಸಿದ್ದ ಜಂಕ್ಷನ್‌ಗಳಲ್ಲಿ ಯೋಜನೆ ಅನುಷ್ಠಾನಗೊಳಿಸಲು ಟೆಂಡರ್ ಮೂಲಕ ಗುತ್ತಿಗೆದಾರರಿಗೆ ವರ್ಕ್ ಆರ್ಡರ್ ನೀಡಲಾಗಿತ್ತು. ಅತ್ಯುತ್ಸಾಹದಲ್ಲಿ ಗುತ್ತಿಗೆದಾರ ಅಗತ್ಯ ಸಲಕರಣೆಗಳನ್ನು ತಂದು, ನೆಲ ಅಗೆದು ಕೆಲಸ ಆರಂಭಿಸಿದ್ದರು. ಆದರೆ ಅನುದಾನ ಕೊರತೆಯಿಂದ ಪಾಲಿಕೆ ಮುಂಗಡ ಹಣ ಪಾವತಿಸದ ಕಾರಣಕ್ಕೆ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿದ್ದರು.

ಯೋಜಿತ ರೀತಿಯಲ್ಲಿ ನಡೆದಿದ್ದರೆ ಕಳೆದ ಡಿಸೆಂಬರ್‌ನಲ್ಲೇ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಿ, ಕಾರ್ಯಾರಂಭ ಮಾಡಬೇಕಿತ್ತು. ಆದರೆ ಈ ಉದ್ದೇಶಕ್ಕೆ ಹಂಚಿಕೆಯಾಗಿದ್ದ ಅನುದಾನವನ್ನು ಇತರೆ ಅಭಿವೃದ್ಧಿಗೆ ಬಳಸಿದ್ದರಿಂದ ವಿಳಂಬವಾಯಿತು ಎಂಬುದು ಪಾಲಿಕೆ ಅಧಿಕಾರಿಯೊಬ್ಬರು ಹೇಳಿದ್ದಾರೆ. ಕಾಮಗಾರಿ ವಿಳಂಬವಾದ ಕಾರಣಕ್ಕೇ ನಿಗದಿತ ಅನುದಾನ ವಾಪಸ್ಸಾಗಿತ್ತು ಎನ್ನುವುದು ಮತ್ತೊಬ್ಬರ ವಾದ. ಹೀಗೆ ಅಧಿಕಾರಿಗಳು ತರಹೇವಾರಿ ಕಾರಣ ಅಥವಾ ನೆಪಗಳನ್ನು ಹೇಳುತ್ತಾರೆ.

ನಗರದಲ್ಲಿರುವ 52 ಸಿಗ್ನಲ್ ಲೈಟ್‌ಗಳ ಜೊತೆಗೆ ಇದೀಗ ಹೆಚ್ಚುವರಿಯಾಗಿ 10 ಸಿಗ್ನಲ್ ಲೈಟ್ ಅಳವಡಿಸುವ ಕಾಮಗಾರಿ ಆರಂಭಿಸಲಾಗಿದೆ. ಕೆಲವೆಡೆ ಕಬ್ಬಿಣದ ಕಂಬಗಳನ್ನು ನಿಲ್ಲಿಸಲಾಗಿದ್ದು, ಹಲವೆಡೆ ರಸ್ತೆ ಬದಿಯಲ್ಲಿಡಲಾಗಿದೆ. ಟ್ರಾಫಿಕ್ ಸಿಗ್ನಲ್ ಲೈಟ್ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳಿಗಾಗಿ ಬಿಡುಗಡೆಯಾಗಿದ್ದ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯ 41 ಕೋಟಿ ರೂ. ಅನುದಾನ ಖಾಲಿಯಾಗಿದ್ದು, ಇದೀಗ ಬಾಕಿ ಕಾಮಗಾರಿಗೆ ಇನ್ನೂ 41 ಕೋಟಿ ರೂ. ಹಣ ತುರ್ತಾಗಿ ಬೇಕಾಗಿದೆ ಎಂದು ಪಾಲಿಕೆ ಮೂಲಗಳು ತಿಳಿಸಿವೆ. ಸದ್ಯ ಇದೇ ನೆಪವೊಡ್ಡಿ ಇನ್ನಷ್ಟು ವಿಳಂಬ ಮಾಡದಿದ್ದರೆ ಒಳ್ಳೆಯದು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್ ಕಾಮಗಾರಿ ಕುಂಠಿತವಾಗಿರುವ ಬಗ್ಗೆ ಸಂಚಾರ ಪೊಲೀಸ್ ಅಧಿಕಾರಿಗಳು ಪ್ರಸ್ತಾಪಿಸಿದಾಗ ಅನುದಾನ ವಾಪಸ್ ಹೋಗಿದೆ ಎಂದು ಪಾಲಿಕೆ ಅಧಿಕಾರಿಗಳು ಸಮಜಾಯಿಷಿ ನೀಡಿದ್ದರು. ಆ ವೇಳೆ ಡಿಸಿ ಅನುದಾನದಲ್ಲೇ ಹಣ ನೀಡುತ್ತೇನೆ. ಮೊದಲು ಕೆಲಸ ಪೂರ್ಣಗೊಳಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಡಾ.ಕೆ.ವಿ.ರಾಜೇಂದ್ರ ಅವರು ಪಾಲಿಕೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಕಾಮಗಾರಿ ಕ್ರಮ, ಸಮಯ ಸೂಕ್ತವಲ್ಲ...


ಅಥವಾ ಓರ್ವ ಪೊಲೀಸ್ ಸಿಬ್ಬಂದಿಯೂ ಇಲ್ಲಿರಲಿಲ್ಲ ಎನ್ನುವುದು ವಿಪರ್ಯಾಸ. ವ್ಯವಸ್ಥಿತ ಮೈಸೂರಿನಲ್ಲಿ ಈ ರೀತಿಯ ಅವ್ಯವಸ್ಥಿತ ಕ್ರಮಗಳೇನು ಹೊಸತಲ್ಲ. ಸ್ವಚ್ಛತಾ ನೌಕರರು ರಾತ್ರಿ ವೇಳೆ ಕಾರ್ಯ ನಿರ್ವಹಿಸುತ್ತಾರೆ. ಆದರೆ ಅಧಿಕಾರಿಗಳಿಗೆ ಈ ಸಾಮಾನ್ಯ ಜ್ಞಾನವಿಲ್ಲ. ರಾತ್ರಿ ವೇಳೆ ವಾಹನ ಸಂಚಾರ ತೀರಾ ಕಡಿಮೆ ಇರುವಾಗ ಈ ರೀತಿಯ ಕಾಮಗಾರಿಗಳನ್ನು ನಡೆಸಬಹುದು. ಆದರೆ ರಸ್ತೆ ಡಾಂಬರೀಕರಣ, ಪೈಪ್‌ಲೈನ್ ಇದೀಗ ಟ್ರಾಫಿಕ್ ಸಿಗ್ನಲ್ ಲೈಟ್ ಕಾಮಗಾರಿ ಎಲ್ಲವೂ ಸಂಚಾರ ದಟ್ಟಣೆ ನಡುವೆಯೇ ಆಗಬೇಕೇ?. ಈ ಬಗ್ಗೆ ಗುತ್ತಿಗೆದಾರರಿಗೆ ಸೂಚನೆ ನೀಡಬೇಕೆಂಬುದು ಅಧಿಕಾರಿಗಳಿಗೆ ತಿಳಿದಿಲ್ಲವೇ?. ಸೂಕ್ತ ಸಮಯದಲ್ಲಿ, ಎಲ್ಲಾ ಮುಂಜಾಗ್ರತಾ ಕ್ರಮಗಳೊಂದಿಗೆ ವ್ಯವಸ್ಥಿತವಾಗಿ ಕಾಮಗಾರಿ ನಡೆಸುವಂತೆ ಈಗಲಾದರೂ ಎಚ್ಚರಿಕೆ ನೀಡುವರೇ? ನೋಡೋಣ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಪರಿಷತ್ ಸದಸ್ಯ ವಿಶ್ವನಾಥ್ ಕುರಿತಾದ ಪುಸ್ತಕ ಬಿಡುಗಡೆ

ವಿಶ್ವನಾಥ್ ರಣಹದ್ದಲ್ಲ ಅಪ್ಪಟ ಹಳ್ಳಿಹಕ್ಕಿ: ಸಿಪಿಕೆ

ಮೈಸೂರು,ಫೆ.24(ಎಂಟಿವೈ)– ಸಾಹಿತಿ–ರಾಜಕಾರಣಿ, ಹಳ್ಳಿಹಕ್ಕಿ ಅಡಗೂರು ಹೆಚ್.ವಿಶ್ವನಾಥ್ ಹದ್ದು ಅಥವಾ ರಣಹದ್ದು ಅಲ್ಲ. ಇದ್ದಿದ್ದನ್ನು ಇದ್ದಂಗೆ ನೇರವಾಗಿ ಹೇಳುವ ಅಪ್ಪಟ ಹಳ್ಳಿಹಕ್ಕಿ ಎಂದು ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ತಾರಾ ಪ್ರಕಾಶನ, ಶಫರ್ಡ್ ಇಂಡಿಯಾ ಇಂಟರ್‌ನ್ಯಾಷನಲ್ ಸಂಸ್ಥೆಯ ಸಹಯೋಗದಲ್ಲಿ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಡಾ.ಎನ್.ವಾಸಯ್ಯ ಅವರ 'ಹಳ್ಳಿಹಕ್ಕಿ ಅಡಗೂರು ವಿಶ್ವನಾಥ್ ಅವರ ಸಾಹಿತ್ಯ ಮತ್ತು ರಾಜಕಾರಣ' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಹಳ್ಳಿಹಕ್ಕಿ ಎಂಬುದಕ್ಕೆ ಅನ್ವರ್ಥಕವಾಗಿ ವಿಶ್ವನಾಥ್ ಕೆಲಸ ಮಾಡಿಕೊಂಡು ಬಂದಿದ್ದಾರೆ. ಇವರು ಮೂಲತಃ ಸಾಹಿತಿ–ರಾಜಕಾರಣಿ. ಆತ್ಮಕಥನ ಸೇರಿ 7 ಕೃತಿ ರಚಿಸಿರುವ ವಿಶ್ವನಾಥ್ ಆಕಸ್ಮಿಕವಾಗಿ ರಾಜಕಾರಣಕ್ಕೆ ಬಂದಿದ್ದಾರೆ. ರಾಜಕಾರಣಿಯಾಗಿ 7 ಕೃತಿ ರಚಿಸುವುದು ಸಾಮಾನ್ಯ ಕೆಲಸವಲ್ಲ. ಇವುಗಳೆಲ್ಲ ಮನೋಯೋಗ್ಯ ಕೃತಿಗಳು. ಹಳ್ಳಿಹಕ್ಕಿ ಎಂಬುದು ಪ್ರಭಾವಿತ ಸಂಕಥನ. ರಾಜಕಾರಣಕ್ಕೆ ಬಂದಿದ್ದು ಒಳ್ಳೆಯದೇ ಆಗಿದೆ. ಇವರು ಕೇವಲ ರಾಜಕಾರಣಿಯಾಗಿರದೇ ಸ್ಟೇಟ್‌ಮನ್ ಆಗಿದ್ದಾರೆ. ರಾಜಕಾರಣದಲ್ಲಿ ರಾಜನೀತಿಯನ್ನು ಪ್ರತಿಪಾದಿಸಿದ್ದಾರೆ. ರಾಜನೀತಿ ತಜ್ಞ, ಮುತ್ಸದ್ದಿಯೂ ಆಗಿದ್ದಾರೆ ಎಂದರು.



ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ವಿಮರ್ಶಕ ಡಾ.ಎನ್.ವಾಸಯ್ಯ ರಚಿಸಿರುವ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಕುರಿತ 'ಹಳ್ಳಿಹಕ್ಕಿ ಅಡಗೂರು ವಿಶ್ವನಾಥ್ ಅವರ ಸಾಹಿತ್ಯ ಮತ್ತು ರಾಜಕಾರಣ' ಕುರಿತ ಪುಸ್ತಕವನ್ನು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಬಿಡುಗಡೆ ಮಾಡಿದರು.

ರಾಜಕೀಯ ಇದೀಗ ಕಲುಷಿತವಾಗಿದೆ. ಪರಿಶುದ್ಧ ಮಾಡುವ ಕೆಲಸವನ್ನು ವಿಶ್ವನಾಥ್‌ರಂತಹ ರಾಜಕಾರಣಿಗಳು ಮಾಡಬೇಕು. ಇಂದು ವಿವಿಧ ಕಾರಣಗಳಿಂದ ದೇಶ ಹೊತ್ತಿ ಉರಿಯುತ್ತಿದೆ. ಬಹುತೇಕರಿಗೆ ರಾಜಕೀಯ ರಂಗ ಕೊನೆಯ ಹಂತ. ಆದರೆ, ಕೆಲವರಿಗೆ ಇದುವೇ ಮೊದಲ ಆದ್ಯತೆ. ರಾಜಕಾರಣಿಗಳು ಮೊದಲು ಸಾರ್ವಜನಿಕ ಆಧ್ಯಾತ್ಮೀಕರಣವಾಗಬೇಕು. ಈ ದೆಸೆಯಲ್ಲಿ ರಾಜಕೀಯ ಧುರೀಣರು ಸಾಗಬೇಕು. ಸಾಹಿತ್ಯ ಪರಿಧಿಯೊಳಕ್ಕೆ ರಾಜಕಾರಣಿಗಳನ್ನು ಸೇರಿಸಿಕೊಳ್ಳಬೇಕು ಎಂದರು.

ಪ್ರಸ್ತುತ ಸಂದರ್ಭದಲ್ಲಿ ಸಾಹಿತ್ಯ ಕ್ಷೇತ್ರದಲ್ಲೂ ರಾಜಕಾರಣ ಕಂಡು ಬರುತ್ತಿದೆ. ಸಾಹಿತಿಗಳಲ್ಲಿ ಅನೇಕರು ರಾಜಕಾರಣಿಯಾಗಿದ್ದಾರೆ. ಅವರು ವೃತ್ತಿಪರ ರಾಜಕಾರಣಿಗಳನ್ನು ಮೀರಿಸುತ್ತಿದ್ದಾರೆ. ಆದರೆ ರಾಜಕಾರಣಿಗಳಲ್ಲಿ ಸಾಹಿತಿಗಳು ವಿರಳ. ಅವರಲ್ಲಿ ಮಾಜಿ ಮುಖ್ಯಮಂತ್ರಿ ಡಾ.ಎಂ.ವೀರಪ್ಪ ಮೊಯ್ಲಿ ಹಾಗೂ ಎ.ಹೆಚ್.ವಿಶ್ವನಾಥ್ ಸೇರಿದ್ದಾರೆ.

ದೇಶದ ರಾಜಕೀಯ ಸಂಸ್ಕೃತಿ ಹಾಳಾಗುತ್ತಿದೆ: ಪ್ರಗತಿಪರ ಚಿಂತಕ ಡಾ.ಬಂಜಗೆರೆ ಜಯಪ್ರಕಾಶ ಮಾತನಾಡಿ, ಹಣಬಲ, ತೋಳ್ಬಲಗಳ ಮಧ್ಯದಲ್ಲಿ ಪ್ರಜಾಪ್ರಭುತ್ವದ ಸೌಂದರ್ಯತೆ ಅವನತಿ ಹೊಂದುತ್ತಿದೆ. ಮಿಲಿಯನ್‌ಗಟ್ಟಲೆ ದುಡ್ಡು ಇರುವವರು, ಕಪ್ಪುಹಣ ಉಳ್ಳವರು ರಾಜಕೀಯ ಪ್ರವೇಶ ಮಾಡಿದ್ದಾರೆ. ಎದುರಿಗೆ ಇರುವವರನ್ನು ಟೀಕೆ ಮಾಡುವಾಗ ಜನನಾಯಕರು ಯೋಗ್ಯವಲ್ಲದ ಭಾಷೆಯನ್ನು ಬಳಸುತ್ತಿದ್ದಾರೆ. ಇದರಿಂದ ದೇಶದ ರಾಜಕೀಯ ಸಂಸ್ಕೃತಿ ನಾಶವಾಗುತ್ತಿದೆ. 2000ನೇ ಇಸವಿಯ ನಂತರ ರಾಜಕೀಯ ನಿರೂಪಣೆಯನ್ನು ಧರ್ಮೋರಾಜಕಾರಣ ಸಂಘಟನೆಗಳು ಮಾಡತೊಡಗಿವೆ. ಆದ್ಯತೆಗಳಲ್ಲದ ವಿಷಯಗಳನ್ನು ವೈಭವೀಕರಿಸುತ್ತಾ, ಗತಕಾಲದಲ್ಲೇ ಮೈಮರೆಯುವಂತಹ ಸ್ಥಿತಿ ನಿರ್ಮಾಣವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ದೇಶದಲ್ಲಿ ಮಾದರಿ ರಾಜಕಾರಣ ಮಾಡಿದಂತಹ ವ್ಯಕ್ತಿಗಳನ್ನು ಕುರಿತು ಅಧ್ಯಯನಾತ್ಮಕ ಪುಸ್ತಕಗಳು ಬರಬೇಕಿದೆ. ಇದರಿಂದ ಮುಂದಿನ ಪೀಳಿಗೆಯ ರಾಜಕಾರಣಿಗಳಿಗೆ ರಾಜಕೀಯ ಕಲಿಕೆಗೆ ಹಾಗೂ ಶಿಕ್ಷಣಕ್ಕೆ ಅನುಕೂಲವಾಗುತ್ತದೆ ಎಂದರು.

ವಿಶ್ವನಾಥ್ ಕೃತಿಗಳು ವಿಮರ್ಶೆ ಆಗಬೇಕು: ಸಾಹಿತಿ ಶುಭದ ಪ್ರಸಾದ್ ಮಾತನಾಡಿ, ಕನ್ನಡದ ಸಾಹಿತ್ಯ ಲೋಕದಲ್ಲಿ ವಿಶ್ವನಾಥರ ಕೃತಿಗಳು ಹೆಚ್ಚು ವಿಮರ್ಶೆ ಆಗಿಲ್ಲ. ಆತ್ಮಕಥನ ಸೇರಿದಂತೆ 7 ಕೃತಿ ರಚಿಸಿದ್ದರೂ ಕೃತಿಯಲ್ಲಿನ ಗುಣ–ದೋಷದ ಬಗ್ಗೆ ವಿಮರ್ಶೆ ಆಗಿಲ್ಲ. ಕೇವಲ ವದಂತಿ ಬಗ್ಗೆ ಹೆಚ್ಚು ಪ್ರಚಾರವಾಗಿದೆ. ವಿಶ್ವನಾಥ್ ತರುಣ ವಯಸ್ಸಿನಲ್ಲೇ ಹಳ್ಳಿಹಕ್ಕಿ ಹಾಡು ಆತ್ಮಕಥೆ ಮೂಲಕ ಕರ್ನಾಟಕದ ರಾಜಕೀಯ ಚರಿತ್ರೆಯನ್ನು ಕಟ್ಟಿಕೊಡುವ ಕೆಲಸ ಮಾಡಿದ್ದಾರೆ. ಆತ್ಮಕಥನದಲ್ಲಿ ತಮ್ಮ ಅಕ್ಕ ಪಕ್ಕದವರ ಬಗ್ಗೆಯೂ ಬರೆಯಬೇಕಾಗುತ್ತದೆ. ಇಂತಹ ಸವಾಲಿನ ಕೆಲಸ ಹಾಗೂ ವಿವಾದ ಮೈಮೇಲೆ ಎಳೆದುಕೊಳ್ಳಲು ಬಹುತೇಕರು ಮುಂದಾಗುವುದಿಲ್ಲ.

> 15ನೇ ಶತಮಾನದಲ್ಲಿಯೇ ಕುಮಾರವ್ಯಾಸನು ರಾಜಕಾರಣವನ್ನು ರಣಹದ್ದುಗಳಿಗೆ ಹೋಲಿಕೆ ಮಾಡಿದ್ದನು. ಈಗಲೂ ಆತನ ಹೇಳಿಕೆ ಪ್ರಸ್ತುತವಾಗಿದೆ. ದೇಶದ ಇಂದಿನ ಸ್ಥಿತಿಯು ಹೀಗೆ ಮುಂದುವರೆದರೆ ಚುನಾವಣೆ, ಪ್ರಜಾಪ್ರಭುತ್ವ ಮರೆಯಾಗಿ ಸರ್ವಾಧಿಕಾರಿ ಆಡಳಿತ ಬರಬಹುದು. ಪಕ್ಷ ರಾಜಕಾರಣ ಮರೆಯಾಗುತ್ತಿದೆ. ವ್ಯಕ್ತಿ– ವ್ಯಕ್ತಿಗತ ರಾಜಕಾರಣ ವೈಭವೀಕರಿಸುತ್ತಿದೆ.
>
> -ಅಡಗೂರು ಹೆಚ್.ವಿಶ್ವನಾಥ್, ವಿಧಾನಪರಿಷತ್ ಸದಸ್ಯ

ಆದರೆ, ವಿಶ್ವನಾಥ್ ಅವರು ಆತ್ಮಕಥನದಲ್ಲಿ ರಾಜ್ಯದ ರಾಜಕೀಯ ವ್ಯವಸ್ಥೆಯ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಇದರಿಂದ ಕೆಲವು ವಿವಾದಗಳೂ ಹುಟ್ಟಿಕೊಂಡವು. ವಿಶ್ವನಾಥ್ ಅವರ ಪುಸ್ತಕಗಳು ಅನ್ಯಭಾಷೆಗೆ ಭಾಷಾಂತರಗೊಳ್ಳಬೇಕು. ಸೂಕ್ತ ವಿಮರ್ಶೆಯಾಗಿ, ವಿಶ್ವನಾಥ ರಾಜಕಾರಣಕ್ಕೆ ಕೊಟ್ಟ ಕೊಡುಗೆಗಳ ದಾಖಲೀಕರಣ ಆಗಬೇಕು ಎಂದು ಅಭಿಪ್ರಾಯಪಟ್ಟರು.

ಪತ್ರಕರ್ತ ಬಿ.ಎಂ.ಹನೀಫ್ ಮಾತನಾಡಿ, ವಿಶ್ವನಾಥ್ ವರ್ಣರಂಜಿತ ರಾಜಕಾರಣಿ. ಅರಸು ಅಂತಃಕರಣ, ವೀರೇಂದ್ರ ಪಾಟೀಲರಂತೆ ನೇರ–ನಡೆ ನುಡಿ, ಕೃಷ್ಣರಂತಹ ಡಿಪ್ಲೋಮಸಿ ಅವರಲ್ಲಿದೆ. ಜನಾನುರಾಗಿ, ಹಾಸ್ಯ ಪ್ರಜ್ಞೆಯ ರಾಜಕಾರಣಿ. ಆಡಳಿತದಲ್ಲಿ ನಿಷ್ಠುರತೆ ಮೈಗೂಡಿಸಿ ಕೊಂಡ ಅಪರೂಪದ ವ್ಯಕ್ತಿತ್ವವುಳ್ಳ ವ್ಯಕ್ತಿ. ದೃಷ್ಟಿಕೋನರಹಿತವಾಗುತ್ತಿರುವ ಇಂದಿನ ರಾಜಕಾರಣದಲ್ಲಿ ವಿಶ್ವನಾಥ್ ಅವರು ಸಚಿವರಾಗಿದ್ದ ಸಮಯದಲ್ಲಿ ಸಮಾಜಕ್ಕೆ ಬೇಕಾಗಿದ್ದ ಮೌಲ್ಯಯುತ ಯೋಜನೆಗಳನ್ನು ಜಾರಿಗೆ ತಂದರು ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಕಸಾಪ ಮಾಜಿ ಜಿಲ್ಲಾಧ್ಯಕ್ಷ ಎಂ.ಚಂದ್ರಶೇಖರ್, ಕೃತಿಕಾರ ಡಾ.ಎನ್.ವಾಸಯ್ಯ ಉಪಸ್ಥಿತರಿದ್ದರು.

ಅನಿಮೀಯ ಮುಕ್ತ ಭಾರತಕ್ಕಾಗಿ 1–19 ವಯಸ್ಸಿನ ಮಕ್ಕಳಿಗೆ ಜಂತುಹುಳು ನಿವಾರಣಾ ಮಾತ್ರೆ ನೀಡುವುದು ಕಡ್ಡಾಯ

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಕಾರ್ಯಕ್ರಮ

ಮೈಸೂರು, ಫೆ.24(ಎಂಟಿವೈ)– ಅನಿಮೀಯ ಮುಕ್ತ ಭಾರತ ನಿರ್ಮಾಣಕ್ಕಾಗಿ 1–19 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಜಂತುಹುಳು ನಿವಾರಣಾ ಮಾತ್ರೆ ಕೊಡಿಸಬೇಕು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಸಲಹೆ ನೀಡಿದ್ದಾರೆ.

ಮೈಸೂರಿನ ಮಹಾರಾಣಿ ಪದವಿ ಪೂರ್ವ ಕಾಲೇಜಿನಲ್ಲಿ ಶನಿವಾರ ಜಿ.ಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರಿಗೆ ಮಾತ್ರೆ ನೀಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಮೀಕ್ಷೆಯಂತೆ ಶಾಲೆಗಳಲ್ಲಿರುವ ವಿದ್ಯಾರ್ಥಿಗಳಲ್ಲಿ ಶೇ.30ರಿಂದ 35ರಷ್ಟು ವಿದ್ಯಾರ್ಥಿಗಳಲ್ಲಿ ಅನಿಮೀಯ ಸಮಸ್ಯೆ ಇರುವುದು ಕಂಡು ಬಂದಿದೆ. ಈ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ 1ರಿಂದ 19 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ವರ್ಷಕ್ಕೆ ಎರಡು ಬಾರಿ ಜಂತುಹುಳು ನಿವಾರಕ 'ಅಲ್ಬೆಂಡಾಜೋಲ್' ಮಾತ್ರೆ ನೀಡಲಾಗುತ್ತಿದೆ.



ಮೈಸೂರಿನ ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶನಿವಾರ ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಂಗವಾಗಿ ವಿದ್ಯಾರ್ಥಿನಿಯರಿಗೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಜಂತುಹುಳು ನಿವಾರಣಾ ಮಾತ್ರೆ ನೀಡಿದರು.

1ರಿಂದ 2 ವರ್ಷದ ಮಕ್ಕಳಿಗೆ 200 ಎಂಜಿ ಮಾತ್ರೆ(ಅರ್ಧ), 2ರಿಂದ 19 ವರ್ಷದೊಳಗಿನವರಿಗೆ 400 ಎಂಜಿ ಮಾತ್ರೆಯನ್ನು ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ಮೊದಲ ಹಂತದಲ್ಲಿ ಪದವಿಪೂರ್ವ ಕಾಲೇಜು ಹಾಗೂ ಐಟಿಐ, ಡಿಪ್ಲೊಮ ಕಾಲೇಜು, ತಾಂತ್ರಿಕ ಕಾಲೇಜುಗಳ 68,485 ವಿದ್ಯಾರ್ಥಿಗಳಿಗೆ ಮೊದಲ ಹಂತದಲ್ಲಿ ಇಂದಿನಿಂದ ನಾಲ್ಕು ದಿನ ವಿಶೇಷ ಅಭಿಯಾನ ನಡೆಸಿ, ಅಲ್ಬೆಂಡಾಜೋಲ್ ಮಾತ್ರೆ ನೀಡಲಾಗುತ್ತಿದೆ.

ಈ ನಾಲ್ಕು ದಿನದಲ್ಲಿ ಯಾರಾದರೂ ಮಾತ್ರೆ ಪಡೆದುಕೊಳ್ಳದಿದ್ದರೆ, ಅಂತಹವರ ಪಟ್ಟಿ ಮಾಡಿ ಫೆ.28ರಂದು ಮಾಪ್ ಅಪ್ ರೌಂಡ್‌ನಲ್ಲಿ ಮಾತ್ರೆ ನೀಡಲಾಗುತ್ತದೆ. ಈ ಅಭಿಯಾನಕ್ಕೆ 836 ಸಿಬ್ಬಂದಿಗಳನ್ನು ಬಳಸಿಕೊಳ್ಳಲಾಗುತ್ತಿದೆ ಎಂದರು.

ಜಂತುಹುಳುಗಳ ಸಮಸ್ಯೆಯಿಂದಾಗಿ ಮಕ್ಕಳಲ್ಲಿ ರಕ್ತಹೀನತೆ ಕಂಡು ಬರುತ್ತಿದೆ. ಹೊಟ್ಟೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜಂತು ಹುಳುಗಳಿದ್ದರೆ ದೇಹ ಹಾಗೂ ರಕ್ತದಲ್ಲಿರುವ ಪೋಷಕಾಂಶಗಳನ್ನು ತಿನ್ನುತ್ತವೆ. ಇದರಿಂದ ರಕ್ತಹೀನತೆ ಉಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಹಿಮೋಗ್ಲೋಬಿನ್ ಪರೀಕ್ಷೆ ಮಾಡಿಸಲಾಗುತ್ತಿದೆ. ಇದರಿಂದ ಮಕ್ಕಳಲ್ಲಿರುವ ಹೆಚ್‌ಪಿ ಪ್ರಮಾಣ ಪತ್ತೆ ಮಾಡಿ, ಕಡಿಮೆಯಿದ್ದವರಿಗೆ ಸೂಕ್ತ ಚಿಕಿತ್ಸೆ ಕೊಡಿಸಲು ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಜಂತುಹುಳು ಸಮಸ್ಯೆಯಿಂದ ಮಕ್ಕಳಲ್ಲಿ ಹೊಟ್ಟೆನೋವು ಕಾಣಿಸಿಕೊಳ್ಳುತ್ತದೆ. ಏಕಾಗ್ರತೆ, ಗ್ರಹಿಕಾ ಶಕ್ತಿ ಕಡಿಮೆಯಾಗುತ್ತದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಕಲಿಕೆ ಆಸಕ್ತಿ ಕಡಿಮೆಯಾಗುತ್ತದೆ. ದೈಹಿಕ ಬೆಳವಣಿಗೆಯೂ ಕುಂಠಿತವಾಗುತ್ತದೆ. ಈ ಹಿನ್ನೆಲೆಯಲ್ಲಿ ಜಂತುಹುಳು ಸಮಸ್ಯೆ ನಿವಾರಣೆಗೆ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ ಹಿಮೋಗ್ಲೋಬಿನ್ ಪರೀಕ್ಷೆ ಮಾಡಿಸಲಾಗುತ್ತಿದೆ. ಜಂತುಹುಳ ಸಮಸ್ಯೆ ನಿವಾರಣೆಗಾಗಿ ಅಲ್ಬೆಂಡಾಜೋಲ್ ಮಾತ್ರೆ ತೆಗೆದುಕೊಳ್ಳುವುದಲ್ಲದೆ, ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಕೈಗಳ ಸ್ವಚ್ಛವಾಗಿಟ್ಟುಕೊಳ್ಳಬೇಕು. ಮನೆ ಸುತ್ತ ನೈರ್ಮಲ್ಯ ಕಾಪಾಡಿಕೊಳ್ಳಬೇಕು. ಶುದ್ಧ ನೀರಿನ ಸೇವನೆ ಮಾಡಬೇಕು. ಆಹಾರ ಪದಾರ್ಥಗಳನ್ನು ಮುಚ್ಚಿಡಬೇಕು. ಹಣ್ಣು, ತರಕಾರಿಗಳನ್ನು ಶುದ್ಧ ನೀರಿನಲ್ಲಿ ತೊಳೆದು ಬಳಸಬೇಕು. ಶೌಚಾಲಯಕ್ಕೆ ಹೋಗಿ ಬಂದಾಗ ಕೈ–ಕಾಲನ್ನು ಸಾಬೂನಿನಿಂದ ತೊಳೆಯಬೇಕು. ಪಾದರಕ್ಷೆ ಬಳಸುವುದು, ಶೌಚಾಲಯ ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಆರ್‌ಸಿಹೆಚ್ ಅಧಿಕಾರಿ ಡಾ.ಜಯಂತ್, ಡಿಡಿಪಿಯು ಮರಿಸ್ವಾಮಿ, ತಾಲೂಕು ಆರೋಗ್ಯ ಅಧಿಕಾರಿ ಡಾ.ಪುಟ್ಟತಾಯಮ್ಮ, ಜಿಲ್ಲಾ ಆರೋಗ್ಯ ಶಿಕ್ಷಣ ಅಧಿಕಾರಿ ಮುನೀಂದ್ರಮ್ಮ, ಆರ್‌ಬಿಎಸ್‌ಕೆ ವೈದ್ಯಾಧಿಕಾರಿಗಳು, ತಾಲೂಕು ಮಟ್ಟದ ಮೇಲ್ವಿಚಾರಕರು ಹಾಗೂ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪ್ರಧಾನಿ ಮೋದಿ, ನನ್ನನ್ನು ಬೈಯ್ಯಲು ಸಂತೋಷ್‌ಲಾಡ್‌ಗೆ ಕಾಂಗ್ರೆಸ್ ಟಾರ್ಗೆಟ್ ಕೊಟ್ಟಿದೆ

ಹುಬ್ಬಳ್ಳಿ, ಫೆ.24– ಸಚಿವ ಸಂತೋಷ್ ಲಾಡ್, ವಾರದಲ್ಲಿ ಮೂರು ಬಾರಿ ಪ್ರಧಾನಿ ನರೇಂದ್ರ ಮೋದಿ, ಎರಡು ಬಾರಿ ಪ್ರಹ್ಲಾದ್ ಜೋಶಿಗೆ ಬೈಯ್ಯಬೇಕೆಂದು ಕಾಂಗ್ರೆಸ್ ಪಕ್ಷ ಅವರಿಗೆ ಟಾರ್ಗೆಟ್ ನೀಡಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ತಿರುಗೇಟು ನೀಡಿದರು.



ನಗರದಲ್ಲಿಂದು ಲೋಕಸಭಾ ಚುನಾವಣೆ ನಿಮಿತ್ತವಾಗಿ ಪಕ್ಷದ ಅಧಿಕೃತ ಕಾರ್ಯಾಲಯ ಉದ್ಘಾಟಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಂತೋಷ್‌ಲಾಡ್ ಟೀಕೆ ಮಾಡಬೇಕೆಂಬ ವಿಷಯವನ್ನು ಕಾಂಗ್ರೆಸ್ ನಾಯಕರೇ ನಮಗೆ ಹೇಳಿದ್ದಾರೆ. ಸಂತೋಷ್‌ಲಾಡ್ ನೀಡುವ ಹೇಳಿಕೆಯಲ್ಲಿ ಗಂಭೀರತೆ ಇದೆಯೇ ಎಂದು ಪ್ರಶ್ನೆ ಮಾಡಿದರು.

ಇಂದು ರಾಜ್ಯ ಸರ್ಕಾರ ಒಂದು ಲಕ್ಷ 90 ಸಾವಿರ ಕೋಟಿ ಸಾಲ ಮಾಡಿದೆ ಇಂದು ಸರ್ಕಾರ ಅಧೋಗತಿಗೆ ಹೋಗಿದೆ. ದೇವಸ್ಥಾನದ ಹುಂಡಿಗೆ ಕನ್ನ ಹಾಕುವ ಪಾಪದ ಕೆಲಸ ಸರ್ಕಾರ ಮಾಡಿದೆ. ದೇವಸ್ಥಾನದ ಹಣವನ್ನು ಸರ್ಕಾರ ನಿಂತು ಲೂಟಿ ಹೊಡೆಯುತ್ತಿದೆ ಎಂದು ಕಿಡಿಕಾರಿದರು.

ಹಿಂದೂಗಳ ಭಾವನೆಗೆ ಕಾಂಗ್ರೆಸ್ ಧಕ್ಕೆ ತಂದಿದ್ದಾರೆ. ಇದನ್ನು ಬಿಜೆಪಿ ತೀವ್ರವಾಗಿ ಖಂಡಿಸುತ್ತದೆ. ರಾಜ್ಯಾದ್ಯಂತ ಈ ವಿಷಯವಾಗಿ ಹೋರಾಟ ಮಾಡಲಾಗುವುದು. ಹುಬ್ಬಳ್ಳಿಯಲ್ಲಿ ರಾಷ್ಟ್ರಕ್ಕೆ ಮಾದರಿಯ ಹೋರಾಟ ಮಾಡಲಾಗುವುದು ಎಂದರು.

ಕೆಲವರು ನನ್ನ ಮೇಲೆಸೆದ ಕಲ್ಲು, ಇಟ್ಟಿಗೆಯಿಂದಲೇ ಜಯದೇವ ಹೃದ್ರೋಗ ಸಂಸ್ಥೆಯನ್ನು ಕಟ್ಟಿದ್ದೇನೆ!

- ಮೈಸೂರು ಜಯದೇವ ಆಸ್ಪತ್ರೆಯಲ್ಲಿ ಅಭಿನಂದನೆ ಸ್ವೀಕರಿಸಿದ ನಂತರ ಡಾ. ಸಿ.ಎನ್.ಮಂಜುನಾಥ್ ಮನದ ಮಾತು
- ಆಸ್ಪತ್ರೆಯಲ್ಲಿ ಮುಂದೆಯೂ ಮಾನವತೆ, ಹೃದಯವಂತಿಕೆ ಚಿಕಿತ್ಸಾ ವಿಧಾನ ಮುಂದುವರೆಸಲು ಸಲಹೆ

ಮೈಸೂರು,ಫೆ.24(ಎಂಟಿವೈ)– ಜಯದೇವ ಹೃದ್ರೋಗ ಆಸ್ಪತ್ರೆ, ರೋಗಿಗಳ ಪಾಲಿಗೆ ಕಾಮಧೇನು–ಕಲ್ಪವೃಕ್ಷದಂತೆ ಆರೋಗ್ಯ ಸೇವೆ ನೀಡುತ್ತಿದ್ದು, ಕಳೆದ 18 ವರ್ಷಗಳಲ್ಲಿ ಶೇ.500ರಷ್ಟು ಪ್ರಗತಿ ಸಾಧಿಸಿದೆ. ಮುಂದೆಯೂ ಹೀಗೆ ಸೇವೆ ಮುಂದುವರೆಸಿಕೊಂಡು ಹೋಗಬೇಕು ಎಂದು ಜಯದೇವ ಹೃದ್ರೋಗ ಸಂಸ್ಥೆಯ ಮಾಜಿ ನಿರ್ದೇಶಕ ಪದ್ಮಶ್ರೀ ಡಾ.ಸಿ.ಎನ್.ಮಂಜುನಾಥ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಜಯದೇವ ಆಸ್ಪತ್ರೆಯಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ನಾನು 2006ರಲ್ಲಿ ಜಯದೇವ ಆಸ್ಪತ್ರೆಯ ನಿರ್ದೇಶಕನಾಗಿ ಅಧಿಕಾರ ವಹಿಸಿಕೊಂಡಾಗ, ಅದು ಹೂವಿನ ಹಾಸಿಗೆ ಆಗಿರಲಿಲ್ಲ. ನನ್ನ ಮೇಲೂ ಕೆಲವರು ಕಲ್ಲು, ಇಟ್ಟಿಗೆಯನ್ನು ಎಸೆದರು. ನಾನು ಧೃತಿಗೆಡದೆ ಅದೇ ಕಲ್ಲು, ಇಟ್ಟಿಗೆಯಿಂದ ಸಂಸ್ಥೆಯನ್ನು ಕಟ್ಟಿದ್ದೇವೆ. ಈ ಆಸ್ಪತ್ರೆಯನ್ನು ಪಂಚತಾರಾ ಹೋಟೆಲ್‌ನಂತೆ ನಿರ್ವಹಣೆ ಮಾಡಬೇಕು ಎಂಬ ಕನಸು ಕಂಡಿದ್ದೆ. ಯಾವುದೇ ಖಾಸಗಿ ಆಸ್ಪತ್ರೆಗೆ ಕಡಿಮೆ ಇಲ್ಲದಂತೆ ಜಯದೇವ ಆಸ್ಪತ್ರೆ ಮುನ್ನಡೆಸಬೇಕೆಂಬ ಹಂಬಲವಿತ್ತು. ಆ ಕನಸು ನನಸಾಗಿದೆ. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದೆ. ಜಯದೇವ ಆಸ್ಪತ್ರೆಯನ್ನು ಮಾದರಿಯಾಗಿಟ್ಟುಕೊಂಡು ಇತರೆ ಸರ್ಕಾರಿ ಆಸ್ಪತ್ರೆಗಳನ್ನು ನಿರ್ವಹಣೆ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಸಲಹೆ ನೀಡಿದ್ದಾರೆ. ಇದು ಜಯದೇವ ಆಸ್ಪತ್ರೆಗೆ ಸಿಕ್ಕ ಮನ್ನಣೆ ಎಂದರು.



ಜಯದೇವ ಹೃದ್ರೋಗ ಆಸ್ಪತ್ರೆಯ ಮಾಜಿ ನಿರ್ದೇಶಕರಾದ ಡಾ.ಸಿ.ಎನ್.ಮಂಜುನಾಥ್, ಪತ್ನಿ ಡಾ.ಅನುಸೂಯ ಮಂಜುನಾಥ್ ಅವರನ್ನು ಮೈಸೂರು ಜಯದೇವ ಆಸ್ಪತ್ರೆಯಲ್ಲಿ ಆತ್ಮೀಯವಾಗಿ ಅಭಿನಂದಿಸಲಾಯಿತು.

ನಾನು ಮೈಸೂರು ಜಯದೇವ ಆಸ್ಪತ್ರೆ ನಿರ್ಮಾಣ ಹಂತದಲ್ಲಿ 73 ಬಾರಿ ಭೇಟಿ ನೀಡಿ, ಪರಿಶೀಲಿಸಿ ನನ್ನ ಸ್ವಂತ ಮನೆಯ ಹಾಗೆ ಕಟ್ಟಿಸಿದ್ದೇನೆ. ಆಸ್ಪತ್ರೆಯ ಕಟ್ಟಡ ಉಪಕರಣಗಳಿಂದ ಮಾತ್ರ ಉತ್ತಮ ಚಿಕಿತ್ಸೆ ನೀಡಲು ಸಾಧ್ಯವಿಲ್ಲ. ಹೃದಯವಂತಿಕೆ ಇರಬೇಕು. ಅವಕಾಶ ಸಿಕ್ಕಾಗ ಜನರಿಗೆ ಎಷ್ಟು ಸಹಾಯ ಮಾಡಬೇಕೋ ಅಷ್ಟು ಮಾಡಬೇಕು. ನಾನು ನಿರ್ದೇಶಕನಾಗಿ, ವೈದ್ಯನಾಗಿ, ಇಂಜಿನಿಯರ್, ಕೌನ್ಸಿಲರ್ ಆಗಿ ಈ ಸಂಸ್ಥೆಯಲ್ಲಿ ಕೆಲಸ ಮಾಡಿದ್ದೇನೆ. ನಾವು ಎಲ್ಲವನ್ನು ಸಕಾರಾತ್ಮಕವಾಗಿ ನೋಡಬೇಕು. ಇಂದು ಸಂಬಂಧಗಳ ಕೊರತೆ ಇದೆ. ಸಂಬಂಧಗಳು ಸದಾ ಹಸಿರಾಗಿರಬೇಕು. ಬುದ್ಧಿವಂತಿಕೆ ಇದ್ದರೆ ಸಾಲದು, ಹೃದಯವಂತಿಕೆ ಇರಬೇಕು. ನಾವು ಮಾಡುವ ಕೆಲಸವನ್ನು ಪ್ರೀತಿಸಬೇಕು. ಸರ್ಕಾರಿ ಸೇವೆಯಿಂದ ನಿವೃತ್ತನಾಗಿದ್ದೇನೆ. ಟೀಕೆಗಳು ಸಾಯುತ್ತವೆ, ಸಾಧನೆಗಳು ಅಮರವಾಗಿ ಉಳಿಯುತ್ತವೆ ಎಂದು ಅಭಿಪ್ರಾಯಪಟ್ಟರು.

ಮೈಸೂರು ಜಯದೇವ ಆಸ್ಪತ್ರೆ ಕಳೆದ 13 ವರ್ಷಗಳಿಂದ ಡಾ.ಸದಾನಂದ್ ನೇತೃತ್ವದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದೆ. ಸಿಬ್ಬಂದಿ ಪ್ರೀತಿ, ವಿಶ್ವಾಸದಿಂದ ಕೆಲಸ ಮಾಡಿ, ರೋಗಿಗಳನ್ನು ದೇವರೆಂದು ತಿಳಿದು ತಾಯಿ ಹೃದಯದಿಂದ ಕೆಲಸ ಮಾಡಿ. ಇದುವರೆಗೆ ನನಗೆ ಸಹಕರಿಸಿದ ಎಲ್ಲಾ ಸರ್ಕಾರಗಳು, ಮುಖ್ಯಮಂತ್ರಿಗಳು ಸಿಬ್ಬಂದಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಇದೇ ವೇಳೆ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಪತಿ ಡಾ.ಶೇಖರ್, ಡಾ.ಅನುಸೂಯ ಮಂಜುನಾಥ್, ಮೈಸೂರು ಮೆಡಿಕಲ್ ಕಾಲೇಜಿನ ಡೀನ್ ಮತ್ತು ಡೈರೆಕ್ಟರ್ ಡಾ.ದಾಕ್ಷಾಯಿಣಿ, ವಿಶ್ರಾಂತ ಕುಲಪತಿ ಪ್ರೊ.ಕೆಎಸ್.ರಂಗಪ್ಪ ಹಾಸ್ಯ ಸಾಹಿತಿ ಪ್ರೊ.ಕೃಷ್ಣೇಗೌಡ, ಚಿಕ್ಕತಿಮ್ಮಯ್ಯ ಮಾತನಾಡಿದರು. ಕಾರ್ಯಕ್ರಮದಲ್ಲಿ ವೈದ್ಯರಾದ ಡಾ.ಕೆ.ಎಸ್. ಸದಾನಂದ್, ಡಾ.ದೇವರಾಜು, ಡಾ.ಶ್ವೇತಾ ಸದಾನಂದ್, ಡಾ. ಹರ್ಷ ಬಸಪ್ಪ ಡಾ. ಸಂತೋಷ್, ಡಾ.ವೀಣಾ ನಂಜಪ್ಪ ಡಾ. ಹೇಮಾ. ಎಸ್, ಡಾ. ಮಧು ಪ್ರಕಾಶ್, ಡಾ.ಭಾರತಿ, ಡಾ.ವಿಶ್ವನಾಥ್, ಡಾ.ಅಶ್ವಿನಿ, ಡಾ.ಜಯ ಪ್ರಕಾಶ್, ಡಾ.ಶ್ರೀನಿಧಿ ಹೆಗ್ಗಡೆ ಡಾ.ರಶ್ಮಿ ಆರ್.ಎಂ.ಓ. ಡಾ. ಪಶುಪತಿ, ನರ್ಸಿಂಗ್ ಅಧೀಕ್ಷಕ ಹರೀಶ್ ಕುಮಾರ್, ಪಿಆರ್‌ಒ ವಾಣಿ ಇನ್ನಿತರು ಉಪಸ್ಥಿತರಿದ್ದರು.

LTF ಯಶಸ್ವಿ ಕಾರ್ಯಾಚರಣೆ 77 ಚಿರತೆ ಸೆರೆ; 14 ಮರಿ ರಕ್ಷಣೆ

ಮೂಡಲಹುಂಡಿ ಎಂ.ಟಿ.ಯೋಗೇಶ್ ಕುಮಾರ್
ಮೊ.9880813195





ಚಿರತೆ ಹಾವಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಮೈಸೂರು ಭಾಗದಲ್ಲಿ ರಚಿಸಲಾದ ಚಿರತೆ ಕಾರ್ಯ ಪಡೆ (LTF) ನಿರೀಕ್ಷೆಗೂ ಮೀರಿ ಸಾಧನೆ ಮೆರೆದಿದೆ. ಒಂದು ಕಪ್ಪು ಮರಿ ಸೇರಿದಂತೆ 14 ಮರಿಗಳನ್ನು ತಾಯಿ ಮಡಿಲಿಗೆ ಸೇರಿಸಿದೆ. ಕಾರ್ಯಪಡೆ ಬಹುದೊಡ್ಡ ಸಾಧನೆ ಎಂದರೆ ವರ್ಷದಲ್ಲಿ ಜನ ವಸತಿ ಪ್ರದೇಶಕ್ಕೆ ಬಂದ 77 ಚಿರತೆಗಳನ್ನು ಸೆರೆ ಹಿಡಿದು, ರಕ್ಷಿಸಿ, ಸುರಕ್ಷಿತ ಅರಣ್ಯ ಪ್ರದೇಶಕ್ಕೆ ಬಿಡುಗಡೆ ಮಾಡಿರುವುದು.

ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಕಳೆದ ವರ್ಷ ಮೂವರು ಚಿರತೆಗೆ ಬಲಿಯಾದ ಹಿನ್ನೆಲೆಯಲ್ಲಿ ಸರ್ಕಾರ 2023ರ ಫೆಬ್ರವರಿಯಲ್ಲಿ ಚಿರತೆ ಕಾರ್ಯಪಡೆ(ಲೆಪರ್ಡ್ ಟಾಸ್ಕ್‌ಫೋರ್ಸ್) ರಚಿಸಿತು. ಜನ ವಸತಿ ಪ್ರದೇಶದಲ್ಲಿ ಉಪಟಳ ನೀಡುವ ಚಿರತೆಗಳನ್ನು ರಕ್ಷಿಸುವ ಕಾರ್ಯವನ್ನು ಇದಕ್ಕೆ ಒಪ್ಪಿಸಿತು. ಹೀಗೆ ರಚಿಸಲಾದ ಚಿರತೆ ಕಾರ್ಯಪಡೆ ಕೇವಲ ಮೈಸೂರು ಮಾತ್ರವಲ್ಲದೆ ಹಳೆ ಮೈಸೂರು ಭಾಗದ ಮಂಡ್ಯ, ಚಾಮರಾಜನಗರ, ಶಿವಮೊಗ್ಗ ಹಾಗೂ ಹಾಸನ ಜಿಲ್ಲೆಯಲ್ಲಿಯೂ ಚಿರತೆ ರಕ್ಷಣೆ ಕಾರ್ಯದಲ್ಲಿ ತೊಡಗಿಸಿಕೊಂಡಿದೆ.

77 ಚಿರತೆ ರಕ್ಷಣೆ: ವರ್ಷದ ಹಿಂದೆ ರಚಿಸಲಾದ ಚಿರತೆ ಕಾರ್ಯಪಡೆ ಇದುವರೆಗೂ 77 ಚಿರತೆಗಳನ್ನು ರಕ್ಷಣೆ ಮಾಡಿ, ಸುರಕ್ಷಿತವಾಗಿ ಅರಣ್ಯ ಪ್ರದೇಶದಲ್ಲಿ ಬಿಡುಗಡೆ ಮಾಡಿದೆ. ಮಾನವ-ವನ್ಯಜೀವಿ ಸಂಘರ್ಷದಲ್ಲಿ ಚಿರತೆ ರಕ್ಷಣೆಯೊಂದಿಗೆ ಕಟಾವಿನ ವೇಳೆ ಕಬ್ಬಿನ ಗದ್ದೆಯಲ್ಲಿ ಸಿಕ್ಕಿದ ಮರಿಗಳನ್ನು ಮತ್ತೆ ತಾಯಿ ಮಡಿಲಿಗೆ ಸೇರಿಸುವ ಮಹತ್ತರ ಕಾರ್ಯದ ಮೂಲಕ ಪ್ರಶಂಸೆಗೆ ಪಾತ್ರವಾಗಿದೆ. ಮೈಸೂರು ತಾಲೂಕಿನ ಆಯರಹಳ್ಳಿಯಲ್ಲಿ ಕಬ್ಬಿನ ಗದ್ದೆಯಲ್ಲಿ ಸಿಕ್ಕಿದ ಒಂದು ಕಪ್ಪು ಬಣ್ಣದ ಮರಿ ಸೇರಿದಂತೆ ಐದು ಪ್ರಕರಣಗಳಲ್ಲಿ 14 ಮರಿಗಳನ್ನು ತಾಯಿ ಮಡಿಲಿಗೆ ಸೇರಿಸುವ ಸ್ತುತ್ಯಾರ್ಹ ಕಾರ್ಯ ಮಾಡಿದೆ.

ಎಲ್ಲೆಲ್ಲಿ ರಕ್ಷಣೆ: ಮೈಸೂರು ತಾಲೂಕಲ್ಲಿ 34, ತಿ.ನರಸೀಪುರ ತಾಲೂಕಲ್ಲಿ 18, ಹೆಚ್.ಡಿ.ಕೋಟೆ ತಾಲೂಕಲ್ಲಿ 9, ಕೆ.ಆರ್.ನಗರ ತಾಲೂಕಲ್ಲಿ 5, ನಂಜನಗೂಡು ತಾಲೂಕಲ್ಲಿ 2, ಹುಣಸೂರು ತಾಲೂಕಲ್ಲಿ 1, ಮಂಡ್ಯ ಜಿಲ್ಲೆಯಲ್ಲಿ ಮಂಡ್ಯ ತಾಲೂಕಲ್ಲಿ 2, ಕೆ.ಆರ್.ಪೇಟೆ ತಾಲೂಕಲ್ಲಿ 3, ಮದ್ದೂರು, ಪಾಂಡವಪುರ ಹಾಗೂ ಚೆನ್ನಪಟ್ಟಣದಲ್ಲಿ ತಲಾ ಒಂದೊಂದು ಚಿರತೆಯನ್ನು ಚಿರತೆ ರಕ್ಷಣಾ ಪಡೆ ರಕ್ಷಿಸಿದೆ.

ಬರೋಬ್ಬರಿ 93 ದೂರು: ಚಿರತೆ ಉಪಟಳಕ್ಕೆ ಸಂಬಂಧಪಟ್ಟಂತೆ ಇದುವರೆಗೂ 934 ದೂರುಗಳು ಬಂದಿವೆ. ಮೈಸೂರು ತಾಲೂಕಲ್ಲಿ 367, ಕೆ.ಆರ್.ನಗರದಲ್ಲಿ 135, ತಿ.ನರಸೀಪುರದಲ್ಲಿ 88, ಹುಣಸೂರಲ್ಲಿ 47, ಹೆಚ್.ಡಿ.ಕೋಟೆಯಲ್ಲಿ 40, ಪಿರಿಯಾಪಟ್ಟಣದಲ್ಲಿ 14 ದೂರು ಸೇರಿದಂತೆ ಜಿಲ್ಲೆಯಲ್ಲಿ 733 ದೂರು ದಾಖಲಾಗಿವೆ. ಮಂಡ್ಯ ಜಿಲ್ಲೆಯಲ್ಲಿ ಕೆ.ಆರ್.ಪೇಟೆಯಲ್ಲಿ 46, ಮಳವಳ್ಳಿಯಲ್ಲಿ 15, ಮದ್ದೂರಲ್ಲಿ 28, ಪಾಂಡವಪುರದಲ್ಲಿ 64, ನಾಗಮಂಗಲದಿಂದ 7, ಮಂಡ್ಯದಿಂದ 30, ಶ್ರೀರಂಗಪಟ್ಟಣದಿಂದ 7 ದೂರು ಸೇರಿದಂತೆ 197 ದೂರು ಸಲ್ಲಿಕೆಯಾಗಿವೆ. ಇದರೊಂದಿಗೆ ಕೊಳ್ಳೇಗಾಲದಿಂದ 6, ಶಿವಮೊಗ್ಗದಿಂದ 3, ಹಾಸನ ಜಿಲ್ಲೆಯಿಂದ 1 ದೂರು ಚಿರತೆ ಕಾರ್ಯಪಡೆಗೆ ಬಂದಿವೆ.

ಸಿಬ್ಬಂದಿಗಳ ಬಲ: ಚಿರತೆ ಕಾರ್ಯಪಡೆಯಲ್ಲಿ ಒಬ್ಬರು ಡಿಸಿಎಫ್, ಒಬ್ಬರು ಎಸಿಎಫ್, ಒಬ್ಬರು ಆರ್‌ಎಫ್‌ಓ, ನಾಲ್ವರು ಡಿಆರ್‌ಎಫ್‌ಓ, 8 ಗಸ್ತು ಅರಣ್ಯ ಪಾಲಕರು, 45 ಹೊರಗುತ್ತಿಗೆ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ.

ಪಡೆಯಲ್ಲಿರುವ ಪರಿಕರಗಳು: ಚಿರತೆ ರಕ್ಷಣಾ ಕಾರ್ಯದಲ್ಲಿ ಪಾಲ್ಗೊಳ್ಳುವ ಎಲ್‌ಟಿಎಫ್ ತಂಡದಲ್ಲಿ ಬಾಡಿ ಪ್ರೊಟೆಕ್ಟರ್, ಶೀಲ್ಡ್, ಲಾಟಿ, ಸ್ಟ್ರಚರ್, ಬಲೆ, ಸ್ಮಾರ್ಟ್ ಸ್ಟಿಕ್, ಪಿಟಿಝೆಡ್, ಜಿಎಸ್‌ಎಂ, ಸೆನ್ಸಾರ್ ಕ್ಯಾಮರಾ, ಮೈಕ್ರೊಚಿಪ್ ಸ್ಕ್ಯಾನರ್, ಪೆನ್ ಕೇಜ್, ಕಬ್ಸ್ ಕೇಜ್, ಡ್ರೋನ್, ಎಲಿವೇಟ್ ಸ್ಟ್ಯಾಂಡ್, ಮೈಕ್ರೋಚಿಪ್, ವನ್ಯಜೀವಿ ಆಂಬುಲೆನ್ಸ್, ಬಂಕರ್ ನೆಟ್, ಅರವಳಿಕೆ ಮದ್ದು, ಅರವಳಿಕೆ ಮದ್ದು ಪ್ರಯೋಗದ ಗನ್, ವಾಕಿ, ಬಾಡಿವೋರ್ನ್ ಕ್ಯಾಮರಾ, ಕೇಜ್‌ಗಳು ಸೇರಿದಂತೆ ಅಗತ್ಯ ಪರಿಕರದೊಂದಿಗೆ ಕಾರ್ಯಾಚರಿಸಲಿದ್ದಾರೆ.

ಸಹಾಯವಾಣಿ: ಚಿರತೆ ಹಾವಳಿ ಕುರಿತಂತೆ ದೂರು ಸಲ್ಲಿಸಲು ಅರಣ್ಯ ಇಲಾಖೆ ಸಹಾಯವಾಣಿ ತೆರೆದಿದೆ. 9481996026 ಮೊಬೈಲ್ ಸಂಖ್ಯೆಗೆ ದೂರು ನೀಡಬಹುದಾಗಿದೆ ದೂರು ನೀಡುವ ವೇಳೆ ಲೊಕೇಷನ್ ಹಾಕಿದರೆ ಸಕಾಲಕ್ಕೆ ಕಾರ್ಯಪಡೆಯ ಸಿಬ್ಬಂದಿ ಸ್ಥಳಕ್ಕೆ ಆಗಮಿಸಲು ನೆರವಾಗುತ್ತದೆ.



ವಿವಿಧೆಡೆ ಚಿರತೆ ರಕ್ಷಣಾ ಕಾರ್ಯದಲ್ಲಿ ತೊಡಗಿರುವ ಚಿರತೆ ಕಾರ್ಯ ಪಡೆ

ಮಾಂಸದಂಗಡಿಗಳ ತ್ಯಾಜ್ಯ ವಿಲೇವಾರಿ ಮಾಡದಿರುವುದೇ ಚಿರತೆ ಹಾವಳಿಗೆ ಕಾರಣ



ಬೀದಿನಾಯಿಗಳೇ ಚಿರತೆಗಳ ನೆಚ್ಚಿನ ಬಲಿ ಪ್ರಾಣಿಯಾಗಿವೆ. ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಇತ್ತೀಚೆಗೆ ಬೀದಿನಾಯಿಗಳ ಸಂಖ್ಯೆ ಗಣನೀಯವಾಗಿ ವೃದ್ಧಿಸಿರುವುದು ಚಿರತೆಗಳು ಜನವಸತಿ ಪ್ರದೇಶಗಳ ಕಡೆ ಮುಖ ಮಾಡಲು ಮುಖ್ಯ ಕಾರಣ. ಇತ್ತೀಚೆಗೆ ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ ಮುಖ್ಯವಾಗಿ ಕೋಳಿ ಮಾಂಸದ ಅಂಗಡಿಗಳಲ್ಲಿನ ತ್ಯಾಜ್ಯವನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡದೆ ರಸ್ತೆ ಬದಿ ಸುರಿಯುತ್ತಿರುವುದರಿಂದ ಬೀದಿನಾಯಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ನಾಯಿಗಳ ಬೇಟೆಗೆ ಚಿರತೆಗಳು ಜನವಸತಿ ಪ್ರದೇಶದ ಕಡೆ ಬರುತ್ತಿವೆ. ಮಾಂಸದ ಅಂಗಡಿಗಳ ತ್ಯಾಜ್ಯ ವಿಲೇವಾರಿಯನ್ನು ಸೂಕ್ತ ರೀತಿಯಲ್ಲಿ ಮಾಡಲು ಸ್ಥಳೀಯ ಸಂಸ್ಥೆಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಪಾಳುಬಿದ್ದ ಭೂಮಿ ಹಾಗೂ ನಿವೇಶನಗಳಲ್ಲಿ ಗಿಡಗಂಟಿ ತೆರವುಗೊಳಿಸಬೇಕು. ಸಕಾಲಕ್ಕೆ ಕಬ್ಬು ಕಟಾವು ಮಾಡದಿರುವುದು. ಗ್ರಾಮೀಣ ಪ್ರದೇಶದಲ್ಲಿ ಬೀದಿದೀಪದ ಅವ್ಯವಸ್ಥೆ ಚಿರತೆ ಹಾವಳಿ ಹೆಚ್ಚಾಗಲು ಕಾರಣ. ಒಂದು ವರ್ಷದಲ್ಲಿ ಚಿರತೆ ಕಾರ್ಯಪಡೆ ಹಲವು ಸವಾಲುಗಳನ್ನು ಎದುರಿಸಿ 77 ಚಿರತೆ ರಕ್ಷಿಸಿ, ಅರಣ್ಯ ಪ್ರದೇಶಕ್ಕೆ ಕೊಂಡೊಯ್ದು ಬಿಡುಗಡೆ ಮಾಡಿದೆ. 5 ಕಡೆ ಸಿಕ್ಕಿದ್ದ 14 ಮರಿಗಳನ್ನು ತಾಯಿ ಮಡಿಲಿಗೆ ಸೇರಿಸಿರುವುದು ಎಲ್‌ಟಿಎಫ್ ತಂಡದ ಸಾಧನೆ. ಕಳೆದ ವರ್ಷ 60 ಚಿರತೆಗಳನ್ನು ರಕ್ಷಿಸಲಾಗಿತ್ತು. ಸಾರ್ವಜನಿಕರಿಂದ ದೂರು ಬಂದ ಕೂಡಲೇ ಪರಿಶೀಲಿಸಲು ಸ್ಥಳಕ್ಕೆ ಎಲ್‌ಟಿಎಫ್ ಸಿಬ್ಬಂದಿಯನ್ನು ಕಳುಹಿಸಲಾಗುತ್ತಿದೆ. **-ಡಾ.ಕೆ.ಎನ್.ಬಸವರಾಜ್, ಡಿಸಿಎಫ್**







ಮಕ್ಕಳ ಚಿತ್ರಕಥೆ

ಕಪ್ಪೆ ಹಾಗೂ ಇಲಿಯ ಗೆಳೆತನ


-ಹೆಚ್.ಜಿ.ಎನ್.ಪ್ರಸಾದ್, ಮೊ:9845376199




ಒಂದು ಕಾಡಿನಲ್ಲಿ ಒಂದು "ಕಪ್ಪೆ" ಹಾಗೂ ಒಂದು "ಇಲಿ" ಪರಸ್ಪರ ಪರಿಚಯವಾಗಿ, ಗೆಳೆತನ ಬೆಳೆಯಿತು.




ಆ ಗೆಳೆತನ ಎಷ್ಟರಮಟ್ಟಿಗೆ ಬೆಳೆಯಿತೆಂದರೆ, ಅವೆರಡೂ ಪರಸ್ಪರ ಒಂದು ನಿಮಿಷವೂ ಬಿಟ್ಟಿರಲಾರದಂತಹ ಬಾಂಧವ್ಯ ಬೆಳೆದುಬಿಟ್ಟಿತ್ತು.




ಇಂತಹ ಗಾಢವಾದ ಸ್ನೇಹದಲ್ಲಿ ಮುಳುಗಿದ್ದ ಅವೆರಡೂ ಸದಾಕಾಲ ಒಟ್ಟಿಗೆ ಇರಲು ತೀರ್ಮಾನಿಸಿ, ಒಂದು ಹಗ್ಗವನ್ನು ತಂದು ಅವೆರಡೂ ತಮ್ಮ ಒಂದೊಂದು ಕಾಲಿಗೆ ಗಂಟು ಹಾಕಿಕೊಂಡು ಚಲಿಸತೊಡಗಿ ಸಂತೋಷ ಅನುಭವಿಸುತ್ತಿದ್ದವು.



ಹೀಗಿರುವಾಗ ಒಮ್ಮೆ ಕೆರೆಯ ನೀರಲ್ಲಿ ತೇಲುತ್ತಿದ್ದ ಕೀಟವೊಂದನ್ನು ಕಂಡ ಕಪ್ಪೆ, "ಅಬ್ಬಾ...ನನಗೆ ಆಹಾರ ಸಿಕ್ಕಿತು...!" ಎಂದು ಸಂತೋಷದಿಂದ ನೀರಿಗೆ ಧುಮುಕಿಬಿಟ್ಟಿತು.



ಕಪ್ಪೆಯು ತನಗೆ ಸಿಕ್ಕ ಆಹಾರವನ್ನು ಸಂತೋಷದಿಂದ ಮೈಮರೆತು ತಿನ್ನ ತೊಡಗಿತು. ಆದರೆ, ಹಗ್ಗದ ಮತ್ತೊಂದು ತುದಿ ಕಟ್ಟಿಕೊಂಡಿದ್ದ ಇಲಿಯು ನೀರಿನೊಳಗೆ ಮುಳುಗಿ ಪ್ರಾಣ ಕಳೆದುಕೊಳ್ಳಬೇಕಾಯಿತು.



ಅಲ್ಲಿಯೇ ಹಾರಾಡುತ್ತಿದ್ದ ಕಾಗೆಯೊಂದು ಕೆರೆಯ ನೀರಿನಲ್ಲಿ ತೇಲುತ್ತಿರುವ ಇಲಿಯ ದೇಹವನ್ನು ಕಂಡು ಕ್ಷಣಾರ್ಧದಲ್ಲಿ ಬಂದು ಕಚ್ಚಿಕೊಂಡುಹೋಯಿತು, ಅದರ ಜೊತೆಗೆ ಹಗ್ಗದ ಮತ್ತೊಂದು ತುದಿಯಲ್ಲಿದ್ದ ಕಪ್ಪೆಯೂ ಕಾಗೆಗೆ ಸಿಕ್ಕಿ, ಆಹಾರವಾಗಬೇಕಾಯಿತು.

ಒಂದು ಕಪ್ಪೆ ಹಾಗೂ ಇಲಿಯು ಸೇರಿದರೆ ಇಬ್ಬರ ಕಥೆಯೂ ಮುಗಿಯುತ್ತದೆ. ಹಾಗೆಯೇ, ಕೆಟ್ಟ ಸ್ನೇಹಿತರೂ ಸಹ ಬೇಡದಿರುವ ಕಡೆಗೆಲ್ಲಾ ನಿಮ್ಮನ್ನು ಕರೆದುಕೊಂಡುಹೋಗುತ್ತಾರೆ. ಹಾಗಾಗಿ ನಾವೆಲ್ಲರೂ ಸಹ ಗೆಳೆಯರನ್ನು ಆಯ್ಕೆ ಮಾಡಿಕೊಳ್ಳುವಾಗ ಬಹಳ ಸೂಕ್ಷ್ಮವಾಗಿ ಗಮನಿಸಿ, ಯೋಚಿಸಿ, ಸಜ್ಜನ, ಸಮಾನಮನಸ್ಕರೊಂದಿಗೆ ಮಾತ್ರ ಗೆಳೆತನ ಸಂಪಾದಿಸಬೇಕು.



ವಾರಭವಿಷ್ಯ

25.02.2024 ರಿಂದ 2.3.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಕುಂಭ, ಚಂದ್ರ-ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಬುಧ-ಕುಂಭ, ಗುರು-ಮೇಷ, ಶುಕ್ರ-ಮಕರ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವ್ಯಾಪಾರದಲ್ಲಿ ನಿರೀಕ್ಷಿತ ಲಾಭವನ್ನು ಗಳಿಸುವಿರಿ. ಅದಕ್ಕೆ ಸಮನಾಗಿ ಖರ್ಚು ವೆಚ್ಚಗಳೂ ಎದುರಾಗಲಿದೆ. ಇದರ ನಡುವೆಯೇ ಕೈಗಾರಿಕೆ ಉದ್ಯೋಗಿಗಳಿಗೆ ವಿಶೇಷ ಧನಲಾಭ. ಹೊಸ ಉದ್ದಿಮೆ ಚಾಲನೆ ಮಾಡಲು ಬ್ಯಾಂಕ್ ಸಾಲ ದೊರೆಯುವುದು. ವಾಕ್ಚಾತುರ್ಯದಿಂದ ಕಾರ್ಯಸಾಧನೆ. ಸರ್ಕಾರಿ ನೌಕರರು ಜವಾಬ್ದಾರಿಗಳನ್ನು ಸರಿಯಾಗಿ ನಿಭಾಯಿಸದೆ ತೊಂದರೆಗೆ ಗುರಿಯಾಗುವರು.

ಶ್ರೀಸ್ಕಂದಸ್ವಾಮಿ ದರ್ಶನ. ಶುಭ ಸಂಖ್ಯೆ-6

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಕುಟುಂಬ ಸದಸ್ಯರಲ್ಲಿ ಉಂಟಾಗಿದ್ದ ಸಂಘರ್ಷಗಳು ಸುಖಾಂತ್ಯವಾಗುವುದು. ನಿಮ್ಮ ಸ್ವಸಾಮರ್ಥ್ಯದಿಂದ ಕ್ಲಿಷ್ಟ ಕೆಲಸಗಳನ್ನು ಸಾಧಿಸಿಕೊಳ್ಳುವಿರಿ. ಸಹೋದರ, ಸಹೋದರಿಯರು ಸಮಯಕ್ಕೆ ಒದಗುವರು. ದೇಹಾರೋಗ್ಯ ಮರುಕಳಿಸುವುದು. ಉಚ್ಚ ಚಂದ್ರನಿಂದ ಹೋಟೆಲ್, ಕೇಟರಿಂಗ್ ಉದ್ಯಮಿಗಳಿಗೆ ಕೈತುಂಬಾ ಕೆಲಸವೂ ವರಮಾನವೂ ಉಂಟಾಗಲಿದೆ. ವಾರದ ಕಡೆಗೆ ಶಾಪಿಂಗ್ ಜೋರು.

ಶ್ರೀ ಚಾಮುಂಡೇಶ್ವರಿ ಉಪಾಸನೆ. ಶುಭ ಸಂಖ್ಯೆ-5

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)

ವಾರದ ಆದಿಗೆ ಶುಭ ಫಲ ಹಾಗೂ ಶುಭ ವಾರ್ತೆಯನ್ನು ನಿರೀಕ್ಷಿಸಬಹುದು. ನಿಮ್ಮ ಬಹು ಕಾಲದ ಇಷ್ಟವು ಸಿದ್ಧಿಸುವುದು. ಬಂಧು-ಬಾಂಧವರ ಮಿಲನವು ನಿಮ್ಮನ್ನು ಪುಳಕಿತಗೊಳಿಸುತ್ತದೆ. ನೂತನ ಗೃಹ ಬಳಕೆ ವಸ್ತುಗಳನ್ನು ಖರೀದಿಸುವಿರಿ. ಪ್ರತಿಷ್ಠಿತ ವ್ಯಕ್ತಿಗಳ ಭೇಟಿಯಿಂದ ವೈಯಕ್ತಿಕ ಸಮಸ್ಯೆಗೆ ಪರಿಹಾರ ದೊರಕುವುದು. ಸಡನ್ ಆಗಿ ಆರೋಗ್ಯದಲ್ಲಿ ವ್ಯತ್ಯಯವಾದೀತು.

ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ-9

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ವಾರದ ಆದಿಗೆ ಹಣಕಾಸಿನ ವ್ಯವಸ್ಥೆ ನಿಮ್ಮ ಹಿಡಿತದಲ್ಲಿ ಇರದು. ವ್ಯಾಪಾರ ವ್ಯವಹಾರಗಳು ಸಾಧಾರಣವಾಗಿ ನಡೆಯುವುದು. ಸರ್ಕಾರಿ ಕಚೇರಿ ಕೆಲಸಗಳು ನಿಧಾನಗತಿಯಲ್ಲಿ ಸಾಗುವುದು. ನೀವು ಶ್ರಮಪಟ್ಟು ಗಳಿಸಿದ್ದು ಅನ್ಯರ ಪಾಲಾಗುವುದು. ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ನಿರೀಕ್ಷಿತ ವ್ಯಾಪಾರವಾಗದೆ ನಷ್ಟ ಉಂಟಾಗುವುದು. 'ಮಾತೇ ಮುತ್ತು' ದುಡುಕಿ ಮಾತನಾಡದಿರಿ.

ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ-4.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಹಣಕಾಸಿನ ಸಮಸ್ಯೆಗಳು ಗೆಳೆಯರ ಸಹಾಯ ಹಸ್ತ ದೊರೆತು ಪರಿಹಾರವಾಗುತ್ತದೆ. ನೀವೀಗ ಯಶಸ್ಸಿನ ಹೊಸ್ತಿಲಲ್ಲಿ ನಿಂತಿದ್ದೀರಿ, ಅದು ಅನ್ಯರ ಪಾಲಾಗದಂತೆ ಎಚ್ಚರ ವಹಿಸಿ. ಭೂಮಿ, ನಿವೇಶನ ಖರೀದಿಗೆ ಮನಸ್ಸಿದ್ದರೆ ಕಾರ್ಯಪ್ರವೃತ್ತರಾಗಿ, ಗುರುಬಲವಿದೆ. ಪಾಲುಗಾರಿಕೆ ವ್ಯವಹಾರಗಳಲ್ಲಿ ಭಿನ್ನರಾಗ ಉಂಟಾಗಿ ನಷ್ಟಕ್ಕೆ ಗುರಿಯಾಗುವಿರಿ. ದೂರ ಪ್ರಯಾಣಗಳು ಉಂಟಾಗುವುದು, ಡ್ರೈವಿಂಗ್‌ನಲ್ಲಿ ಎಚ್ಚರವಿರಲಿ.

ಶ್ರೀ ನವಗ್ರಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-2.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಈ ವಾರದಲ್ಲಿ ಕೆಲಸಗಳು ದಂಡಿಯಾಗಿ ಇರುವುದರಿಂದ ಆದ್ಯತೆಯ ಆಧಾರದ ಮೇಲೆ ಕೈಗೆತ್ತಿಕೊಳ್ಳಿ. ಅಷ್ಟಮ ಗುರುವಿನ ಕಾರಣ ಭಾವನಾತ್ಮಕ ಒತ್ತಡಗಳಿಂದ ಹೊರ ಬರಲು ಚಡಪಡಿಸುವಿರಿ. ಪ್ರೀತಿ-ಪ್ರಣಯ ವಿಚಾರಗಳಲ್ಲಿ ಒತ್ತಡ ಎದುರಿಸಬೇಕಾದೀತು. ಸರ್ಕಾರಿ ನೌಕರರಿಗೆ ಅಪವಾದದ ಭೀತಿ ಇರುತ್ತದೆ. ದುಡುಕದಿರಿ. ಕೋರ್ಟ್ ಕಚೇರಿಗೆ ಅಲೆತ ಪ್ರಯೋಜನವಿಲ್ಲ.

ಶ್ರೀ ಶನಿಮಂತ್ರ ಜಪಿಸಿ. ಶುಭ ಸಂಖ್ಯೆ-7

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಈ ವಾರದಲ್ಲಿ ಹಣಕಾಸಿನ ಕೊರತೆ ಕಂಡು ಬರದು. ಹೊಸ ಜವಾಬ್ದಾರಿಗಳನ್ನು ಸ್ವೀಕರಿಸಲು ಸಿದ್ಧರಾಗಿರಿ. ನೌಕರ ವರ್ಗದವರು ಮೇಲಧಿಕಾರಿಗಳ ಮರ್ಜಿಯಂತೆ ನಡೆದರೆ ನಿಮಗೇ ಲಾಭ. ದೂರ ಪ್ರಯಾಣಗಳೂ ಸಂಭವಿಸಬಹುದು. ವಧು-ವರಾನ್ವೇಷಣೆಯ ಪ್ರಯತ್ನಗಳು ಸಫಲವಾಗಲು ಗುರುಕೃಪೆ ಇದೆ. ಪಂಚಮ ಶನಿದೇವನ ಕಾರಣ ಮನೆಯ ಸೌಹಾರ್ದತೆ ಕೆಡಬಹುದು.

ಶ್ರೀದೇವಿ ಆರಾಧನೆ. ಶುಭ ಸಂಖ್ಯೆ-9

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ಈ ಸಪ್ತಾಹದಲ್ಲಿ ವಾಸ್ತವಿಕತೆ ಅರಿತು ವ್ಯವಹರಿಸದಿದ್ದರೆ ಮನಸ್ಸಿಗೆ ಕಸಿವಿಸಿಯಾಗುವಂತಹ ಪ್ರಸಂಗಗಳು ಎದುರಾಗಲಿದೆ. ಮಾನಸಿಕ ದುಗುಡತೆ ನಿವಾರಣೆಗೆ ಅನುಭವಿಗಳ ಮಾರ್ಗದರ್ಶನ ಪಡೆಯಿರಿ. ನೆಮ್ಮದಿ ಹಾಗೂ ಸಮಾಧಾನ ಹುಡುಕಿಕೊಂಡು ಬರುವುದಿಲ್ಲ. 'ಮೌನಂ ಕಲಹಂ ನಾಸ್ತಿ' ಎಂಬಂತೆ ವಾದ-ವಿವಾದಗಳಿಂದ ದೂರವಿರಿ. ಪಂಚಮ ರಾಹು ಅನೈತಿಕ ವ್ಯವಹಾರಕ್ಕೆ ಪ್ರೇರಣೆ ನೀಡಬಹುದು.

ಶ್ರೀ ಗಣೇಶ ಸ್ತುತಿ. ಶುಭ ಸಂಖ್ಯೆ-1.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಇಷ್ಟಪಟ್ಟದ್ದನ್ನು ಗಳಿಸಿಕೊಳ್ಳುವಿರಿ. ಧನ-ಕನಕ, ವಸ್ತು, ವಾಹನ ದೊರೆಯುವುದು. ಬ್ಯಾಂಕ್ ಸಾಲದ ಪ್ರಯತ್ನ ಸಫಲವಾಗುವುದು. ಗೃಹಲಕ್ಷ್ಮಿಯೊಡನೆ ಉಂಟಾಗಿದ್ದ ಸಂಶಯಗಳು ನಿವಾರಣೆ ಆಗಲಿದೆ. ಉದ್ಯೋಗ ಹುಡುಕುವವರಿಗೆ ಶುಭ ಸಂದೇಶ ಬರುವ ಸಾಧ್ಯತೆ ಇದೆ. ಸಾಲದ ಒತ್ತಡವಿದ್ದಾಗ್ಯೂ ಗುರುಕೃಪೆಯಿಂದ ಬೆಟ್ಟದಂತೆ ಬಂದದ್ದು, ಹೂವಿನಂತೆ ಸರಿಯುವುದು.

ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ-8

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದ ಆದಿಗೆ ಆದಾಯ ಮಾರ್ಗಗಳು ಹೆಚ್ಚಲಿದೆ. ಬಂಧು ಜನರ ಸಹಯೋಗದಿಂದ ಗೃಹ ಸಮಸ್ಯೆಗೆ ಪರಿಹಾರ ದೊರಕುವುದು. ಇತರರೊಂದಿಗೆ ಮಾತನಾಡುವಾಗ ಜಾಗರೂಕರಾಗಿರಿ. ಕಾರ್ಮಿಕ ವರ್ಗದವರಿಗೆ ಸರಕಾರದ ಸಹಾಯ ಹಸ್ತ ದೊರಕಲಿದೆ. ಸರ್ಕಾರಿ ನೌಕರರಿಗೆ ಅನಿರೀಕ್ಷಿತ ವರ್ಗಾವಣೆಯಿಂದ ಹತಾಶೆ ಉಂಟಾಗುವುದು. ಅನಾರೋಗ್ಯ ಕಾರಣ ವೈದ್ಯರ ಭೇಟಿ.

ಶ್ರೀ ಆಂಜನೇಯ ಉಪಾಸನೆ. ಶುಭ ಸಂಖ್ಯೆ-5.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಸಪ್ತಾಹದ ಆದಿಗೆ ಮನೆಗೆ ಅತಿಥಿ-ಅಭ್ಯಾಗತರ ಆಗಮನ. ಅವರ ಸತ್ಕಾರ-ಉಪಚಾರಗಳಿಗೆ ಹಣ ವ್ಯಯ, ನೂತನ ಭೋಗ ವಸ್ತುಗಳು ಮನೆಗೆ ಬರುವುದು. ವ್ಯಾಪಾರ ವ್ಯವಹಾರಗಳಲ್ಲಿ ಮಾರ್ಕೆಟ್ ಜ್ಞಾನ ಅರಿತು ವ್ಯವಹರಿಸಿರಿ. ಕಪ್ಪು ಧಾನ್ಯ ಬೆಳೆದ ರೈತರಿಗೆ ಉತ್ತಮ ಫಸಲು ಹಾಗೂ ಬೆಲೆ ದೊರಕುವುದು. ನಿಮಗೆ ಸಂಬಂಧಪಡದ ವಿಷಯಗಳಿಗೆ ತಲೆ ಹಾಕಿ ತೊಂದರೆ ಅನುಭವಿಸಬೇಕಾದೀತು.

ಶ್ರೀ ಶ್ರೀನಿವಾಸ ಸೇವೆ. ಶುಭ ಸಂಖ್ಯೆ-2.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದಾರಂಭ ಶುಭಕರವಾಗಿದೆ. ಕೆಲವರಿಗೆ ವಿದೇಶ ಪ್ರವಾಸದ ಯೋಗವಿದೆ. ಐಷಾರಾಮಿ ವಸ್ತುಗಳನ್ನು ಖರೀದಿಸುವಿರಿ. ವಿದ್ಯಾರ್ಥಿಗಳಿಗೆ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರಕುವುದು. ಹಲವರಿಗೆ ಕ್ಯಾಂಪಸ್ ಸೆಲೆಕ್ಷನ್ ಯೋಗವಿದೆ. ಜನ್ಮ ರಾಶಿಯಲ್ಲೇ ರಾಹು ಇರುವ ಕಾರಣ ದೈನಂದಿನ ಚಟುವಟಿಕೆಗಳು ಹಳಿ ತಪ್ಪಬಹುದು. ನಿಮ್ಮ ಬ್ಯಾಂಕ್ ವಿವರಗಳನ್ನು ಯಾರಲ್ಲೂ ಹಂಚಿಕೊಳ್ಳಬೇಡಿ.

ಶ್ರೀ ಸಾಯಿಬಾಬಾ ಪ್ರಾರ್ಥನೆ. ಶುಭ ಸಂಖ್ಯೆ-6.

ಮೈಸೂರು ಮಿತ್ರ ಭಾನುವಾರ 25 ಫೆಬ್ರವರಿ 2024

ವೈಭವದ ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬ್ರಹ್ಮ ರಥೋತ್ಸವ

ಬೆಟ್ಟದಪುರ, ಫೆ.24– ಮಲ್ಲಯ್ಯನ ಜಾತ್ರೆ ಎಂದೇ ಪ್ರಸಿದ್ಧಿಯಾಗಿರುವ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿ ಭ್ರಮರಾಂಬ ಸಮೇತ ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬ್ರಹ್ಮ ರಥೋತ್ಸವ ಶನಿವಾರ ವೈಭವದಿಂದ ನಡೆಯಿತು.

ರಥೋತ್ಸವ ಅಂಗವಾಗಿ ಬೆಳಗ್ಗೆಯಿಂದಲೇ ದೇವಾಲಯದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ನಡೆದವು. ಬಳಿಕ ಬೆಳಗ್ಗೆ 10.45ರಿಂದ 11.15ರ ಶುಭ ಮೇಷ ಲಗ್ನದಲ್ಲಿ ಬೆಳ್ಳಿ ಬಸವ, ವಿಘ್ನೇಶ್ವರ ಹಾಗೂ ಭ್ರಮರಾಂಬ ಸಮೇತ ಮಲ್ಲಿಕಾರ್ಜುನಸ್ವಾಮಿಯವರ ಉತ್ಸವ ಮೂರ್ತಿಗಳನ್ನು 3 ರಥಗಳಲ್ಲಿ ಪ್ರತಿಷ್ಠಾಪಿಸಿ ಸುತ್ತಮುತ್ತಲ ಗ್ರಾಮಸ್ಥರು ಸೇರಿದಂತೆ ಸಾವಿರಾರು ಭಕ್ತರ ಹರ್ಷೋದ್ಗಾರಗಳ ನಡುವೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ನೆರದಿದ್ದ ಭಕ್ತರು ಬಸವೇಶ್ವರ, ವಿಘ್ನೇಶ್ವರ ಹಾಗೂ ಭ್ರಮರಾಂಬ ಸಮೇತ ಮಲ್ಲಿಕಾರ್ಜುನಸ್ವಾಮಿಗೆ ಜೈಕಾರ ಕೂಗಿ ಮೂರು ರಥಗಳನ್ನು ಎಳೆದು ಪುನೀತರಾದರು. ಅಲ್ಲದೇ ರಥಗಳಿಗೆ ಹಣ್ಣು ಜವನ ಎಸೆದು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು.



ಬೆಟ್ಟದಪುರದಲ್ಲಿ ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು.

ರಥೋತ್ಸವದ ಅಂಗವಾಗಿ ಶುಕ್ರವಾರ ರಾತ್ರಿ ಗಿರಿಜಾ ಕಲ್ಯಾಣೋತ್ಸವ ವಿಜೃಂಭಣೆಯಿಂದ ನಡೆಯಿತು. ಬೆಟ್ಟದ ಮೇಲಿರುವ ಸಿಡಿಲು ಮಲ್ಲಿಕಾರ್ಜುನಸ್ವಾಮಿ ದೇವಾಲಯಕ್ಕೆ ವಿಶೇಷ ಅಲಂಕಾರ ಮಾಡಿ ಪೂಜೆ ಪುನಸ್ಕಾರ ನೆರವೇರಿಸಲಾಯಿತು. ಈ ವೇಳೆ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.

ರಥೋತ್ಸವ ಅಂಗವಾಗಿ ರಥದ ಬೀದಿಯನ್ನು ತಳಿರು ತೋರಣ, ಬಣ್ಣ ಬಣ್ಣದ ರಂಗೋಲಿಗಳಿಂದ ಅಲಂಕರಿಸಲಾಗಿತ್ತು ಇನ್ನು ಭಕ್ತರಿಗೆ ಬೆಮತ್ತಿ ಗ್ರಾಮದ ಸುರೇಶ್ ಸೇರಿದಂತೆ ಗ್ರಾಮಸ್ಥರು ಅನ್ನಸಂತರ್ಪಣೆ ಹಮ್ಮಿಕೊಂಡಿದ್ದರು. ಇದೇ ವೇಳೆ ಬೆಟ್ಟದಪುರ ಆರೋಗ್ಯ ಇಲಾಖೆಯ ಡಾ.ಪೂಜಾ ಹಾಗೂ ಆರೋಗ್ಯ ನಿರೀಕ್ಷಕ ಕುಮಾರ್ ಅವರ ನೇತೃತ್ವದಲ್ಲಿ ಸ್ವಚ್ಛತೆ ಮತ್ತು ಆರೋಗ್ಯದ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಯಿತು. ಬೆಟ್ಟದ ತಳಭಾಗದಲ್ಲಿ ವಿಶೇಷ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಮಲ್ಲಯ್ಯನ ಬೆಟ್ಟ ಹತ್ತಿದ ಭಕ್ತರು: ಭ್ರಮರಾಂಬ ಸಮೇತ ಶ್ರೀಸಿಡಿಲು ಮಲ್ಲಿಕಾರ್ಜುನಸ್ವಾಮಿ ಬ್ರಹ್ಮ ರಥೋತ್ಸವ ಅಂಗವಾಗಿ ಬೆಳಗ್ಗೆಯಿಂದ ಸಂಜೆವರೆಗೆ ಸಾವಿರಾರು ಭಕ್ತರು ಮಲ್ಲಿಕಾರ್ಜುನಸ್ವಾಮಿ ಬೆಟ್ಟ ಹತ್ತಿ ದೇವರ ದರ್ಶನ ಪಡೆದರು.

ರಥೋತ್ಸವದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಬೆಟ್ಟದಪುರ ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.

ಈ ವೇಳೆ ತಾಲೂಕು ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ತಹಸೀಲ್ದಾರ್ ಕುಂಜಿ ಅಹಮದ್ ಗ್ರಾಪಂ ಅಧ್ಯಕ್ಷ ಗಿರೀಶ್, ಬಿಬಿಎಂಪಿ ಉಪ ಆಯುಕ್ತ ಬಿ.ಎನ್. ಗಿರೀಶ್, ಉಪ್ಪಾರ ಸಮಾಜದ ಅಧ್ಯಕ್ಷ ಆಂಜನೇಯ, ರೈತ ಸಂಘದ ಮುಖಂಡ ಬಿ.ಜೆ.ದೇವರಾಜ್, ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷ ನಾರಾಯಣ್, ವಿಜಯ್, ಗ್ರಾಪಂ ಸದಸ್ಯ ರಜನಿಕಾಂತ್, ಬೆಟ್ಟದಪುರ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಶಿವದೇವಪ್ಪ, ಬಿ.ಸಿ.ರಾಜೇಂದ್ರ, ಬಿ.ಎಸ್.ಮಹದೇವಪ್ಪ ಬಿ.ಎಸ್.ನಟರಾಜ್, ಚನ್ನೇಗೌಡನ ಕೊಪ್ಪಲು ಗ್ರಾಮದ ಮುಖಂಡರಾದ ಜಯರಾಮ, ಉದಯ, ಹರೀಶ್, ದಿಲೀಪ್, ಉಪ ತಹಸೀಲ್ದಾರ್ ಶಶಿಧರ್, ಆರ್‌ಐ ಅಜ್ಮಲ್, ಪಿರಿಯಾಪಟ್ಟಣ ಸಿಪಿಐ ರಾಘವೇಂದ್ರ, ಬೆಟ್ಟದಪುರದ ಸಿಪಿಐ ವೀಣಾ, ಎಸ್‌ಐ ಪ್ರಕಾಶ್ ಎಂ.ಎತ್ತಿನಮನಿ, ಬೆಟ್ಟದಪುರ ಗ್ರಾಪಂ ಪಿಡಿಓ ಮಂಜುನಾಥ್, ಗ್ರಾಪಂ ಸದಸ್ಯರು, ಗ್ರಾಮಸ್ಥರು ಸೇರಿದಂತೆ ಸುಮಾರು 30 ಸಾವಿರ ಭಕ್ತರು ರಥೋತ್ಸವದಲ್ಲಿ ಭಾಗವಹಿಸಿದ್ದರು.

ಮೃತ ವಿದ್ಯಾರ್ಥಿ ಕುಟುಂಬಕ್ಕೆ ಸಾಂತ್ವನ

ನ್ಯಾಯ ದೊರಕಿಸಿ ಕೊಡುವಂತೆ ಪೋಷಕರ ಮನವಿ



ಹುಣಸೂರು, ಫೆ.24– ಇತ್ತೀಚೆಗೆ ಅನುಮಾನಾಸ್ಪದವಾಗಿ ಸಾವನ್ನಪ್ಪಿದ ಕಾಲೇಜು ವಿದ್ಯಾರ್ಥಿ ತಾಲೂಕಿನ ದಾಸನಪುರದ ಮುತ್ತುರಾಜ್ ಮನೆಗೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಭೇಟಿ ನೀಡಿ ಪೋಷಕರಿಗೆ ಸಾಂತ್ವನ ಹೇಳಿದರು.

ವಿದ್ಯಾರ್ಥಿ ಮುತ್ತುರಾಜ್ ತಂದೆ ರವಿಕುಮಾರ್ ಘಟನೆ ಕುರಿತು ಮಾಹಿತಿ ನೀಡಿ ಇದ್ದೊಬ್ಬ ಮಗನನ್ನು ಕಳೆದುಕೊಂಡಿದ್ದು, ನಮಗೆ ದಿಕ್ಕೇ ತೋಚದಂತಾಗಿದೆ. ಆತ ಏನಾದರೂ ತಪ್ಪು ಮಾಡಿದ್ದರೆ ತಮಗೆ ಅಥವಾ ಪೊಲೀಸರಿಗೆ ತಿಳಿಸಬೇಕಿತ್ತು. ಅದು ಬಿಟ್ಟು ಆತನ ಮೇಲೆ ಹಲ್ಲೆ ನಡೆಸಿ ಸಾವಿಗೆ ಕಾರಣವಾಗಿರುವುದು ಆತಂಕ ಉಂಟು ಮಾಡಿದ್ದು, ಇಂತಹ ಸ್ಥಿತಿ ಯಾವ ತಂದೆ–ತಾಯಿಗೂ ಬರಬಾರದು. ತಪ್ಪಿತಸ್ಥರಿಗೆ ಶಿಕ್ಷೆಯಾಗುವ ಮೂಲಕ ನಮಗೆ ನ್ಯಾಯ ದೊರಕಿಸಿ ಕೊಡಿ ಎಂದು ಮನವಿ ಮಾಡಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಡಿವೈಎಸ್‌ಪಿ ಗೋಪಾಲಕೃಷ್ಣ ಅವರಿಂದ ಮಾಹಿತಿ ಹಾಗೂ ಕೈಗೊಂಡಿರುವ ಕ್ರಮದ ಬಗ್ಗೆ ಮಾಹಿತಿ ಪಡೆದ ಮಾಜಿ ಶಾಸಕರು, ಸಂಕಷ್ಟಕ್ಕೊಳಗಾಗಿರುವ ಕುಟುಂಬಕ್ಕೆ ನ್ಯಾಯ ದೊರಕಿಸಿ ಕೊಡುವ ಕುರಿತು ಮುಖ್ಯಮಂತ್ರಿ ಹಾಗೂ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸುವೆ ಎಂದರು.

ಈ ವೇಳೆ ಗ್ರಾಪಂ ಸದಸ್ಯ ರಾಘವೇಂದ್ರ, ತಾಪಂ ಮಾಜಿ ಸದಸ್ಯ ವೆಳ್ಳಂಗಿರಿ, ಗ್ರಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಮಹೇಶ್, ಗೋವಿಂದಶೆಟ್ಟಿ, ದಿನೇಶ್, ಚಂದ್ರು ಮತ್ತಿತರರಿದ್ದರು.

ವೈನ್‌ಶಾಪ್ ಸ್ಥಳಾಂತರಕ್ಕೆ ಒತ್ತಾಯಿಸಿ ಪ್ರತಿಭಟನೆ



ಕಸುವಿನಹಳ್ಳಿಯಲ್ಲಿ ವೈನ್‌ಶಾಪ್ ಸ್ಥಳಾಂತರಕ್ಕೆ ಒತ್ತಾಯಿಸಿ ಪ್ರತಿಭಟನೆ.

ನಂಜನಗೂಡು, ಫೆ.24– ವೈನ್‌ಶಾಪ್ ಸ್ಥಳಾಂತರಕ್ಕೆ ಒತ್ತಾಯಿಸಿ ತಾಲೂಕಿನ ಕಸುವಿನಹಳ್ಳಿಯಲ್ಲಿ ನೂರಕ್ಕೂ ಹೆಚ್ಚು ಮಹಿಳೆಯರು ಹಾಗೂ ಶಾಲಾ ವಿದ್ಯಾರ್ಥಿಗಳು ರೈತ ಸಂಘದ ನೇತೃತ್ವದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಗ್ರಾಮದ ಸಿದ್ದಯ್ಯನಹುಂಡಿ ವೃತ್ತದಲ್ಲಿ ಕಳೆದ 2 ತಿಂಗಳ ಹಿಂದೆ ಆರಂಭವಾಗಿದ್ದ ಮದ್ಯದಂಗಡಿ ತೆರವುಗೊಳಿಸುವಂತೆ ಗ್ರಾಮಸ್ಥರು ಅನಿರ್ದಿಷ್ಟಾವಧಿ ಪ್ರತಿಭಟನೆ ಹಮ್ಮಿಕೊಂಡಿದ್ದರು. ಈ ವೇಳೆ ತಾಲೂಕು ಮಟ್ಟದ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿ. ಒಂದು ತಿಂಗಳು ಕಾಲವಕಾಶ ನೀಡುವಂತೆ ಪ್ರತಿಭಟನಾಕಾರರ ಮನವೊಲಿಸಿ ಪ್ರತಿಭಟನೆ ಹಿಂಪಡೆಯುವಂತೆ ಮಾಡಿದ್ದರು.

ಆದರೆ ಸಮಯ ಮೀರಿದ್ದರೂ ಮದ್ಯದಂಗಡಿ ಸ್ಥಳಾಂತರಿಸಿಲ್ಲ ಎಂದು ಆರೋಪಿಸಿ ಶನಿವಾರ ಬೆಳಗ್ಗೆ ನೂರಕ್ಕೂ ಹೆಚ್ಚು ಮಹಿಳೆಯರು ಹಾಗೂ ಶಾಲಾ ವಿದ್ಯಾರ್ಥಿಗಳು ರೈತ ಸಂಘದ ನೇತೃತ್ವದಲ್ಲಿ ಪ್ರತಿಭಟನೆಗೆ ಮುಂದಾದರು. ಈ ಸಂದರ್ಭ ವೈನ್‌ಶಾಪ್ ಸಿಬ್ಬಂದಿ ತಾವೇ ಅಂಗಡಿ ಬಂದ್ ಮಾಡಿ ಅಲ್ಲಿಂದ ತೆರಳಿದರು. ಬಳಿಕ ಸ್ಥಳೀಯರೂ ವೈನ್ ಶಾಪ್‌ಗೆ ಪ್ರತ್ಯೇಕವಾಗಿ ಬೀಗ ಹಾಕಿದರು.

ರೈತ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಮಾತನಾಡಿ, ಗ್ರಾಮಸ್ಥರ ವಿರೋಧದ ಹಿನ್ನೆಲೆಯಲ್ಲಿ ವೈನ್‌ಶಾಪ್ ಸ್ಥಳಾಂತರಿಸುವಂತೆ ಜಿಲ್ಲಾಧಿಕಾರಿಗಳು ಮದ್ಯದಂಗಡಿ ಮಾಲೀಕರಿಗೆ ಒಂದು ತಿಂಗಳು ಕಾಲಾವಕಾಶ ನೀಡಿದ್ದರು. ಆದರೆ ವೈನ್‌ಶಾಪ್ ಸ್ಥಳಾಂತರ ಮಾಡದಿದ್ದರಿಂದ ಸ್ಥಳೀಯರೊಡಗೂಡಿ ಪ್ರತಿಭಟನೆ ನಡೆಸಲಾಗಿದ್ದು, ಈ ವೇಳೆ ಅಂಗಡಿಯವರೇ ಸ್ವಯಂ ಪ್ರೇರಿತವಾಗಿ ಬೀಗ ಹಾಕಿದ್ದಾರೆ. ನಾವು ಸಹ ಒಂದು ಬೀಗ ಹಾಕಿದ್ದು ಯಾವುದೇ ಕಾರಣಕ್ಕೂ ಮದ್ಯದಂಗಡಿ ಬಾಗಿಲು ತೆರೆಯಲು ಅವಕಾಶ ಕೊಡುವುದಿಲ್ಲ ಎಂದರು.

ಪ್ರತಿಭಟನೆಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಸಿದ್ದಪ್ಪ, ಗ್ರಾಪಂ ಅಧ್ಯಕ್ಷೆ ಮಂಜುಳ, ಸದಸ್ಯರಾದ ಪುಟ್ಟಸ್ವಾಮಿ, ಮಲ್ಲೇಶ್, ಶಿವನಂಜಪ್ಪ, ಮಹೇಶ್, ಹೊಣಕಾರಯ್ಯ, ಲೋಕೇಶ್, ಸರ್ವಮಂಗಳ, ಚನ್ನಾಜಮ್ಮ, ಭಾಗ್ಯ, ರಂಗಸ್ವಾಮಿ, ಮಂಜುಳ, ಮುದ್ದಪ್ಪ, ಪ್ರಕಾಶ್ ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು.

ಬನ್ನೂರಲ್ಲಿ ಅದ್ದೂರಿ ಹೇಮಾದ್ರಂಭ ದೇವಿ ಬಂಡೀ ಉತ್ಸವ



ಬನ್ನೂರಲ್ಲಿ ಹೇಮಾದ್ರಾಂಭ ದೇವಿ ಜಾತ್ರಾ ಮಹೋತ್ಸವ ಅಂಗವಾಗಿ ಬಂಡಿ ಉತ್ಸವ ನಡೆಯಿತು.

ಬನ್ನೂರು, ಫೆ.24– ಇತಿಹಾಸ ಪ್ರಸಿದ್ಧ ಹೇಮಾದ್ರಂಭ ದೇವಿ ಜಾತ್ರಾ ಮಹೋತ್ಸವ ಅಂಗವಾಗಿ ಶನಿವಾರ ಅವಭೃತ ಸ್ನಾನ, ಬಂಡೀ ಉತ್ಸವ ಅದ್ದೂರಿಯಾಗಿ ನಡೆಯಿತು.

ಜಾತ್ರಾ ಮಹೋತ್ಸವ ಅಂಗವಾಗಿ ಮುಂಜಾನೆಯೇ ದೇವಿಗೆ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಬಳಿಕ ಸಾವಿರಾರು ಭಕ್ತರು ದೇವರ ದರ್ಶನ ಪಡೆದರು. ಬಳಿಕ ನೇವೈದ್ಯಕ್ಕಾಗಿ ದೇವಿ ಉತ್ಸವ ಮೂರ್ತಿಯನ್ನು ದೇವಿ ತೋಪಿನ ಕಡೆಗೆ ಕರೆದೊಯ್ಯುತ್ತಿದ್ದ ವೇಳೆ ಮಾರ್ಗದುದ್ದಕ್ಕೂ ಎಳನೀರು ಬಂಡಿ ಚಲಿಸುತ್ತ ಜನರಿಗೆ ಒಂದೊಂದು ಎಳನೀರು ನೀಡಲಾಗುತ್ತಿತ್ತು. ಕೆಲವು ಭಕ್ತರು ದೇವಿಗೆ ಕಾಸು, ಹೂ, ಸೂರೆಲೆ ಸಮರ್ಪಿಸಿದರು. ಅಲ್ಲದೇ ಯುವಕರು ಹೇಮಾದ್ರಂಭ ಚೌಕ ಎಂದು ಟವಲ್‌ಗಳನ್ನು ಮೇಲಕ್ಕೆಸೆದು ಸಂಭ್ರಮ ವ್ಯಕ್ತಪಡಿಸಿದರು. ದಾರಿಯುದ್ದಕ್ಕೂ ಸಾವಿರಾರು ಭಕ್ತರು ದೇವಿಯ ದರ್ಶನ ಪಡೆದರು.

ದೇವಿ ತೋಪಿಗೆ ದೇವಿ ಬರುವ ಮುನ್ನವೇ ಕಾವೇರಿ ಮಡುವಿನ ಸಮೀಪ ಕಾದಿದ್ದ ಸಾವಿರಾರು ಜನರು ದೇವಿ ದರ್ಶನವಾಗುತ್ತಿದ್ದಂತೆ ದೇವಿಗೆ ಜೈಕಾರ ಹಾಕಿದರು. ಈ ಸಂದರ್ಭ ನೇವೇದ್ಯಕ್ಕಾಗಿ ಅನ್ನ ಸಿದ್ಧಪಡಿಸಲು ಅಗ್ಗಿಷ್ಟಿಕೆ ಸಿದ್ದಪಡಿಸಿಕೊಂಡರು. ನಂತರ ಕಾವೇರಿ ಮಡುವಿನಲ್ಲಿ ದೇವಿಗೆ ಅವಭೃತ ಸ್ನಾನವಾಯಿತು. ಈ ವೇಳೆ ದೇವಿ ತೊಟ್ಟಿಲ ಕೆಳಗೆ ನುಸುಳಲು ಕಾವೇರಿ ನೀರಿನಲ್ಲಿ ಜನರು ಸಾಲಿನಲ್ಲಿ ಕಾದು ನಿಂತಿದ್ದರು. ಅವಭೃತ ಸ್ನಾನವಾಗುತ್ತಿದ್ದಂತೆ ಜನರು ಪುಣ್ಯಸ್ನಾನ ಮಾಡಿ ಅನ್ನಸಂತರ್ಪಣಾ ಕಾರ್ಯ ಯಶಸ್ವಿಗೊಳಿಸಿದರು.

ಇನ್ನು ಬನ್ನೂರಿನ ರತ್ನಮಹಲ್ ಚಿತ್ರ ಮಂದಿರದ ಮುಂಭಾಗದ ಆವರಣದಲ್ಲಿ ನಡೆಯುವ ಬಂಡೀ ಉತ್ಸವ ನೋಡಲು ಜನಸ್ತೋಮವೇ ನೆರೆದಿತ್ತು. ಮಧ್ಯಾಹ್ನದ ವೇಳೆಗೆ ಆರಂಭವಾದ ಬಂಡೀ ಉತ್ಸವದಲ್ಲಿ ಜನರು ಶಿಳ್ಳೆ, ಚಪ್ಪಾಳೆಯೊಂದಿಗೆ ರಾಸುಗಳನ್ನು ಉರಿದುಂಬಿಸಿದರು. ಈ ವೇಳೆ ರಾಸುಗಳು ಆಯತಪ್ಪಿ ಮುಖ್ಯರಸ್ತೆಗೆ ಇಳಿಯದಂತೆ ಹಾಕಿದ್ದ ಬ್ಯಾರಿಕೇಡ್, ಚಿತ್ರಮಂದಿರದ ಗೋಡೆ ಹಾಗೂ ಗಣಪತಿ ದೇವಾಲಯದ ಮುಂಭಾಗಕ್ಕೆ ನುಗ್ಗಿತಾದರೂ ಬಂಡೀ ಉತ್ಸವ ಯಶಸ್ವಿಯಾಗಿ ನಡೆಯಿತು.

ದೇವಿ ತೋಪಿನಿಂದ ಹೇಮಾದ್ರಂಭ ದೇವಿ ಉತ್ಸವ ಮೂರ್ತಿ ಬರುತ್ತಿದ್ದಂತೆ ಬಂಡೀ ಉತ್ಸವ ಕೊನೆಗೊಂಡು ಮೆರವಣಿಗೆ ಮೂಲಕ ದೇವಾಲಯ ತಲುಪಿತು.



ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನೋಟರಿ ಸಂಘ ಮತ್ತು ರಾಷ್ಟ್ರೀಯ ನೋಟರಿಗಳ ಸಂಘದಿಂದ ತಿ.ನರಸೀಪುರ ತಾಲೂಕಿನ ಹಿರಿಯ ವಕೀಲ ಸಿ.ಎನ್. ದೊಡ್ಡಲಿಂಗೇಗೌಡ ಅವರನ್ನು ಮೈಸೂರಿನ ವಕೀಲರ ಸಂಘದ ಕಚೇರಿಯಲ್ಲಿ ಸನ್ಮಾನಿಸಲಾಯಿತು. ಈ ವೇಳೆ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರಾದ ಪ್ರಭಾವತಿ ಎಂ.ಹಿರೇಮಠ್, ಬಿ.ರಮೇಶ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಆರ್.ಉಮೇಶ್ ಮತ್ತಿತರರು ಹಾಜರಿದ್ದರು.

ಜಯಪುರದಲ್ಲಿ ಗುರುವಂದನಾ ಕಾರ್ಯಕ್ರಮ



ಜಯಪುರ, ಫೆ.24– ಗುರುವನ್ನೆ ಮೀರಿಸಿ ಬಹು ಎತ್ತರಕ್ಕೆ ಬೆಳೆಯುವ ಶಿಷ್ಯವೃಂದ ನಮ್ಮಂತ ಶಿಕ್ಷಕರಿಗೆ ಲಭಿಸಿರುವುದು ದೇವರು ಕೊಟ್ಟ ಕೊಡುಗೆ ಎಂದು ರಾಘವೇಂದ್ರ ವಿದ್ಯಾಪೀಠ ಪ್ರೌಢಶಾಲೆ ನಿವೃತ್ತ ಮುಖ್ಯಶಿಕ್ಷಕ ಎಚ್.ಕೆ. ಪ್ರಭಾಕರ್ ಮೂರ್ತಿ ತಿಳಿಸಿದರು.

ಜಯಪುರದ ರಾಘವೇಂದ್ರ ವಿದ್ಯಾಪೀಠ ಪ್ರೌಢ ಶಾಲಾವರಣದಲ್ಲಿ 2004–2005ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳು ಆಯೋಜಿಸಿದ್ದ ಗುರವಂದನಾ ಮತ್ತು ಪುನರ್ ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಲ್ಲಿಯೊ ಹಳ್ಳಿಗಳಿಂದ ಬಂದ ನನ್ನ ವಿದ್ಯಾರ್ಥಿಗಳು ಒಟ್ಟಾಗಿ ಸೇರಿ ಗುರುವಂದನಾ ಕಾರ್ಯಕ್ರಮ ಮಾಡಿದ್ದಾರೆ. ಅದು ನಮಗೆ ಗುರು–ಶಿಷ್ಯರ ಸ್ನೇಹ ಮಿಲನದ ಸ್ಪಂದನಾ ಕಾರ್ಯಕ್ರಮವಾಗಿದೆ. ಪುನರ್ಜನ್ಮ ಇದ್ದರೆ ಮತ್ತೆ ಶಿಕ್ಷಕರಾಗಿ ಹುಟ್ಟಲು ಬಯಸುತ್ತೇನೆ. ಪ್ರಸ್ತುತ ಶಿಕ್ಷಣ ಪದ್ಧತಿ ಹಲವು ಬದಲಾವಣೆ ಕಂಡಿದೆ. ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದು ಗುರಿ ಸಾಧಿಸಬೇಕು ಎಂದರು.

ಮುಖ್ಯಶಿಕ್ಷಕ ಎಸ್.ವೈದ್ಯನಾಥ್ ಮಾತನಾಡಿದರು. ಇದೇ ವೇಳೆ 2004–05ನೇ ಸಾಲಿನ ವಿದ್ಯಾರ್ಥಿಗಳು, ಶಿಕ್ಷಕರು ಸರ್ಪಪಲ್ಲಿ ರಾಧಕೃಷ್ಣನ್ ಮತ್ತು ಸರಸ್ವತಿ ಫೋಟೋಗಳಿಗೆ ಪೂಜೆ ಸಲ್ಲಿಸಿ, ಪುಷ್ಪನಮನ ಸಲ್ಲಿಸಿದರು. ಶಾಲೆ ವಿದ್ಯಾರ್ಥಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಿದ್ದರು. ಹಿರಿಯ ನಿವೃತ್ತ ಶಿಕ್ಷಕರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ಹಳೆಯ ವಿದ್ಯಾರ್ಥಿಗಳು 20 ವರ್ಷಗಳ ನಂತರ ಒಟ್ಟಿಗೆ ಭೇಟಿಯಾದ ಘಳಿಗೆಯಲ್ಲಿ ಶಾಲಾ ದಿನಗಳನ್ನು ಮೆಲುಕು ಹಾಕಿದರು. ಕಾರ್ಯಕ್ರಮದಲ್ಲಿ ಹಿರಿಯ ನಿವೃತ್ತ ಶಿಕ್ಷಕ ಎಸ್.ಎಸ್ ವಾಗೀಶ್, ಆರ್.ಜಯಶೇಖರ್, ಸಿ.ಎನ್.ಬಾಲಕೃಷ್ಣ, ಮಾದಪ್ಪ ಸ್ವಾಮಿ, ಕನಕಲಕ್ಷ್ಮಿ, ಎಸ್.ಎಂ.ಶೋಭಾ, ನಂಜಯ್ಯ, ಪ್ರೌಢ ಶಾಲಾ ಸಹಶಿಕ್ಷಕರಾದ ಜಿ.ಕುಮಾರಸ್ವಾಮಿ, ಜಿ.ವೆಂಕಟೇಗೌಡ, ಸಿದ್ದರಾಮು, ಕೆ.ಎನ್. ಸಿದ್ದೇಗೌಡ, ಮಹಾಲಕ್ಷ್ಮಿ ಹಾಗೂ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾಂಗ್ರೆಸ್‌ನ ಗ್ಯಾರಂಟಿಗಳ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿ

ಜಿಲ್ಲಾ ಕಾಂಗ್ರೆಸ್ ಪದವೀಧರ ಘಟಕದ ಅಧ್ಯಕ್ಷ ಎಂ.ರಮೇಶ್

ತಿ.ನರಸೀಪುರ, ಫೆ.24– ಕಾಂಗ್ರೆಸ್ ಸರ್ಕಾರ ಚುನಾವಣಾ ಪೂರ್ವದಲ್ಲಿ ನೀಡಿದ್ದ ಗ್ಯಾರಂಟಿಗಳನ್ನು ಜಾರಿಗೊಳಿಸಿದ್ದು, ಈ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಪದವೀಧರ ಘಟಕ ಮಾಡಬೇಕಿದೆ ಎಂದು ಮೈಸೂರು ಜಿಲ್ಲಾ ಕಾಂಗ್ರೆಸ್ ಪದವೀಧರ ಘಟಕದ ಅಧ್ಯಕ್ಷ ಎಂ.ರಮೇಶ್ ಕರೆ ನೀಡಿದರು.



ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳ ಬಗ್ಗೆ ಸಾರ್ವಜನಿಕರಿಗೆ ಸಂಪೂರ್ಣ ಮಾಹಿತಿ ತಿಳಿದಿದೆ. ಆದರೂ ಪದವೀಧರ ಘಟಕದ ಸದಸ್ಯರೂ ಪ್ರತಿ ಹಳ್ಳಿಗಳಲ್ಲೂ ಗ್ಯಾರಂಟಿ ಯೋಜನೆಗಳ ಬಗ್ಗೆ ಜನತೆಗೆ ಅರಿವು ಮೂಡಿಸಬೇಕು ಎಂದರು.

ತಾಲೂಕು ಗ್ರಾಮಾಂತರ ಪದವೀಧರ ಕಾಂಗ್ರೆಸ್ ಘಟಕದ ಪದಗ್ರಹಣ ಕಾರ್ಯಕ್ರಮ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ಉಪಸ್ಥಿತಿಯಲ್ಲಿ, ತಾಲೂಕು ಘಟಕದ ಅಧ್ಯಕ್ಷ ಪರಮೇಶ್ ಪಾಟೀಲ್ ನೇತೃತ್ವದಲ್ಲಿ ಶೀಘ್ರ ನಡೆಯಲಿದೆ. ಶಾಸಕರು, ಮುಖಂಡರು, ಬ್ಲಾಕ್ ಅಧ್ಯಕ್ಷರು ಒಳಗೊಂಡಂತೆ ಪದಾಧಿಕಾರಿಗಳ ಪಟ್ಟಿ ನೀಡುವುದು ತಡವಾದ ಹಿನ್ನೆಲೆಯಲ್ಲಿ ಪದಗ್ರಹಣ ಕಾರ್ಯಕ್ರಮ ವಿಳಂಬವಾಯಿತು. ಇದಕ್ಕಾಗಿ ತಾವು ಕ್ಷಮೆ ಕೋರುತ್ತೇನೆ ಎಂದರು.

ನನ್ನ ವ್ಯಾಪ್ತಿಗೆ ಮೈಸೂರು–ಕೊಡಗು ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರ ಬರಲಿದ್ದು, ಇಲ್ಲಿ ಘಟಕಗಳನ್ನು ಪ್ರಾರಂಭಿಸಿ ಅಧ್ಯಕ್ಷರನ್ನು ಆಯ್ಕೆ ಮಾಡಲಾಗಿದೆ. ಅಲ್ಲಿನ ಅಧ್ಯಕ್ಷರು ತಮ್ಮ ವ್ಯಾಪ್ತಿಯಲ್ಲಿ ಪದಗ್ರಹಣ ಕಾರ್ಯಕ್ರಮ ಹಮ್ಮಿಕೊಳ್ಳಲಿದ್ದಾರೆ ಎಂದರು.

ಕಾಂಗ್ರೆಸ್ ಪಕ್ಷ ನುಡಿದಂತೆ ನಡೆದಿದೆ. ಕೆಲಸ ಮಾಡದವರ ಬಗ್ಗೆ ಮಾಧ್ಯಮದಲ್ಲಿ ಪ್ರಚಾರ ಕೈಗೊಳ್ಳಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ ಅವರು ನಮ್ಮ ಸರ್ಕಾರ 5 ಗ್ಯಾರಂಟಿ ಯೋಜನೆಗಳ ಮೂಲಕ ಎಲ್ಲಾ ವರ್ಗದವರಿಗೂ ಅನುಕೂಲ ಕಲ್ಪಿಸಿದೆ. ಆ ಮೂಲಕ ಕಾಂಗ್ರೆಸ್‌ನ ಜನಪರ ಯೋಜನೆಗಳು ದೇಶದಲ್ಲೇ ಮಾದರಿಯಾಗಿವೆ ಎಂದರು.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಜನಪರ ಕಾರ್ಯಕ್ರಮಗಳಿಂದ ರಾಜ್ಯದಲ್ಲಿ ಹೆಚ್ಚು ಸ್ಥಾನ ಗೆಲ್ಲಲಿದೆ. ಚುನಾವಣೆ ಗೆಲುವಿಗೆ ಬೇಕಾದ ಪೂರಕ ಕೆಲಸವನ್ನು ಪದವೀಧರ ಘಟಕ ಮಾಡುವ ಮೂಲಕ ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರಕ್ಕೆ ಬರಲು ಶ್ರಮಿಸಬೇಕೆಂದು ಮನವಿ ಮಾಡಿದರು.

ತಾಲೂಕು ಅಧ್ಯಕ್ಷ ಪರಮೇಶ್ ಪಟೇಲ್ ಮಾತನಾಡಿ, ಮುಂಬರುವ ದಿನಗಳಲ್ಲಿ ಸಚಿವ ಮಹದೇವಪ್ಪ, ಮಾಜಿ ಶಾಸಕ ಡಾ.ಯತೀಂದ್ರ ಹಾಗೂ ಕೆಡಿಪಿ ಸದಸ್ಯ ಸುನೀಲ್ ಬೋಸ್ ಅವರ ಅನುಮತಿ ಪಡೆದು ಮೈಸೂರು ಮತ್ತು ಚಾಮರಾಜನಗರ ಕ್ಷೇತ್ರದ ಎಲ್ಲಾ ಪದವೀಧರರ ಘಟಕಗಳ ಪದಗ್ರಹಣ ಸಮಾರಂಭ'ವನ್ನು ತಿ.ನರಸೀಪುರದಲ್ಲಿ ಮಾಡಬೇಕೆಂಬ ಆಶಯ ಹೊಂದಿದ್ದು, ಇದಕ್ಕೆ ಎಲ್ಲರ ಸಹಕಾರ ಅವಶ್ಯಕ ಎಂದರು.

ವರುಣ ಕ್ಷೇತ್ರದ ಪದವೀಧರ ಕ್ಷೇತ್ರದ ಅಧ್ಯಕ್ಷ ಉಮೇಶ್ ಮಾತನಾಡಿ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕ್ಷೇತ್ರದ ಎಲ್ಲಾ ಪದವೀಧರರನ್ನು ಹಾಗೂ ಶಿಕ್ಷಕರನ್ನು ಒಗ್ಗೂಡಿಸಿ ಪಕ್ಷದ ಗೆಲುವಿಗೆ ಕಾರ್ಯಕ್ರಮ ರೂಪಿಸಲಾಗುವುದು ಎಂದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಮತ್ಸ್ಯಗಂಧ (ಕ)2 ಪ್ರದರ್ಶನಗಳು, ಪ್ರೇತ (ಕ) 2 ಪ್ರದರ್ಶನಗಳು	
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಕ್ರಾಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಮತ್ಸ್ಯಗಂಧ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಆರ್ಟಿಕಲ್ 370 (ಹಿಂ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಧೈರ್ಯಂ ಸರ್ವತ್ರ ಸಾಧನಂ	4 ಪ್ರದರ್ಶನಗಳು
ತಿಬ್ಬಾದೇವಿ	
ಲಾಲ್ ಸಲಾಮ್ (ತ)	4 ಪ್ರದರ್ಶನಗಳು
ಪ್ರಭಾ	
ಕ್ರಾಕ್(ಹಿಂ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಶಾಖಾಹಾರಿ (ಕ): ಬೆ.10.15ಕ್ಕೆ, ಕೆಟಿಎಂ (ಕ): ಮ.1.10ಕ್ಕೆ, ತೇರಿ ಬತೋನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಸಂ.4.15ಕ್ಕೆ, ಅಬ್ಬಬ್ಬ (ಕ): ರಾ.7.05ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ.
ಸ್ಕ್ರೀನ್ 2	ತುಂಡು (ಮ): ಬೆ.10.50ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಮ.1.40ಕ್ಕೆ, ರಾ.10.10ಕ್ಕೆ, ಕುಚ್ ಖಟ್ಟಾ ಹೋ ಜಾಯ್ (ಹಿಂ): ಸಂ.4.20ಕ್ಕೆ, ಪ್ರೇಮಲು (ಮ): ರಾ.7ಕ್ಕೆ.
ಸ್ಕ್ರೀನ್ 3	ಮಂಡ್ಯ ಹೈದ (ಕ): ಬೆ.10.15ಕ್ಕೆ, ಸೈರನ್ (ತ): ಮ.1.15ಕ್ಕೆ, ಮೇಡಮ್ ವೆಬ್ (ಇಂ): ಸಂ.4.35ಕ್ಕೆ, ರಾ.10ಕ್ಕೆ, ಭ್ರಮಯುಗಂ (ಮ): ರಾ.7.10ಕ್ಕೆ.
ಸ್ಕ್ರೀನ್ 4	ಸಾರಾಂಶ (ಕ): ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.1.05ಕ್ಕೆ, ಫೈಟರ್ (ಹಿಂ): ಸಂ.4.10ಕ್ಕೆ, ಒಂದು ಸರಳ ಪ್ರೇಮಕಥೆ (ಕ): ರಾ.7.20ಕ್ಕೆ, ಊರು ಪೇರು ಭೈರವಕೋಣ (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮೇಡಮ್ ವೆಬ್ (ಇಂ): ಮ.1.20ಕ್ಕೆ, ರಾ.7.05ಕ್ಕೆ, ರಾ.9.40ಕ್ಕೆ, ಊರು ಪೇರು ಭೈರವಕೋಣ (ತೆ): ಮ.3.55ಕ್ಕೆ.
ಸ್ಕ್ರೀನ್ 2	ಮೇಡಮ್ ವೆಬ್ (ಇಂ): ಬೆ.9.55ಕ್ಕೆ, ಸೈರನ್ 108 (ತ): ಸಂ.4ಕ್ಕೆ, ರಾ.10.30ಕ್ಕೆ, ಉಪಾಧ್ಯಕ್ಷ (ಕ): ರಾ.7.15ಕ್ಕೆ.
ಸ್ಕ್ರೀನ್ 3	ಸೈರನ್ 108 (ತ): ಮ.12.15ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಸಂ.4.10ಕ್ಕೆ, ಪ್ರೇಮಲು (ಮ): ಸಂ.6.45ಕ್ಕೆ, ತೇರಿ ಬತೋನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಒಂದು ಸರಳ ಪ್ರೇಮಕಥೆ (ಕ): ಬೆ.10.05ಕ್ಕೆ, ಸಂ.4.20ಕ್ಕೆ, ಅಬ್ಬಬ್ಬ (ಕ): ಮ.1.15ಕ್ಕೆ, ತುಂಡು (ಮ): ರಾ.7.30ಕ್ಕೆ, ಭ್ರಮಯುಗಂ (ಮ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೈಟರ್ (2ಡಿ)(ಹಿಂ): ಸಂ.6.35ಕ್ಕೆ, ತೇರಿ ಬತೋನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.9.30ಕ್ಕೆ, ಮ.3.55ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.3.25ಕ್ಕೆ, ಅನ್ವೇಷಿಪಿನ್ ಕಂಡೆತುಂ (ಮ): ಸಂ.4.05ಕ್ಕೆ, ಸಾರಾಂಶ (ಕ): ಮ.1.15ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಮ.12.15ಕ್ಕೆ, ಸೈರನ್ 108 (ತ): ಬೆ.10.10ಕ್ಕೆ, ಸಂ.4.20ಕ್ಕೆ, ರಾ.10.30ಕ್ಕೆ, ಮೇಡಮ್ ವೆಬ್ (ಇಂ): ಬೆ.10.50ಕ್ಕೆ, ಮ.1.25ಕ್ಕೆ, ಸಂ.4.35ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ, ಪ್ರೇಮಲು (ಮ): ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ, ಅಬ್ಬಬ್ಬ (ಕ): ಮ.2.55ಕ್ಕೆ, ವಾರನಂ ಆಯಿರಂ (ತ): ಸಂ.6ಕ್ಕೆ, ರವಿಕೆ ಪ್ರಸಂಗ (ಕ): ರಾ.9.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಂಡ್ಯದಲ್ಲಿ ನಿಗೂಢ ಶಬ್ದ: ಬೆಚ್ಚಿ ಬಿದ್ದ ಜನತೆ

ಮಂಡ್ಯ, ಫೆ.24– ಮಂಡ್ಯ ನಗರದಲ್ಲಿ ಶನಿವಾರ ಮಧ್ಯಾಹ್ನ ನಿಗೂಢ ಶಬ್ದ ಕೇಳಿ ಬಂದಿದ್ದು, ಭೂಮಿ ಕಂಪಿಸಿದ ಅನುಭವವಾಗಿದೆ. ಕೆಲವೆಡೆ ಮನೆ ಹಾಗೂ ಅಂಗಡಿ ಬಾಗಿಲುಗಳು ಅಲುಗಾಡಿವೆ ಎಂದು ವರದಿಯಾಗಿದೆ. ಇದರಿಂದಾಗಿ ಮಂಡ್ಯ ಜನತೆ ಬೆಚ್ಚಿ ಬಿದ್ದಿದ್ದಾರೆ. ಆದರೆ ಈ ನಿಗೂಢ ಶಬ್ದ ಎಲ್ಲಿಂದ ಬಂತು ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ.

ವಿದ್ಯುತ್ ಸ್ಪರ್ಶ: ಹಸು ಸಾವು

ನಂಜನಗೂಡು, ಫೆ.24– ವಿದ್ಯುತ್ ಸ್ಪರ್ಶದಿಂದ ಹಸು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಹೆಮ್ಮರಗಾಲ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಪುಟ್ಟಮ್ಮ ಅವರಿಗೆ ಸೇರಿದ ಹಸು ಬಲಿಯಾಗಿರುವುದು. ಪುಟ್ಟಮ್ಮ ಅವರು ಶನಿವಾರ ತಮ್ಮ ಜಮೀನಿನಲ್ಲಿ ಹಸು ಮೇಯಿಸುತ್ತಿದ್ದ ವೇಳೆ ಜಮೀನಿನ ಮಧ್ಯ ಹಾದು ಹೋಗಿದ್ದ ವಿದ್ಯುತ್ ತಂತಿ ಏಕಾಏಕಿ ತುಂಡಾಗಿ ಬಿದ್ದ ಪರಿಣಾಮ ವಿದ್ಯುತ್ ಸ್ಪರ್ಶವಾಗಿ ಹಸು ಸ್ಥಳದಲ್ಲೇ ಸಾವನ್ನಪ್ಪಿದೆ. ಅದೃಷ್ಟವಶಾತ್ ಅಲ್ಲೇ ಇದ್ದ ಪುಟ್ಟಮ್ಮ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ರೈತ ಸಂಘದ ಮುಖಂಡ ರವಿ ಮಾತನಾಡಿ, ಹೆಮ್ಮರಗಾಲ ಸೇರಿದಂತೆ ವಿವಿಧೆಡೆ ಜೋತು ಬಿದ್ದಿರುವ ವಿದ್ಯುತ್ ತಂತಿಗಳನ್ನು ಸರಿಪಡಿಸುವಂತೆ ಸೆಸ್ಕಾಂ ಅಧಿಕಾರಿಗಳಿಗೆ ಸಾಕಷ್ಟು ಮನವಿ ಬಾರಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಇದರಿಂದ ಸಾಕಷ್ಟು ಮೂಕ ಜೀವಿಗಳು ಬಲಿಯಾಗುತ್ತಿವೆ. ರೈತರು ಜೀವಭಯದಿಂದ ಜಮೀನಿನಲ್ಲಿ ಕೆಲಸ ಮಾಡುವಂತಾಗಿದೆ. ಹೀಗಾಗಿ ಹಸು ಕಳೆದುಕೊಂಡಿರುವ ಪುಟ್ಟಮ್ಮ ಅವರಿಗೆ ಸಂಬಂಧಪಟ್ಟ ಅಧಿಕಾರಿಗಳು ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಸರ್ಕಾರಿ ಕೆಲಸಕ್ಕೆ ಸೇರಿ ತಿಂಗಳಲ್ಲೇ ಹಾಸ್ಟೆಲ್ ವಾರ್ಡನ್ ಜೈಲುಪಾಲು

ಕೆಇಎ ಪ್ರಶ್ನೆಪತ್ರಿಕೆ ಲೀಕ್ ಮಾಡಲು 40 ಲಕ್ಷ ನೀಡಿದ ಆರೋಪ

ಕಲಬುರಗಿ: ಕೆಇಎ ಪರೀಕ್ಷಾ ಅಕ್ರಮ ಬಗೆದಷ್ಟು ಬಯಲಾಗುತ್ತಿದೆ. ಪ್ರಶ್ನೆಪತ್ರಿಕೆ ಸೋರಿಕೆ ಮಾಡಿದ ಹಾಗೂ ಪರೀಕ್ಷಾ ಮೇಲ್ವಿಚಾರಕರಿಗೆ ಹಣ ನೀಡಿದ ಆರೋಪದಡಿ ಹಾಸ್ಟೆಲ್ ವಾರ್ಡನ್ ಒಬ್ಬ ಕೆಲಸಕ್ಕೆ ಸೇರಿ ಒಂದೇ ತಿಂಗಳಲ್ಲಿ ಜೈಲುಪಾಲಾಗಿದ್ದಾನೆ.

ಸಮಾಜ ಕಲ್ಯಾಣ ಇಲಾಖೆಯ ಚಿಕ್ಕಬಳ್ಳಾಪುರದ ವೃತ್ತಿಪರ ಹಾಸ್ಟೆಲ್ ವಾರ್ಡನ್ ಬಸವರಾಜ್ ಯಾಳವಾರ್ ಬಂಧಿತ ಆರೋಪಿಯಾಗಿದ್ದಾನೆ. ಈತ ಪ್ರಶ್ನೆ ಪತ್ರಿಕೆ ಲೀಕ್ ಮಾಡಲು ಪ್ರಿನ್ಸಿಪಾಲ್‌ಗೆ 40 ಲಕ್ಷ ರೂ. ಹಣ ನೀಡಿದ್ದ ಎಂದು ಸಿಐಡಿ ತನಿಖೆ ವೇಳೆ ತಿಳಿದು ಬಂದಿದೆ. ಈತನ ವಿರುದ್ಧ ಕಲಬುರಗಿಯ ಅಶೋಕ್ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣ ದಾಖಲಾಗುತ್ತಿದ್ದಂತೆ ಈತ ತಲೆ ಮರೆಸಿಕೊಂಡಿದ್ದ. ಇದೀಗ ಸಿಐಡಿ ಪೊಲೀಸರು ಈತನನ್ನು ಬಂಧಿಸಿದ್ದಾರೆ. ಆರೋಪಿ ಬಸವರಾಜ್ ಬಂಧನಕ್ಕೆ ಆತ ಓಡಿದ ಪ್ರದೇಶಗಳಲ್ಲಿ, ಕಲಬುರಗಿ ವಿವಿ, ಸಿಂದಗಿ ಹಾಗೂ ಬೆಂಗಳೂರಲ್ಲಿ ಪೊಲೀಸರು ಹುಡುಕಾಟ ನಡೆಸಿದ್ದರು. ಕೊನೆಗೆ ಚಿಕ್ಕಬಳ್ಳಾಪುರದಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ವಾರ್ಡನ್ ಆಗಿದ್ದಾನೆ ಎಂಬ ಸುಳಿವಿನ ಮೇಲೆ ಬಂಧಿಸಲಾಗಿದೆ. ಪ್ರಕರಣದಲ್ಲಿ ಬಸವರಾಜ್ 15ನೇ ಆರೋಪಿಯಾಗಿದ್ದಾನೆ. ಈತನ ವಿರುದ್ಧ ಸಿಐಡಿ ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದಾರೆ. ಇಂಗ್ಲಿಷ್‌ನಲ್ಲಿ ಎಂ.ಎ, ಬಿ.ಇಡಿ ಪದವೀಧರನಾಗಿರುವ ಬಸವರಾಜ್ ಯಾಳವಾರ್ ಜನವರಿ 19ರಂದು ವಾರ್ಡನ್ ಆಗಿ ಕೆಲಸಕ್ಕೆ ಸೇರಿದ್ದ ಎಂದು ತಿಳಿದು ಬಂದಿದೆ.

ಸರ್ವ ಸದಸ್ಯರಲ್ಲಿ ಮನವಿ

ಮೈಸೂರು ನಗರದ ಹನ್ನೊಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ (ರಿ.) ಸಂಘದ ವಿರುದ್ಧ ಒ.ಎಸ್. ನಂ. 364/2024ರ ಪ್ರಕರಣ ದಾಖಲಾಗಿರುವುದರಿಂದ ಸಂಘದ ಮೂಲಕ 25-02-2024 ರಂದು ಕರೆಯಲಾಗಿದ್ದ ವಿಶೇಷ ಮಹಾಸಭೆಯನ್ನು ಅನಿವಾರ್ಯ ಕಾರಣಗಳಿಂದ ಮುಂದೂಡಿರುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಾಗಿದೆ.

ಸಹಿ/- ಎಲ್.ಶಶಿಧರ್, ಅಧ್ಯಕ್ಷರು

ಮೈಸೂರು ಮಿತ್ರ 44
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು